ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 3.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2:23 ಗಂಟೆಗೆ ಮುಕ್ತಾಯಗೊಂಡು, ಮತ್ತೆ ಮಧ್ಯಾಹ್ನ 3.30 ಗಂಟೆಗೆ ಸೇರಲು ನಿಶ್ಚಯಿಸಿತು)

ಸದನವು ಪುನಃ ಮಧ್ಯಾಹ್ನ 3 ಗಂಟೆ 45 ನಿಮಿಷಕ್ಕೆ ಸಮಾವೇಶಗೊಂಡಿತು

ಮಾನ್ಯ ಸಭಾಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಪೀಠವನ್ನಲಂಕರಿಸಿದ್ದರು

5. ಪ್ರಕಟಣೆ

ವಿಷಯ: ದಿನಾಂಕ 10–06–2008 ರಂದು ಶ್ರೀ ಸಿ.ಪಿ. ಯೋಗೇಶ್ವರ್, ಶಾಸಕರು, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಇವರನ್ನು ಹಾಗೂ ಅವರ ಬೆಂಬಲಿಗರನ್ನು ಪ್ರತಿಭಟಣಾ ರ್‍ಯಾಲಿಯಲ್ಲಿ ಬಂದಿಸಿ ಬಿಡುಗಡೆ ಮಾಡಿರುವ ಬಗ್ಗೆ

ಅಧ್ಯಕ್ಷರು: ವಿಧಾನ ಸಭಾ ಸದಸ್ಯರಾದ ಶ್ರೀ ಸಿ.ಪಿ. ಯೋಗೀಶ್ವರ್‌ರವರು ದಿನಾಂಕ: 10–06–2008 ರಂದು ತಮ್ಮ ಬೆಂಬಲಿಗರೊಂದಿಗೆ ಸರ್ಕಾರದಿಂದ ರೈತರಿಗೆ ಸರಿಯಾಗಿ ರಸಗೊಬ್ಬರವನ್ನು ವಿತರಣೆ ಮಾಡದಿರುವ ವಿಷಯದಲ್ಲಿ ಹಾಗೂ ಹಾವೇರಿ ಜಿಲ್ಲೆಯಲ್ಲಿ ಪ್ರತಿಭಟನಾ ನಿರತ ರೈತರ ಮೇಲೆ ಪೊಲೀಸ್ ಗೋಲಿಬಾರ್ ಅನ್ನು ಖಂಡಿಸಿ ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ ರಸ್ತೆ ತಡೆ ಹಾಗೂ ಪ್ರತಿಭಟನೆ ನಡೆಸಿದ್ದರಿಂದ ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರ ಓಡಾಟಕ್ಕೆ ತೊಂದರೆಯುಂಟಾದ ಹಿನ್ನಲೆಯಲ್ಲಿ ಸದರಿಯವರನ್ನು ಹಾಗೂ 50 ಜನ ಅವರ ಬೆಂಬಲಿಗರನ್ನು ಕರ್ನಾಟಕ ಪೊಲೀಸ್ ಕಾಯ್ದೆ ಕಲಂ 71ರ ಮೇರೆಗೆ ರಾತ್ರಿ 8 ಗಂಟೆಗೆ ಬಂಧಿಸಿ, ಅದೇ ದಿನ ರಾತ್ರಿ 8.15 ಗಂಟೆಗೆ ಬಿಡುಗಡೆ ಮಾಡಲಾಗಿರುತ್ತದೆಂದು ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ ಅವರು ತಿಳಿಸಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರಿಗೆ ತಿಳಿಯಪಡಿಸಲಾಗಿದೆ.

6. ನಿಯಮ 69ರ ಮೇರೆಗೆ ಮುಂದುವರೆದ ಚರ್ಚೆ

ವಿಷಯ: ರಾಜ್ಯದಲ್ಲಿ ಉಂಟಾಗಿರುವ ರಸಗೊಬ್ಬರದ ತೀವ್ರ ಅಭಾವದ ಬಗ್ಗೆ

ಶ್ರೀ ಟಿ.ಬಿ. ಜಯಚಂದ್ರ (ಸಿರಾ) : ಇವತ್ತು ಬೀಜ ಮತ್ತು ರಸಗೊಬ್ಬರವನ್ನು ರೈತರಿಗೆ ಸರಬರಾಜು ಮಾಡುವಲ್ಲಿ ವಿಳಂಬವಾಯಿತೆನ್ನುವ ಕಾರಣಕ್ಕೋಸ್ಕರ ಏನೆಲ್ಲ

ಅವಾಂತರಗಳು ನಡೆದು ಹೋದವು ಎನ್ನತಕ್ಕಂಥದ್ದು ನಿಮಗೆಲ್ಲರಿಗೂ ತಿಳಿದಿರುವ ವಿಚಾರ. ಇವತ್ತು ನಿಲುವಳಿ ಸೂಚನೆಯನ್ನು ನಾವು ತರಬೇಕಾದಾಗ ನಾನು ಮತ್ತೆ ಅದನ್ನು ಪ್ರಸ್ತಾಪ ಮಾಡುವುದಿಲ್ಲ. ನಿಯಮ 60ರ ಅಡಿಯಲ್ಲಿ ತಾವು ಒಪ್ಪಿಗೆಯನ್ನು ಕೊಟ್ಟಿದ್ದರೆ ಇಡೀ ರಾಷ್ಟ್ರದ ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ಬರುತ್ತಿತ್ತು, ನಮ್ಮ ನೋವುಗಳು ಇಡೀ ದೇಶಕ್ಕೆ ಗೊತ್ತಾಗತಕ್ಕಂಥ ಸಂದರ್ಭವಿತ್ತು. ಸರ್ಕಾರದ ಕಳಕಳಿ, ಸಭೆಯ ಕಳಕಳಿ ಇಡೀ ದೇಶಕ್ಕೆ ಗೊತ್ತಾಗುವ ವಾತಾವರಣವಿತ್ತ. ಮುಖ್ಯವಾಗಿ, ಆಡಳಿತ ಮಾಡುತ್ತಿರುವ ಪಕ್ಷದವರು ಇಂಥ ನಿಲುವಳಿ ಸೂಚನೆ ಬಂದಾಗ ಯಾವ ರೀತಿಯಾಗಿ ನಿಲುವನ್ನು ತೆಗೆದುಕೊಂಡರೆನ್ನುವುದು ಬಹಳ ಮುಖ್ಯವಾಗುತ್ತದೆ. ತಾಂತ್ರಿಕವಾಗಿರತಕ್ಕಂಥ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದರ ಜೊತೆಗೆ ನೈಜವಾಗಿರುವ ವಿಚಾರಗಳನ್ನು ಪರಿಗಣಿಸಿ, ಒಪ್ಪಿಗೆಯನ್ನು ಕೊಡಬೇಕಾಗಿತ್ತು. ಎನ್ನುವುದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಮುಖ್ಯಮಂತ್ರಿಗಳು ರೈತ ನಾಯಕರು, ಅವರು ಪ್ರಮಾಣ ವಚನ ಸ್ವೀಕಾರ ಮಾಡಬೇಕಾದಾಗ ಸಂವಿಧಾನಕ್ಕೆ ವಿರೋಧವಾಗಿರತಕ್ಕಂಥದ್ದು, ರೈತರ ಹೆಸರಿನಲ್ಲಿ ಪ್ರಮಾನ ವಚನ ಸ್ವೀಕರಿಸುತ್ತಾರೆ. ಮಾರನೆಯ ದಿವಸ ಪತ್ರಿಕೆಯಲ್ಲಿ ಬಹಳಷ್ಟು ಜನರ ವಿಶ್ಲೇಷಣೆ ಬರುತ್ತದೆ. ಮುಖ್ಯಮಂತ್ರಿಗಳು ಆ ರೀತಿಯಾಗಿ ರೈತರ ಹೆಸರಿನಲ್ಲಿ ಪ್ರಮಾಣ ವಚನ ಮಾಡಿರುವುದು ಅದು ನಿಯಮಾವಳಿಗಳು, ಸಂವಿಧಾನ ಬದ್ಧವಾಗಿರತಕ್ಕಂಥದ್ದಲ್ಲ ಎನ್ನುವ ವಿಚಾರ ಪ್ರಸ್ತಾಪವಾಯಿತು. ಆದರೆ, Koul and Shekdhar ನಲ್ಲಿ ಬಂದಂಥ ಕೆಲವು comments ಅನ್ನೇ ಆಧಾರವಾಗಿಟ್ಟುಕೊಂಡು ಅದಕ್ಕೆ ಒಪ್ಪಿಗೆ ಕೊಡಲಿಲ್ಲವೆಂದರೆ, ನನಗನಿಸುತ್ತದೆ, ನೀವೆಲ್ಲೋ ಒಂದು ಕಡೆಗೆ ರೈತರ ಕಳಕಳಿಯನ್ನು ಈ ವಿಚಾರದಲ್ಲಿ ತೋರಿಸಬಹುದಾಗಿತ್ತೆನ್ನುವುದು ನನ್ನ ಅಭಿಪ್ರಾಯ. ಮುಖ್ಯವಾಗಿರುವಂಥದ್ದು ಯಾವುದೆಂದರೆ, ಬೀಜ ಮತ್ತು ಗೊಬ್ಬರ. ತಾವು ಅಧಿಕಾರಕ್ಕೆ ಬಂದು 22 ದಿವಸಗಳಾಯಿತು. ಮೇನಲ್ಲಿ ತಾವು ಅಧಿಕಾರ ಸ್ವೀಕಾರ ಮಾಡಿದಿರಿ. ಅದಕ್ಕೆ ಹಿಂದೆ ಬೀಜ, ಗೊಬ್ಬರದ ವಿಚಾರದಲ್ಲಿ ಯಾವ ರೀತಿಯಾಗಿ ನಡವಳಿಕೆ ನಡೆಯಿತು ಎನ್ನುವುದೂ ಕೂಡ ಬಹಳ ಮುಖ್ಯ. ಬೀಜಗಳ ವಿಚಾರದಲ್ಲಿ ಅದು ನಿರಂತರವಾಗಿರುವ ಪ್ರಕ್ರಿಯೆ. ಯಾವ ಸರ್ಕಾರವಿರಲಿ, ಯಾರು ಇರಲಿ ಯಾರು ಇಲ್ಲದಿರಲಿ ಅದು ನಿರಂತರವಾಗಿ ನಡೆಯಬೇಕಾಗುತ್ತದೆ. ಇವತ್ತೂ ಕೂಡ ರೈತರಿಗೆ ಬೀಜಗಳು ಸಿಗುತ್ತಿಲ್ಲ. ಸಾಕಷ್ಟು ರೀತಿಯಾದ ನ್ಯೂನತೆಗಳಿವೆ. ಲೋಪದೋಷಗಳಿವೆ. ಏಕಾಯಿತು? ಯಾರಿಂದಾಯಿತು? ಬೀಜವನ್ನು ಕೊಡುವುದರಲ್ಲಿ ಕೇಂದ್ರ ಸರ್ಕಾರದ ಹಸ್ತಕ್ಷೇಪವಿತ್ತೇ? ಅಥವಾ ಯಾರ ಹಸ್ತಕ್ಷೇಪವಿತ್ತು? ಏಕೆ ಈ ರೀತಿಯಾಯಿತು ಎಂಬುದು ಕೂಡ ಬಹಳ

ಮುಖ್ಯವಾದ ವಿಚಾರ. ಇದರ ಬಗ್ಗೆ ಕೇವಲ ರಾಜಕೀಯ ದೃಷ್ಟಿಯಿಂದ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ರೈತರ ಸಮಸ್ಯೆಗಳ ಬಗ್ಗೆ ತಾವು ಅವಕಾಶ ಕೊಟ್ಟ ಸಂದರ್ಭದಲ್ಲಿ ನಾನು ಅನೇಕ ರೀತಿಯಾದ ಸಲಹೆಗಳನ್ನು ಕೊಡಬೇಕಾಗುತ್ತದೆ. ರೈತರ ಸಮಸ್ಯೆಗೆ ಸ್ಪಂದಿಸಬೇಕಾಗುತ್ತದೆ. ವಿರೋಧ ಪಕ್ಷವಾಗಿ ನಾವು ಸಲಹೆ ಸೂಚನೆಗಳನ್ನು ಕೊಡಬೇಕಾಗುತ್ತದೆ. ಸರ್ಕಾರದ ಗಮನಕ್ಕೆ ನಾವು ತರಬೇಕಾಗುತ್ತದೆ. ಇವತ್ತು ಬಿತ್ತನೆ ಬೀಜ ಎಲ್ಲಾ ಕಡೆ ಖಾಸಗಿಯವರ ಕೈಯಲ್ಲಿದೆ. ಖಾಸಗಿಯವರು ಎಲ್ಲಾ ತರಹದ ಬೀಜಗಳನ್ನು ಸರಬರಾಜು ಮಾಡುತ್ತಿದ್ದಾರೆ. ಸರ್ಕಾರದ ಸ್ವಾಮ್ಯದಲ್ಲಿ ಕೆಲವೇ ಬೀಜಗಳು ವಿತರಣೆಯಾಗುತ್ತಿದೆ. ರಾಗಿ ಇರಬಹುದು. ಜೋಳವಲ್ಲ, ಮೆಕ್ಕೆ ಜೋಳವಲ್ಲ, ಶೇಂಗಾ ಇರಬಹುದು. ಈ ರೀತಿಯಾದ ಕೆಲವೇ ಬೀಜಗಳನ್ನು ಕೊಡುವುದು ಇದೆ. ನಮಗೆ ಒಂದು ವರ್ಷಕ್ಕೆ ಸುಮಾರು 5 ಲಕ್ಷ ಟನ್‌ನಷ್ಟು ಪ್ರಮಾಣೀಕರಿಸಿದ ಬಿತ್ತನೆ ಬೀಜ ಬೇಕಾಗುತ್ತದೆ. ಆದರೆ, ಆ ಬಿತ್ತನೆ ಬೀಜವನ್ನು ನಾವು ಶೇಖರಿಸಿಡಬೇಕಾದರೆ ಅದಕ್ಕೆ ಸುಮಾರು 6, 8 ತಿಂಗಳಿನಿಂದಲೂ ನಿರಂತರವಾಗಿ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಇಷ್ಟೆಲ್ಲಾ ಇದ್ದಾಗ್ಯೂ ಕೂಡ, ಎಲ್ಲಾ ರೀತಿಯಲ್ಲೂ planning ಆಗಿದ್ದರೂ ಕೂಡ ಬಿತ್ತನೆ ಬೀಜದ ಕೊರತೆ ಇದೆ ಎಂದರೆ ಏಕೆ ಎನ್ನುವ ಮಾತನ್ನು ಕೇಳಬೇಕಾಗುತ್ತದೆ. ಬಹಶಃ ಎಲ್ಲೋ ಒಂದು ಕಡೆ ನಮಗೆ ಬಿತ್ತನೆ ಬೀಜವನ್ನು ಸರಬರಾಜು ಮಾಡಬೇಕಾಗಿರತಕ್ಕಂಥದ್ದು, ಆ production activity ಯಲ್ಲಿ involve ಆಗಿರತಕ್ಕಂಥವರು ಇವತ್ತು seeds corporation , KOC ಇರಬಹುದು, ಎಲ್ಲೋ ಒಂದು ಕಡೆಗೆ ಅವರ ನೋವುಗಳೇನು ಎನ್ನುವುದನ್ನು ನೀವು ಕೇಳಿ, ಅವರಿಗೇನಾದರೂ ಕೂಡ ಒಂದು ರೀತಿಯಾಗಿ soft loan ಕೊಟ್ಟಿದ್ದರೆ ಬಹಶಃ ಈ ರೀತಿಯ ತೊಂದರೆ ಬರುವುದಕ್ಕೆ ಸಾಧ್ಯವಿರಲಿಲ್ಲ. ನಾನು ಒಂದು ಉದಾಹರಣೆ ಹೇಳುತ್ತೇನೆ. ನಾನು ಕೃಷಿ ಸಚಿವನಾಗಿದ್ದ ಸಂದರ್ಭದಲ್ಲಿ ಏಕಾಏಕಿ ಈ ರೀತಿಯಾಗಿ ಶೇಂಗಾ ಬೀಜಕ್ಕೆ ತೊಂದರೆ ಸಂದರ್ಭದಲ್ಲಿ ನಾವು ಅನಿವಾರ್ಯವಾಗಿ ಗುಜರಾತ್‌ಗೆ ಹೋಗಿ ಅಲ್ಲಿ ಪ್ರಮಾಣೀಕರಿಸಿದ ಬಿತ್ತನೆ ಬೀಜಗಳನ್ನು ಮತ್ತು truthful seeds ತಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ನಾವು ಯಶಸ್ವಿ ಕೂಡ ಆಗಿದ್ದೇವೆ. ಅಂಥದ್ದೇ ಒಂದು ಪ್ರಯತ್ನ ಇವತ್ತೇಕೆ ಆಗುತ್ತಿಲ್ಲವೆಂದು ನಾನು ಕೇಳಬಹುದು. ನಾನು ಶೇಂಗಾ ಬೆಳೆಯತಕ್ಕಂಥ ಪ್ರದೇಶದಿಂದ ಬಂದವನು. ತುಮಕೂರು ಜಿಲ್ಲೆ, ಕೋಲಾರ ಈ ಭಾಗದಲ್ಲಿ ಶೇಂಗಾ ಬೀಜ ಸಿಕ್ಕಾಪಟ್ಟೆ ಬೇಕಾಗುತ್ತದೆ. ನಮಗೆ ಇಲ್ಲಿಯವರೆಗೆ ಬೇಡಿಕೆ ಬಂದಿರತಕ್ಕಂಥದ್ದು ಕೇವಲ 15–20% ಬಿತ್ತನೆ ಬೀಜ ಮಾತ್ರ. ಇನ್ನೂ ಬಿತ್ತನೆ ಬೀಜ ಬರುತ್ತಿಲ್ಲ. ಏಕೆ ಬರುತ್ತಿಲ್ಲವೆನ್ನುವ ವಿಚಾರವನ್ನು

ಉತ್ತರ ಕೊಡುವ ಸಂದರ್ಭದಲ್ಲಿ ಸರ್ಕಾರ ಹೇಳಬೇಕಾಗುತ್ತದೆ. ಬಿತ್ತನೆ ಬೀಜ ಸರಬರಾಜು ಮಾಡುವುದರಲ್ಲಿ ಯಾರ ಹಸ್ತಕ್ಷೇಪವೂ ಇಲ್ಲ. ಯಾರ ನಿರ್ಲಕ್ಷವಾಗಿದೆ. ಎಂಬುದನ್ನು ಅಲ್ಲಿ ಕಂಡುಹಿಡಿಯಬೇಕಾಗುತ್ತದೆ. ಯಾರ ನಿರ್ಲಕ್ಷದಿಂದಾಗಿ ಈ ತರಹದ ತೊಂದರೆಗೆ ಯಾರು ಕಾರಣರಾದರೆನ್ನುವುದನ್ನು ಪತ್ತೆ ಹಚ್ಚಿ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಗೊಬ್ಬರ, ಬಿತ್ತನೆ ಬೀಜಕ್ಕೋಸ್ಕರ ರೈತ ಬೀದಿಗೆ ಬರುತ್ತಾನೆ. ಬೀದಿಗೆ ಬಂದಂಥ ಸಂದರ್ಭದಲ್ಲಿ ಅವನಿಗೆ ಬಿತ್ತನೆ ಬೀಜ ಸಿಗದಿದ್ದಾಗ ಒಂದು ಕಡೆ ಮಳೆ ಬಂತು. ಈ ಸಾರಿ ವಿಶೇಷವೆನೆಂದರೆ, ಜನವರಿ, ಫೆಬ್ರವರಿ ತಿಂಗಳಲ್ಲೇ ಮಳೆ ಬಂತು. ಆಗಲೇ ರೈತ ಭೂಮಿಯನ್ನು ಹಸನು ಮಾಡಿಕೊಂಡಿದ್ದ. ಆಗಲೇ ಸರ್ಕಾರ, ಅಧಿಕಾರಿಗಳೂ ಎಚ್ಚೆತ್ತುಕೊಳ್ಳಬೇಕಾಗಿತ್ತು. ನಮಗೆ ಈ ರೀತಿಯಾಗಿ early rains ಬರುತ್ತಿದೆ., monsoon ಬರುತ್ತಿದೆ, ನಾವು ಬಿತ್ತನೆ ಬೀಜಗಳಿಗೆ ಕೊರತೆಯಾಗಬಹುದು ಎಂಬುದನ್ನು ಊಹೆ ಮಾಡಿ ಅವತ್ತೇ ತಯಾರು ಮಾಡಬಹುದಾಗಿತ್ತು. ಈಗ ನಾವು ಮೆ-ಜೂನ್ ತಿಂಗಳಿಗೆ ಬಂದರೂ ಕೂಡ ಬಿತ್ತನೆ ಬೀಜ supply ಆಗುತ್ತಿಲ್ಲವೆನ್ನುವುದನ್ನು ಹೇಳುವುದಾದರೆ ಇದು ಯಾರಿಂದಾಯಿತು? ಇದಕ್ಕೆ ಕಾರಣರಾರು ಎನ್ನುವುದನ್ನು ಸರ್ಕಾರ ಹೇಳಬೇಕಾಗುತ್ತದೆ. ರೈತ ಬೀದಿಗೆ ಬಂದಂಥ ಸಂದರ್ಭದಲ್ಲಿ ಅವನ ಎದೆಗೆ ಗುಂಡಿಟ್ಟು ಹೊಡೆಯುವಂಥ ಕೆಲಸವಾಯಿತು. ಗುಂಡಿಟ್ಟು ಹೊಡೆದ ಸಂದರ್ಭದಲ್ಲಿ ವಿರೋಧ ಪಕ್ಷದವರೆಲ್ಲಾ judicial Enquiry ಆಗಬೇಕೆಂದು ಒತ್ತಾಯ ಮಾಡಿದರು. ತಾವು ತತ್‌ಕ್ಷಣ Judicial Enquiry ಮಾಡುವುದಕ್ಕೆ ಒಪ್ಪಿದ್ದರೆ ನಿಮ್ಮ ರೈತರ ಕಳಕಳಿ ಏನು ಎನ್ನುವುದು ಪ್ರದರ್ಶನವಾಗುತ್ತಿತ್ತು. ರೈತರಿಗೂ ಕೂಡ ಅದರ ಅರಿವಾಗುತ್ತಿತ್ತು. ತಾವೇನು ಮಾಡಿದಿರಿ? ತಾವು Regional Commissioner ರವರಿಂದ Enquiry ಮಾಡಿಸುವುದಕ್ಕೆ ಪ್ರಯತ್ನಪಟ್ಟಿರಿ ಆ enquiry ಮಾಡಿಸುವುದಕ್ಕೆ ಪ್ರಯತ್ನಪಟ್ಟು ವಿರೋಧ ಪಕ್ಷಗಳು ಅತಿಯಾದ ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ನೀವು ಅಂತಿಮವಾಗಿ Judicial Enquiry ಮಾಡಿಸುವುದಕ್ಕೆ ಒಪ್ಪಿದಿರಿ. ತಾವು ಸ್ವ ಇಚ್ಚೆಯಾಗಿ ಮೊದಲೇ ಒಪ್ಪಿದರೆ ಬಹಶಃ ಅದು ಒಳ್ಳೆಯದಿತ್ತು. ಎನ್ನುವುದರ ಜೊತೆಗೆ ಇವತ್ತು ನಿಮ್ಮ Regional Commissioner ರವರು ಏನು ವರದಿ ಕೊಟ್ಟರು? ತಪ್ಪು ಯಾರಿಂದಾಯಿತು? ಅವರು ಕೊಟ್ಟ ವರದಿಯ ಮೇಲೇನಾದರೂ Judicial Enquiry ಮಾಡಿಸಿದ್ದೀರಾ? ಅಥವಾ ನಿಜವಾಗಿ, ಪ್ರಾಮಾಣಿಕವಾಗಿ ರೈತರಿಗೆ ಸ್ಪಂದಿಸಬೇಕು, ನಿಜವಾಗಿ ಸಾವು ಯಾರಿಂದಾಯಿತು? ಯಾವ ರೀತಿಯಾಯಿತು? ಅನ್ನುವುದನ್ನು ಅರಿಯುವುದಕ್ಕೋಸ್ಕರ ಕೊಟ್ಟರೋ ಅನ್ನುವುದು ನಮಗಿನ್ನೂ ಕೂಡ ಅನುಮಾನವಾಗಿಯೇ

ಉಳಿದಿದೆ. ಬಿತ್ತನೆ ಬೀಜವನ್ನು ಈ ರೀತಿಯಾಗಿ ಸರಬರಾಜು ಮಾಡಿದರೆ ಎಲ್ಲೋ ಒಂದು ರೀತಿಯಲ್ಲಿ ನಿರ್ವಹಣೆ ಮಾಡತಕ್ಕಂಥದ್ದರಲ್ಲಿ ಆಗಿರುವ ಲೋಪದೋಷದಿಂದಾಗಿ ಸರ್ಕಾರ ದೊಡ್ಡ ತಪ್ಪನ್ನು ಮಾಡಿದೆ ಎಂದು ಹೇಳಬೇಕಾಗುತ್ತದೆ. ಗೊಬ್ಬರದ ವಿಚಾರ ಬಂದ ತಕ್ಷಣವೇ ನಾವು ಬೆಟ್ಟು ಮಾಡಿ ತೋರಿಸುತ್ತಿದ್ದೇವೆ. ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ನೋಡಿ ಬಂದರು. ಸೌಜನ್ಯದ ಭೇಟಿ ಜೊತೆಗೆ ಗೊಬ್ಬರದ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೇನೆಂದು ಹೇಳಿದರು. ತಮ್ಮ Cabinet ಸಚಿವರೆಲ್ಲರನ್ನೂ ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ ಹಿನ್ನೆಲೆಯಲ್ಲಿ ನಮಗೊಂದು satisfaction ಇದೆ. ನಮಗೆ ಗೊಬ್ಬರ ಸರಬರಾಜಾಗುತ್ತದೆ, ಯಾವುದೇ ತೊಂದರೆಯಿಲ್ಲ ಎನ್ನುವ ಮಾತನ್ನು ಕೂಡ ಹೇಳಿದರು. ಜೊತೆಗೆ, ಕೇಂದ್ರದಿಂದ ಬಂದ ಕಾರ್ಯದರ್ಶಿಯವರು ಬಂದು review ಮಾಡಿದ ಸಂದರ್ಭದಲ್ಲಿ ಸಮಾಧಾನ ವ್ಯಕ್ತಪಡಿಸಿದರು. ರೈತರಿಗೆಲ್ಲೋ ಒಂದು ಕಡೆ ಸಮಾಧಾನವಾಯಿತು. ಗೊಬ್ಬರದಲ್ಲಿ ಯಾವುದೇ ರೀತಿ ತೊಂದರೆಯಾಗುವುದಿಲ್ಲ, ಇವತ್ತು ನಮಗೆ ಸರಬರಾಜಾಗುತ್ತದೆ ಎನ್ನುವ ವಿಶ್ವಾಸವನ್ನು ಮೂಡಿಸುವ ರೀತಿಯಲ್ಲಿ ತಾವು ಮಾಡಿದಿರಿ. ಆದರೆ, ಏನಾಯಿತು? ಮಾತೆತ್ತಿದರೆ ಎಲ್ಲರೂ ಮಾತನಾಡುವುದೇನೆಂದರೆ, ಇವತ್ತು ರಾಜ್ಯಪಾಲರ ಆಡಳಿತದಲ್ಲಾಗಿದೆ, ದುರ್ವ್ಯವಹಾರವಾಗಿದೆ, ಅಧಿಕಾರಿಗಳು ಕೆಲಸ ಮಾಡಿಲ್ಲವೆನ್ನುವ ಮಾತನ್ನು ಹೇಳುತ್ತಾರೆ. ರಾಜ್ಯಪಾಲರ ಆಡಳಿತವಿದ್ದದ್ದು ಏಪ್ರಿಲ್–ಮೇ ವರೆಗೆ. ಅಲ್ಲಿಯವರೆಗೂ ಕೂಡ ರಸಗೊಬ್ಬರ ಸರಬರಾಜಾಗಿರುವುದರಲ್ಲಿ ಯಾವುದೇ ರೀತಿಯ ಕೊರತೆಯನ್ನು ಕಾಣುವುದಕ್ಕೆ ಸಾದ್ಯವಿಲ್ಲ. ಅವರಲ್ಲಿ ಆಗ ಬೇಡಿಕೆನುಗುಣವಾಗಿ ಗೊಬ್ಬರ ಇನ್ನೂ ಹೆಚ್ಚಿಗೆ ಬಂದಿದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ತಾವು ಮೇ ತಿಂಗಳ ಕೊನೆಯಲ್ಲಿ ಅಧಿಕಾರ ವಹಿಸಿಕೊಂಡಿದ್ದೀರಿ. ಜೂನ್ ತಿಂಗಳಲ್ಲಿ ತೊಂದರೆ ಬಂತು. ನೀವು ಅದಕ್ಕೆ ರಾಜ್ಯಪಾಲರನ್ನು ದೂಷಿಸಬೇಕಾದ್ದಿಲ್ಲ. ಕೇಂದ್ರ ಸರ್ಕಾರವನ್ನೂ ದೂಷಣೆ ಮಾಡುವುದಕ್ಕಾಗುವುದಿಲ್ಲ. ಇದು day to day management. ನಿಮಗೆಲ್ಲಿ ಡಿಮಾಂಡ್ ಇದೆ, ಎಲ್ಲಿ ಯಾವ ತರಹ ಗೊಬ್ಬರ ಬೇಕಾಗುತ್ತದೆ., complexes ಬೇಕಾಗುತ್ತದೆ. ಯೂರಿಯಾ ಬೇಕಾಗುತ್ತದೆ ಎನ್ನುವುದನ್ನು daily monitor ಮಾಡಬೇಕಾಗುತ್ತದೆ. Company ಗಳ ಜೊತೆಗೆ ಚರ್ಚೆ ಮಾಡಿ ಗೊಬ್ಬರವನ್ನು ಸರಬರಾಜು ಮಾಡಬೇಕಾಗುತ್ತದೆ. ಮುಂಗಾರು ಮಳೆ ಯಾವ ಭಾಗದಲ್ಲಿ ಆಗುತ್ತದೆ? ಇದು ಕೇವಲ ಮೈಸೂರು, ಚಾಮರಾಜ ನಗರ ಮತ್ತು ಕೆಲವು ಭಾಗಗಳಲ್ಲಿ ಆಗುತ್ತಿದೆ. ಬೆಳಗಾಂ, ಶಿವಮೊಗ್ಗ ಈ ಭಾಗದಲ್ಲಾಗುತ್ತಿದೆ. ಅಂಥ ಭಾಗದಲ್ಲಿ ಬೇಕಾಗಿರುವ ಗೊಬ್ಬರವನ್ನು

ಕೂಡಿಸುವ ಕೆಲಸವನ್ನು ಮಾಡಿದ್ದರೆ ಏನೂ ತೊಂದರೆಯಾಗುವುದಕ್ಕೆ ಸಾಧ್ಯವಿರಲಿಲ್ಲ. ಏನಾಯಿತು? ಇವರು ಯಾವ ರೀತಿಯಾ planning ಮಾಡಿದ್ದರು? ಒಂದೊಂದು ಜಿಲ್ಲೆಗೆ ಅಲೋಕೇಷನ್ ಏನಾಯಿತು? ಕೇಂದ್ರ ಸರ್ಕಾರದ ವತಿಯಿಂದ kharif conference ಅನ್ನು March 15ನೇ ತಾರೀಖು ಕರೆಯುತ್ತಾರೆ. ಆಗ ಯಾವ್ಯಾವ ಜಿಲ್ಲೆ, ತಾಲ್ಲೂಕಿಗೆ ಎಷ್ಟು ಗೊಬ್ಬರ ಬೇಕೆನ್ನುವುದು ತೀರ್ಮಾನವಾಗುತ್ತದೆ. ಆ ತೀರ್ಮಾನದಂತೆ, ಬಂದಂಥ ಗೊಬ್ಬರವನ್ನು ಅವರೇ ಇಟ್ಟುಕೊಂಡರು. ಎಲ್ಲಿ ಕೊರತೆಯಾಗಿದೆ ಅಲ್ಲಿಗೆ ಗೊಬ್ಬರವನ್ನು ಕಳುಹಿಸುವುದಕ್ಕೆ ಡೀಲರ್‌ಗಳು ಒಪ್ಪಲಿಲ್ಲ. ಆ ಡೀಲರ್‌ಗಳು ನಿಮ್ಮನ್ನು ಕೇಳಿದ್ದೇನೆಂದರೆ, ಉದಾ: ಕೋಲಾರಕ್ಕೆ ಬರಬೇಕಾಗಿತ್ತು, ಕೋಲಾರಕ್ಕೆ ಬಂದಿದೆ, ಹಾವೇರಿಗೆ ಗೊಬ್ಬರ ಬೇಕೆಂದರೆ ಅಲ್ಲಿಗೆ Transportation charges ಕೊಡುವವರಾರು ಎಂದು ಹೇಳಿದರೆ ಸರ್ಕಾರ Transportation charges ಅನ್ನು reimburse ಮಾಡಿದ್ದರೆ ಹಾವೇರಿಯಲ್ಲಿ ಆ ಘಟನೆಯಾಗುವುದಕ್ಕೆ ಸಾಧ್ಯವಿರಲಿಲ್ಲ. ಇದಕ್ಕೆ ಕೇಂದ್ರ ಸರ್ಕಾರ ಹೊಣೆಯೇ? ಇದಕ್ಕೆ ರಾಜ್ಯಪಾರು ಹೊಣೆಯೇ? ನಿಮ್ಮ management ಮಾಡುವುದರಲ್ಲಿ ತೊಂದರೆಯಾಗಿದೆ ಎನ್ನುವುದು ಇದೆ. ತಾವು ಅಧಿಕಾರವನ್ನು ಸ್ವೀಕಾರ ಮಾಡಿದ ಮೇಲೆ ಇವತ್ತು ತಾವು ಯಾವ ರೀತಿಯಾಗಿ ಪ್ರಮುಖವಾದ ಸಮಸ್ಯೆಯನ್ನು ಎಷ್ಟರ ಮಟ್ಟಿಗೆ ಪ್ರಮಾಣಿಕವಾಗಿ ಸ್ಪಂದಿಸಿದಿರಿ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಈ ವ್ಯವಸ್ಥೆಯಲ್ಲಿ ಯಾವ ಪತ್ರಿಕೆ ನೋಡಿದರೂ ಅದರಲ್ಲಿ ಈ ವಿಚಾರವಿರುತ್ತಿತ್ತು. ವಿಶ್ಲೇಷಣೆ ಇರುತ್ತಿತ್ತು. ಸರ್ಕಾರ ಮುಂದೆ ಇಡಬೇಕಾದ ಹೆಜ್ಜೆ ಯಾವ ರೀತಿಯಾಗಿ ಇರಬೇಕಾಗಿತ್ತು, ತಪ್ಪು ಎಲ್ಲಿಯಾಗುತ್ತಿದೆ? ಯಾವ ಜಿಲ್ಲೆಯಲ್ಲಿ ಯಾವ ಡಿಮಾಂಡ್ ಇದೆ ಎನ್ನುವುದು ಕೂಡ ಪ್ರತಿಯೊಂದು ಪತ್ರಿಕೆಯಲ್ಲಿ ವಿಚಾರ ಪ್ರಸ್ತಾಪವಾಗುತ್ತಿತ್ತು. ಅದನ್ನಾದರೂ ನೋಡಿ ಎಚ್ಚೆತ್ತುಕೊಳ್ಳಬಹುದಾಗಿತ್ತು. ಆದರೂ ಕೂಡ ಎಚ್ಚೆತ್ತುಕೊಳ್ಳುವ ಕೆಲಸವನ್ನು ತಾವು ಮಾಡಲಿಲ್ಲವೆಂದಾಗ ಇದಕ್ಕೆ ಹೊಣೆ ಯಾರು? ಆ ಗೊಬ್ಬರದ ವಿಚಾರದಲ್ಲಿ ನನಗನಿಸುತ್ತದೆ, ಎಲ್ಲರೂ ಮಾತನಾಡುವಾಗ ನಾನೊಂದು ಸಲಹೆ ಕೊಟ್ಟೆ. ಕೃಷಿ ಖಾತೆಯನ್ನು ಸಮರ್ಥವಾದ ವ್ಯಕ್ತಿಗೆ ಕೊಟ್ಟಿದ್ದೀರಿ, ಆದರೆ, ಇಂಥ ಪರಿಸ್ಥಿತಿಯಲ್ಲಿ ಬಹಶಃ ತಾವೇ ಕೃಷಿ ಖಾತೆಯನ್ನು ಅಥವಾ ಗ್ರಾಮೀಣಾಭಿವೃದ್ಧಿ ಖಾತೆಯನ್ನು ಇಟ್ಟುಕೊಂಡಿದ್ದರೆ ನಿಜವಾಗಲೂ ಕೂಡ ಒಳ್ಳೆಯ ಹೆಸರು ಬರುತ್ತಿತ್ತು. ಅದನ್ನು ನಿರ್ವಹಣೆ ಮಾಡುವುದಕ್ಕೆ ನಿಮಗೆ ಸಾಧ್ಯವಾಗುತ್ತಿತ್ತು. ಎಂಬುದನ್ನು ನನ್ನ ಅಭಿಪ್ರಾಯ. ತಾವು ಈಗಲೂ ಕೂಡ ಯೋಚನೆ ಮಾಡಬಹುದು. ಮುಂದಿನ ದಿನಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸಬೇಕಾದಾಗ ನೀವೇ ಆ ಖಾತೆಯನ್ನು ಇಟ್ಟುಕೊಂಡರೆ ಒಳ್ಳೆಯದೆಂದು ಹೇಳುವುದರ

ಜೊತೆಗೆ ಈಗ ಸಮಸ್ಯೆ ಬಂದಿರತಕ್ಕಂಥದ್ದು, ಎಪ್ರೀಲ್, ಮೇ, ನಲ್ಲಿ ತೊಂದರೆಯಿಲ್ಲ. ಜೂನ್‌ನಲ್ಲಿ ಕೂಡ ಕೆಲವು ಜಿಲ್ಲೆಗಳಲ್ಲಿ ಮಳೆಯಾಗುತ್ತಿಲ್ಲ. ಬಹಳಷ್ಟು ತಾಲ್ಲೂಕುಗಳಲ್ಲಿ ಮಳೆಯಿಲ್ಲ, ಬಿತ್ತನೆ ಇಲ್ಲ, ಆದರೂ ಕೂಡ ಗೊಬ್ಬರಕ್ಕಾಗಿ ಹಾಹಾಕಾರವಿದೆ. ನೀವು ಕೇಂದ್ರದ ಕಾರ್ಯದರ್ಶಿಗಳೊಡನೆ ಮಾತನಾಡುವಂಥ ಸಂದರ್ಭದಲ್ಲಿ, ಮಾತುಕತೆಯ ಸಾರಾಂಶ ಏನು ಎಂದುದನ್ನು ಈಗಾಗಲೇ ನಮ್ಮ ನಾಯಕರಾದ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ಒಂದೊಂದಾಗಿ ಬಿಡಿಸಿ ಹೇಳುವಂಥ ಸಂದರ್ಭದಲ್ಲಿ ಆ ಲೋಪ ಕೇಂದ್ರ ಸರ್ಕಾರದಿಂದ ಆಗಿಲ್ಲವೆಂದು ಮನವರಿಕೆ ಮಾಡಿಕೊಟ್ಟಿದ್ದಾರೆ. ಕಾಗದ ಬರೆದಿರುವವರು ಯಾರು ಎಂದರೆ, ಕರ್ನಾಟಕದ ಮುಖ್ಯಕಾರ್ಯದರ್ಶಿಗಳು ಬರೆದಿರತಕ್ಕಂಥ ವಿಚಾರ ಅದರಲ್ಲಿ ಅವರು ಒಂದು ಮಾತು ಹೇಳುತ್ತಾರೆ. "I am writing to inform you that upto 10th June 2008 we have received 23,100 metric tons of DAP as against the programme supply of 23,060 metric tons and 24,573 metric tons of complex fertilizers as against supply of 19,195 metric tons." ಇದು ತಮ್ಮ ಮುಖ್ಯ ಕಾರ್ಯದರ್ಶಿಗಳೆ ಬರೆದಿರತಕ್ಕಂಥ ಕಾಗದ. ಆ ಕಾಗದದ ಸಾರಾಂಶ ಇದು. ಏಪ್ರೀಲ್ ಮತ್ತು ಮೇ ನಲ್ಲಿ ತೊಂದರೆಯಾಗುವುದಿಲ್ಲ ಎನ್ನುವುದಕ್ಕೆ ನಿಮಗೆ ಒಂದು ಮಾತನ್ನು ಹೇಳುತ್ತೇನೆ. " As against the availability of seeds and fertilizers in April, May 2008, as it could be seen, the overall position of fertilizers in the State was comfortable in respect of all fertilizers. However, in respect of DAP and complexes certain districts has stress situation towards the end of May, in early June 2008. It was the responsibility of the State Government to prepare the district wise plan and oversee the supply of manufactures according to the plan. Unfortunately, this was not done properly and hence the adverse situation in some of the districts. " ಮುಖ್ಯ ಕಾರ್ಯದರ್ಶಿಗಳ ಟಿಪ್ಪಣಿಯಲ್ಲಿರತಕ್ಕಂಥ ವಿಚಾರ ಎಂದು ಹೇಳಿದಾಗ, ನೀವು ಯಾರನ್ನು ಹೊಣೆ ಮಾಡುತ್ತೀರಾ? ಮತ್ತೊಂದು ಮುಖ್ಯವಾದ ಅಂಶ ಏನೆಂದರೆ, " the Chief Secretary himself informed the Chief Minister that the supply of fertilizers ha sbeen made as planned by the Government of India and that it is for the State Government

officials now to monitor the fertilizer supply position on day to day basis." ಇದನ್ನೇ ನಾನು ಹೇಳಿದ್ದು. ಜೂನ್ ತಿಂಗಳಲ್ಲಿ ರಾಜ್ಯಪಾಲರ ಆಡಳಿತ ಇರಲಿಲ್ಲ. ಮ್ಯಾನೇಜ್ ಮಾಡಬೇಕಾದವರು ರಾಜ್ಯ ಸರ್ಕಾರವೇ ವಿನಾಃ ಬೇರೆಯವರು ಅಲ್ಲ. ರಾಜ್ಯ ಸರ್ಕಾರದ ಸಚಿವರುಗಳು ಮಾಡಬೇಕಾಗಿತ್ತು. ಅವರು ಯಾವುದೇ ಜಿಲ್ಲೆಯವರಾಗಿದ್ದರು ಅವರಿಗೆ ಪೋರ್ಟ್‌ಪೋಲಿಯೋ ಇರಲಿ ಇಲ್ಲದಿರಲಿ ಅವರು ನಿರ್ವಹಣೆಯನ್ನು ಮಾಡಬೇಕಾಗಿತ್ತು. ಎಲ್ಲಿ ತಪ್ಪಾಗಿದೆ ಎಂಬುದನ್ನು ತಾವು ಯೋಚಿಸಬೇಕು. ನಿಮಗೂ ಕೂಡ ಮಾಹಿತಿ ಗೊತ್ತಿದೆ. ನಾನು ಮತ್ತೆ ಮತ್ತೆ ಅದನ್ನೆ ಹೇಳುವ ಅವಶ್ಯಕತೆ ಇಲ್ಲವೆಂದು ಭಾವಿಸುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರ ಏನೆಂದರೆ, ಎಲ್ಲೋ ಒಂದು ಕಡೆಗೆ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸತಕ್ಕಂಥದ್ದು ಆಗಬಾರದು. ನಿನ್ನೆ ಮುಖ್ಯಮಂತ್ರಿಗಳು ನೀಡಿರುವಂಥ ಜಾಹೀರಾತು ದಿನ ಪತ್ರಿಕೆಯಲ್ಲಿ ಬಂದಿತ್ತು. ಅದರಲ್ಲಿ ಪರೋಕ್ಷವಾಗಿ ಎಲ್ಲೋ ಒಂದು ಕಡೆಗೆ ಕೇಂದ್ರ ಸರ್ಕಾರ total responsibility ಅವರದ್ದು ನಮ್ಮದೇನೂ ಇಲ್ಲ ನಮ್ಮದು ಕೇವಲ supply ಮಾಡತಕ್ಕಂಥವರು ಎನ್ನುವ ರೀತಿಯಲ್ಲಿ ಇದೆ. Post man ಎನ್ನುವ ರೀತಿಯಲ್ಲಿ ಇದೆ. Fertilizer Control Order ಪ್ರಕಾರ de-control ಆಗಿರತಕ್ಕ ಸಂದರ್ಭದಲ್ಲಿ ಕಂಪನಿಗಳು, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಈ ಮೂರು ಕೂಡ ಒಂದು ರೀತಿಯ tripatite agreement ಆಗಬೇಕಾಗುತ್ತದೆ. ಈ ಮೂರು ಅಂತಸ್ತಿನಲ್ಲಿ ಕೂಡ ಒಂದು ಚರ್ಚೆಯಾಗಬೇಕಾಗುತ್ತದೆ. ಒಂದು conscious opinion ಕೂಡ ಬರಬೇಕಾಗುತ್ತದೆ. ಕೇಂದ್ರ ಸರ್ಕಾರದಲ್ಲಿ ಏನಾಗಿದೆ ಎಂದರೆ, ಸಬ್ಸಿಡಿ ಕೊಡಲಿಲ್ಲ. ಕೆಲವು ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದು ಎಂಬತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಗೊಬ್ಬರದ ಸಬ್ಸಿಡಿಯನ್ನು ಕಂಪನಿಗಳಿಗೆ ಕೊಡಲಿಲ್ಲ ಹೀಗಾಗಿ ಇವತ್ತು ಗೊಬ್ಬರ ಸರಬರಾಜು ಆಗುತ್ತಿಲ್ಲ ಎನ್ನುವ ಮಾಹಿತಿಯನ್ನು ಹಳ್ಳಿಯ ಮಟ್ಟಕ್ಕೆ ಮುಟ್ಟಿಸುವಂಥ ಕೆಲಸ ಮಟ್ಟಿಸುವಂಥ ಕೆಲಸವಾಗಿದೆ. ಮುಖ್ಯ ಕಾರ್ಯದರ್ಶಿಗಳು ಬರೆದಿರುವಂಥ ಪತ್ರದ ಒಂದು ಸಾಲನ್ನು ಓದುವುದಕ್ಕೆ ಇಷ್ಟಪಡುತ್ತೇನೆ. "During the meeting on 07-6-2008 the Chief Minister of Karnataka also indicated that a sum of Rs. 10,000 crores of subsidy is due to fertilizer companies." ಅದು ಹೇಗೆ ನಿಮಗೆ ವರ್ತಮಾನ ಗೊತ್ತಾಯಿತೋನನಗಂತೂ ಅರ್ಥವಾಗಲಿಲ್ಲ. ಯಾರು ಮಾಹಿತಿ ಕೊಟ್ಟಿರು ಎಂಬುದು ನನಗೆ ಗೊತ್ತಾಗಲಿಲ್ಲ. ಮುಖ್ಯಮಂತ್ರಿಗಳಾದವರು ಆ ವಿಚಾರವನ್ನು ಪ್ರಸ್ತಾಪಿಸಬೇಕಾದರೆ, ಅದಿಕೃತವಾದ ಮಾಹಿತಿ ನಿಮ್ಮ ಬಳಿ ಇರಬೇಕಾಗಿತ್ತು. ಆದರೆ, ಅಲ್ಲಿ ಆಗಿದ್ದು ಏನೆಂದರೆ,

this position not correct as on 11-06-2008. Only an amount of 1,070 crores is due to be paid to the various fertilizer companies against bills properly raised by them. ಸಾವಿರದ ಎಪ್ಪತ್ತು ಕೋಟಿ ಮಾತ್ರ bills ಗೆ against ಆಗಿ ಕೊಡಬೇಕಾಗಿತ್ತು. ಅದು ಹತ್ತು ಸಾವಿರ ಕೋಟಿಯಲ್ಲ. There is also an approved liability of 3,600 crores for which bill are expected from the companies shortly an payment will be made in accordance with the bill procedures. ಕಂಪನಿಯವರು ಬಿಲ್ ಕೊಡಲಾರದೇ ಯಾರದರೂ ಪೇಮೆಂಟ್ ರಿಲೀಸ್ ಮಾಡುವುದಕ್ಕಾಗುತ್ತದೆಯೇ? ಅದು Company's mistake ಇರಬಹುದು. on going procedure ಇರಬಹುದು. ಬಿಲ್ಸ್ ಕೊಡಲೇ ಇಷ್ಟು due ಇದೆ. ಎಂದು ಯಾರಾದರೂ complaint ಮಾಡಿದರೆ ಅದು ಎಷ್ಟರ ಮಟ್ಟಿಗೆ ಸರಿಯಾಗುತ್ತದೆ? ಎಲ್ಲೋ ಒಂದು ಕಡೆಗೆ ಏನು ಭಾಸವಾಗುತ್ತದೆಂದರೆ, ಮುಖ್ಯಮಂತ್ರಿಗಳಿಗೂ ಕೂಡ ಸರಿಯಾಗಿ ವರ್ತಮಾನ ರವಾನೆಯಾಗುತ್ತಿಲ್ಲ. ಮುಖ್ಯಮಂತ್ರಿಗಳಿಗೂ ಕೂಡ ಸರಿಯಾಗಿ ವಾಸ್ತಾವಾಂಶವಾದ ಅಂಕಿ ಅಂಶಗಳು ಸಿಗುತ್ತಿಲ್ಲ. ಎಂದರೆ ಲೋಪ ಎಲ್ಲಿ ಇದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳುವುದರ ಜೊತೆಗೆ, ಇವತ್ತು ನಾನು ಅದನ್ನು ಕೇವಲ ಬೆಟ್ಟು ಮಾಡಿ ತೋರಿಸುತ್ತೇನೆ. ಎನ್ನುವುದಕ್ಕಿಂತಲೂ ಹೆಚ್ಚಾಗಿ ಇನ್ನು ಮುಂದೆಯಾದರೂ ಆ ಸಮಸ್ಯೆ ಬಗೆಹರಿಯಬೇಕು. ಈ ತಿಂಗಳಲ್ಲಿ ಮಳೆ ಬರಲಿಲ್ಲ, ಇನ್ನು ಮುಂದೆ ಏನಾದರೂ ಮಳೆ ಬರುವ ಸಂದರ್ಭದಲ್ಲಿ ಬಹಶಃ June supplies ಕೇಂದ್ರ ಸರ್ಕಾರ ಇವತ್ತೇನು ತಮಗೆ ಒಪ್ಪಿಗೆ ಕೊಟ್ಟಿದೆ, ಅಷ್ಟರ ಮಟ್ಟಿಗೆ ಆ ಕಂಪನಿಗಳ ಹತ್ತಿರ ನೇರವಾಗಿ ಮಾತನಾಡಿ ಗೊಬ್ಬರವನ್ನು ತರಿಸುವ ಕೆಲಸ ಮಾಡಬೇಕಾಗುತ್ತದೆ. ಅವರಿಗೆ ಯಾವುದಾದರೂ ತೊಂದರೆಯಿದ್ದರೆ, ತಾವು ಅವರ್ತನಿಧಿಯನ್ನು 500 ಕೋಟಿಯಿಂದ 1000 ಕೋಟಿಗೆ ಮಾಡುತ್ತೇವೆ ಎನ್ನುವ ಮಾತನ್ನು ಕೂಡ ಆಡುತ್ತಿದ್ದೀರಿ. ಎಲ್ಲೋ ಒಂದು ಕಡೆಗೈ ಅವರ್ತನಿಧಿಯನ್ನು ಬಳಸಿಯಾದರೂ ನೀವು ಆ ಕಂಪನಿಗಳ ನೆರವಿಗೆ ಹೋಗಿ ಗೊಬ್ಬರ ಬೇಗ ರವಾನೆಯಾಗುವ ಮಟ್ಟಕ್ಕೆ ನೀವು ಸ್ಪಂದಿಸಬಹುದಾಗಿತ್ತು. ಆ ಕೆಲಸವೂ ಕೂಡ ಆಗಲಿಲ್ಲ. ಇವತ್ತು ನೀವು Marketing Federation ಗೆ ಜವಾಬ್ದಾರಿಯನ್ನು ಬಹಿಸಿದ್ದೀರಿ. ಅವರು ಇವತ್ತು ಗೊಬ್ಬರಗಳನ್ನು ಸರಬರಾಜು ಮಾಡಬೇಕು. Marketing Federation ಮೂಲಕ ಎಲ್ಲಾ society ಗಳಿಗೆ ನೀವು ಗೊಬ್ಬರವನ್ನು ರವಾನೆ ಮಾಡಬೇಕೆಂದು ನೀವು ಸರ್ಕಾರಿ ಆದೇಶ ಮಾಡಿದಿರಿ. ಎಷ್ಟು ಸೊಸೈಟಿಗಳಲ್ಲಿ ಲೈಸನ್ಸ್ ಇದೆ. ಯಾವ ಸೊಸೈಟಿಯಲ್ಲೂ ಲೈಸನ್ಸ್ ಇಲ್ಲ. ಒಂದು

ಕಡೆ ಲೈಸನ್ಸ್ ಇದ್ದರೆ ಫಂಡ್ಸ್ ಇಲ್ಲ. ಅಂಥ ಸಂದರ್ಭದಲ್ಲಿ ಗೊಬ್ಬರ ಯಾವ ರೀತಿಯಾಗಿ ರವಾನೆಯಾಗುತ್ತದೆ ಎಂಬುದನ್ನು ತಾವು ಯೋಚಿಸಬೇಕು. ನಮ್ಮಲ್ಲಿರುವ ಸುಮಾರು 11 ಸಾವಿರ Distributors ಏನು ಇದ್ದಾರೆ ಅವರ ಕುಂದುಕೊರತೆಗಳೇನು ಎಂದು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ, private ನವರಾಗಬಹುದು ಇಲ್ಲಾ ಅಂದರೆ Marketing Federation ರವರಾಗಬಹುದು ಆ ಗೊಬ್ಬರವನ್ನು ಸರಬರಾಜು ಮಾಡಬೇಕಾಗುತ್ತದೆ.ಅಲ್ಲಿ struck up ಆಗಿರತಕ್ಕಂಥದ್ದು. ಗೊಬ್ಬರ ಒಂದು ಕಡೆಗೆ ದಾಸ್ತಾನು ಆಗಿದೆ, ಆದರೆ ಹಳ್ಳಿಗಳಿಗೆ ರವಾನೆಯಾಗುತ್ತಿಲ್ಲ. ಎನ್ನುವುದಕ್ಕೆ ಅದು ಮೂಲ ಕಾರಣ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಗೋಲಿಬಾರ್ ಆದಮೇಲೆ ತಾವು ಅಲ್ಲಿಗೆ ಹೋಗಿ ಸಾಂತ್ವನ ಹೇಳಿದಿರಿ, ಅದೇ ರೀತಿ ವಿರೋಧ ಪಕ್ಷದ ನಾಯಕರು ಕೂಡ ಹೋಗಿದ್ದರು. ತಾವು ಹೋದಂಥ ಸಂದರ್ಭದಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಬಂದಿದ್ದೀರಿ. ತಾವು ವೈಯುಕ್ತಿಕವಾಗಿ ಕೊಟ್ಟಿದ್ದೀರೋ ಅಥವಾ ಸರ್ಕಾರದಿಂದ ಕೊಟ್ಟಿದ್ದೀರೋ ನನಗೆ ಗೊತ್ತಿಲ್ಲ. ಆದರೆ, ಇನ್ನು ಮುಂದೆ ಗೋಲಿಬಾರ್‌ನಲ್ಲಿ ಮಡಿದಂಥವರು ಯಾರೇ ಆದರೂ ಕೂಡ, ತಾವು ಈಗೇನು ಸಿದ್ದಲಿಂಗಪ್ಪ ಚೂರಿಯವರಿಗೇನು ಮೂರು ಲಕ್ಷ ರೂಪಾಯಿ ಕೊಟ್ಟಿದ್ದೀರಿ, it becomes a precedent. It becomes mandatory. ಇನ್ನು ಮುಂದೆ ಯಾವುದೇ ಸಂದರ್ಭದಲ್ಲಿಯೂ ಕೂಡ ಇಂಥ ಸಂದರ್ಭಗಳು ಎದುರಾದಾಗ ಮೂರು ಲಕ್ಷ ರೂಪಾಯಿಗಳನ್ನು ತಾವು ಕೊಡುತ್ತೀರಾ ಎಂದು ನಾವು ಕೇಳಬೇಕಾಗುತ್ತದೆ. ಅದಕ್ಕೆ ಸರ್ಕಾರದ ಒಂದು ಆಜ್ಞೆ ಕೂಡ ಆಗಬೇಕಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ. ನಾನು ಹಿಂದೆ ಕೃಷಿ ಸಚಿವನಾಗಿದ್ದ ಸಂದರ್ಭದಲ್ಲಿ ಆತ್ಮಹತ್ಯೆಗೊಳಗಾಗಿದ್ದಂಥ ರೈತ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿ ಕೊಡಬೇಕೆಂದು ನಾವು ಫಿಕ್ಸ್ ಮಾಡಿ ಸುಮಾರು 8–10 ವರ್ಷಗಳಾಯಿತು. ಈಗ ಇರುವ ಒಂದು ಲಕ್ಷ ರೂಪಾಯಿಗೆ ಮೂರು ಲಕ್ಷ ರೂಪಾಯಿ ಕೊಡುತ್ತಿರೋ ಎನ್ನುವುದನ್ನು ತಾವು ಹೇಳಬೇಕಾಗುತ್ತದೆ. ನಿಮಗೆ ಜುಲೈ ತಿಂಗಳಲ್ಲಿ ಅತ್ಯಂತ ಕಷ್ಟದ ದಿನಗಳು ಬರುತ್ತವೆ, ಆಗ ಮಳೆ ಬಂದಂಥ ಸಂದರ್ಭದಲ್ಲಿ ಏಕದಂ ಜನಗಳು ಅಂಗಡಿಗಳ ಮುಂದೆ ಸಾಲಾಗಿ ನಿಂತಾಗ ಇನ್ನೊಂದು ಅತ್ಯಂತ ದೊಡ್ಡ ಕಷ್ಟವನ್ನು ಎದುರಿಸಬೇಕಾಗುತ್ತದೆ. ಅದಕ್ಕೆ ನೀವು ಈಗಲೇ ಆ ಕಂಪನಿಗಳ ಹತ್ತಿರ ಕುಳಿತು ಚರ್ಚಿಸಿ ಗೊಬ್ಬರವನ್ನು ತರಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ನಿಮ್ಮ Warehouse Corporation ನಲ್ಲಿ stock ಇರಬಹುದು, ಆದರೆ ಅದು ಮುಖ್ಯವಲ್ಲ, ಅದು ರೈತರ ಮನೆ ಮುಂದೆ ಹೋಗಿ ನಿಂತರೆ ಅಥವಾ ಸೋಸೈಟಿಗಳಿಗೆ

ಹೋಗಿ ಬಿದ್ದರೆ ಯಾವ ರೈತನೂ panic ಆಗತಕ್ಕಂಥ ಪ್ರಶ್ನೆಯಲ್ಲ. ಅಥವಾ ದುರಾಶೆಯಿಂದ ಸಿಗುತ್ತದೋ ಇಲ್ಲವೋ ಎನ್ನುವ ಅನುಮಾನದಿಂದ ಕೊಳ್ಳತಕ್ಕಂಥ ಪ್ರಶ್ನೆ ಕೂಡ ಬರುವುದಿಲ್ಲ. ಆದರೆ ಗೊಬ್ಬರ ಏನು ಗೋದಾಮಿನಲ್ಲಿದೆ ಆದರೆ ಅದು ಇವತ್ತು ಸೋಸೈಟಿಗಳಲ್ಲಿ ಅಥವಾ ಈ ಹಳ್ಳಿಗಳ ಗೋದಾಮಿನಲ್ಲಿ ಇಲ್ಲದೇ ಇವತ್ತು ಕಷ್ಟವಾಗಿದೆ ಎನ್ನುವಂಥ ಮಾತನ್ನು ಆ panic ಆಗುವುದನ್ನು ತಪ್ಪಿಸಬೇಕಾದಾಗ ಗೊಬ್ಬರವನ್ನು ಅಲ್ಲಿಗೆ ಮೊದಲು ರವಾನೆ ಮಾಡಿಸತಕ್ಕಂಥ ಕೆಲಸವನ್ನು ಮಾಡಬೇಕು ಎನ್ನುತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಮುಖ್ಯವಾದಂಥ ವಿಚಾರ ಮೊನ್ನೆ ಪತ್ರಿಕೆಯಲ್ಲಿ ನಾನು ನೋಡಿದೆ. ಬಹಳಷ್ಟು ಕಡೆಗೆ ಈಗಾಗಲೇ ಸ್ಪೂರಿಯಸ್ ಗೊಬ್ಬರ ಬರುವುದಕ್ಕೆ ಪ್ರಾರಂಭವಾಗಿದೆ. ರಂಗೋಲಿ ತರಹ ಪುಡಿ ಇರುತ್ತದೆ, ಆ ಪುಡಿಯನ್ನು ಹಾಕಿ ಇವತ್ತು ಗೊಬ್ಬರವೆಂದು ಕೊಡತಕ್ಕಂಥದ್ದನ್ನು ಸಾಕಷ್ಟು ಕಡೆ ಉತ್ತರ ಕರ್ನಾಟಕ ಭಾಗದಲ್ಲಿ ನಾನು ಕೇಳಿದ್ದೇನೆ. ಇನ್ನು ಮುಂದೆ ಸ್ಪೂರಿಯಸ್ ಗೊಬ್ಬರವನ್ನು ಕೊಡತಕ್ಕಂಥ ದಂಧೆ ಇದ್ದೇ ಇದೆ. ಅದನ್ನು ತಗ್ಗಿಸಬೇಕಾದಾಗ ನೀವು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಇನ್ನೊಂದು ಮುಖ್ಯವಾದಂಥ ವಿಚಾರ, ಇವತ್ತು ಏನು ಯೂರಿಯಾ ಗೊಬ್ಬರ, ಇವತ್ತು ನಿಮ್ಮಲ್ಲಿ ಸಾಕಷ್ಟು ದಾಸ್ತಾನು ಇದೆ. ಅದರ ಬಳಕೆಯಾಗುವುದು ಯಾವಾಗ ಎಂದರೆ ಪೈರು ಬಂದು 15–20 ದಿವಸ ಒಂದು ತಿಂಗಳಾದ ಮೇಲೆ ಯೂರಿಯಾ ಬಳಕೆಯಾಗತಕ್ಕಂಥದ್ದು. ಈಗಾಗಲೇ ಯೂರಿಯಾ ಸಾಕಷ್ಟು ರೀತಿಯಲ್ಲಿ ಸೋಸೈಟಿಗಳಲ್ಲಿ ಅಥವಾ ಬೇರೆ ಬೇರೆ ಡೀಲರ್ಸ್‌ನಿಂದ ಅದು ಎಲ್ಲೋ ಒಂದು ಕಡೆಗೆ ರವಾನೆಯಾಗಿದೆ. ಈಗಾಗಲೇ ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಇವತ್ತು ಒಬ್ಬೊಬ್ಬ ಲಾರಿಯವನಿಗೆ ಹತ್ತತ್ತು ಸಾವಿರ ರೂ. ಗಳನ್ನು ಕೊಟ್ಟು ಬಿಟ್ಟರೆ ಆ ಗೊಬ್ಬರ ಕಂಪನಿಯವರೆ ಬೇರೆ ಬೇರೆ ಕಡೆ ಇಡುವಂಥ ಪ್ರಯತ್ನವನ್ನು ಮಾಡಿದ್ದಾರೆ. ನಿಮ್ಮ ಹತ್ತಿರ ನಾನು ಏಕೆ ಹೇಳುತ್ತಿದ್ದೇನೆಂದರೆ, ನಿಮ್ಮ ಹತ್ತಿರ sufficient stock ಯೂರಿಯಾ ಇದ್ದಾಗಲೂ ಕೂಡ ಮುಂದಿನ ಜುಲೈ ಆಗಸ್ಟ್ ತಿಂಗಳಲ್ಲಿ ಅದಕ್ಕೂ ಕೂಡ ಕೊರತೆ ಬರತಕ್ಕಂಥದ್ದು ಕಾಳಸಂತೆಯಲ್ಲಿ ಮಾರಾಟವಾಗತಕ್ಕಂಥದ್ದು ಆ ಸಂದರ್ಭ ಇದೆ ಇನ್ನತಕ್ಕಂಥದನ್ನು ಕೂಡ ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮಾನ್ಯ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ಸುರೇಶ್‌ಕುಮಾರ್‌ರವರು ಬಂದಾಗ ನಾವು ಸಲಹೆಯನ್ನು ಕೊಟ್ಟಿರುತ್ತೇವೆ. ಇವತ್ತು ತಹಶೀಲ್ದಾರ್, Assistant Directors, Agriculture ಅವರೆಲ್ಲರನ್ನು taskforce ಮಾಡಿ ಇದನ್ನು ನಿರಂತರವಾಗಿ ಅದನ್ನು ಕಂಡು ಹಿಡಿಯತಕ್ಕಂಥ ಕೆಲಸವನ್ನು ಮಾಡಿದರೆ, ಅದು ಪತ್ರಿಕೆಯಲ್ಲಿ ಆ ವಿಚಾರವನ್ನು

ಪ್ರಸ್ತಾಪ ಮಾಡುವಂಥ ಕೆಲಸವನ್ನು ಮಾಡಿದರೆ, ಅದನ್ನು ಇಲ್ಲೋ ಒಂದು ಕಡೆ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಆ ರೀತಿಯಾದಂಥ ಎಚ್ಚರಿಕೆಯ ಕೆಲಸವನ್ನು ಮಾಡಬೇಕಾಗುತ್ತದೆ ಎನ್ನುವಂಥ ಮಾತನ್ನು ಹೇಳುವುದರ ಜೊತೆಗೆ, ಇನ್ನೊಂದುಮುಖ್ಯವಾದ ವಿಚಾರ, ಜುಲೈ, ಆಗಸ್ಟ್ ತಿಂಗಳಲ್ಲಿ ನಿಮಗೆ pesticides ವಿಚಾರ ಬರುತ್ತದೆ. ಇದರಿಂದ ಹಿಂದೆ ಆತ್ಮಹತ್ಯೆಗಳು ಆಗಿರತಕ್ಕಂಥದ್ದು ಅದಕ್ಕೋಸ್ಕರ ಸದನ ಸಮಿತಿಯಾಗಿ ಅದರ ವರದಿಯನ್ನು ಕೊಟ್ಟಿರತಕ್ಕಂಥದ್ದು ಇದೆಲ್ಲಾ ಕೂಡ ಗೊತ್ತಿರತಕ್ಕಂಥದ್ದು. ಈ ಸರ್ಕಾರಕ್ಕೆ ಕೂಡ ಗೊತ್ತಿರತಕ್ಕಥದ್ದು. ಇವತ್ತು. pesticides ಗೊಬ್ಬರಕ್ಕಿಂತಲೂ ದುಬಾರಿಯಾಗುತ್ತದೆ. ಕಾರಣವೇನೆಂದರೆ, ಇವತ್ತು pesticides components ಇವತ್ತು International Market ನಲ್ಲಿ rate ಜಾಸ್ತಿಯಾಗಿರತಕ್ಕಂಥ ಸಂದರ್ಭದಲ್ಲಿ Phosphoric acid ಅದು ಗೊಬ್ಬರಕ್ಕಾಗಲಿ, pesticides ಗೆ ಉಪಯೋಗಿಸತಕ್ಕಂಥದ್ದು. ಅಗಲಿ, ಸುಮಾರು 1 to 800 times ಜಾಸ್ತಿಯಾಗಿದೆ. ಅಂದಾಗ ಇವತ್ತು ಆ pesticides ನ ಪರಿಸ್ಥಿತಿ ಏನಾಗುತ್ತದೆ ಎನ್ನತಕ್ಕಂಥದ್ದನ್ನು ಕೂಡ ತಾವು ಯೋಚನೆ ಮಾಡಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೀಜ ಮತ್ತು ರಸಗೊಬ್ಬರದ ವಿಚಾರದಲ್ಲಿ ಯಾವುದೇ ರೀತಿ ವಿಳಂಬ ಮಾಡದಿರುವ ರೀತಿಯಲ್ಲಿ ಅದನ್ನು ರೈತರಿಗೆ ರವಾನೆ ಮಾಡಿಸುವ ಕೆಲಸವನ್ನು ಮಾಡಬೇಕು. ಎನ್ನತಕ್ಕಂಥ ಮಾತನ್ನು ಹೇಳುವುದರ ಜೊತೆಗೆ, ಒಂದು ಬಹಳ ಮುಖ್ಯವಾಗಿ , ನಿಮಗೆ ಎಲ್ಲೋ ಒಂದು ಕಡೆಗೆ ರಾಜಕಾರಣಿಗಳು ವಿರೋಧ ಪಕ್ಷದವರು ಇದಕ್ಕೆಲ್ಲಾ ಕಾರಣಕರ್ತರು ಆಗಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳುವಂಥದ್ದರಲ್ಲಿ ಇವತ್ತು ಸತ್ಯವಿಲ್ಲ. ರೈತರು ಬೀದಿಗೆ ಇಳಿದಂಥ ಸಂದರ್ಭದಲ್ಲಿ ಎಲ್ಲರೂ ಕೂಡ ಅವರನ್ನು ಅನುಸರಿಸಲೇಬೇಕಾಗುತ್ತದೆ. ರೈತ ಇವತ್ತು ಅವನು ಏನು ಕೇಳಲಿಲ್ಲ. ಬೇರೆ ಏನು ಮಾಡಿ ಕೊಡಿ ಎಂದು ಕೇಳಲಿಲ್ಲ. ಬಿತ್ತನೆಯಿಂದ ಯಾರಿಗೆ ಸಹಾಯವೆಂದರೆ, ರಾಜ್ಯದ ಜನರಿಗೆ ಸಹಾಯವಾಗುತ್ತದೆ. ಅವರಿಗೆ ಸಹಾಯವಾಗುವುದಕ್ಕಂಥ ಜಾಸ್ತಿ ಬೇರೆಯವರಿಗೆ ಸಹಾಯವಾಗುತ್ತದೆ. ನಮಗೆ ಗೊಬ್ಬರ ಕೊಡಿ ಎಂದು ಹೇಳಿ ಬೀದಿಗೆ ಬಂದಾಗ ಅವರಿಗೆ ಏಟು ಕೊಡತಕ್ಕಂಥದ್ದು ಆಗಿದೆ. ಎನ್ನುವ ಮಾತನ್ನು ಹೇಳುವುದರ ಜೊತೆಗೆ, ಅದು ಸರಿಯೇ ಎಂದು ಹೇಳುವುದರ ಜೊತೆಗೆ, ಈಗಾಗಲೇ ನಿರಂತರವಾಗಿ ಪ್ರತಿನಿತ್ಯ ಸರಣಿ ರೂಪದಲ್ಲಿ ಇವತ್ತು ಆತ್ಮಹತ್ಯೆಗಳು ಆಗುತ್ತಿವೆ. ಆತ್ಮಹತ್ಯೆಗಳ ವಿಚಾರ ಬಂದಾಗ ತಮ್ಮ ಕ್ಷೇತ್ರದಲ್ಲಿ ಕೂಡ ಆತ್ಮಹತ್ಯೆಗಳು ಆಗಿವೆ. ಬೇರೆ ಕಡೆ ಎಲ್ಲಾ ಆಗಿದ್ದಾಗ ಎಲ್ಲೋ ಒಂದು ಕಡೆ ಮಾಧ್ಯಮದ ಮಖೇನ ಏನು message ಕೊಡುತ್ತಿದ್ದಾರೆಂದರೆ, ಇವತ್ತು ಆತ್ಮಹತ್ಯೆ

ಆಗುತ್ತಿರುವಂಥದ್ದು ಈ ಕಾರಣಕ್ಕೋಸ್ಕರ ಅಲ್ಲ, ಗೊಬ್ಬರ, ಬೀಜಕ್ಕೋಸ್ಕರ ಆಗುತ್ತಿಲ್ಲ ಬೇರೆ ಕಾರಣಗಳಿಗೆ ಎನ್ನತಕ್ಕಂಥ ಮಾತನ್ನು ಹೇಳುವಂಥ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಸಚಿವನಾಗಿದ್ದಂಥ ಸಂದರ್ಭದಲ್ಲಿ ಕೂಡ ಡಾ. ವೀರೇಶ್‌ರವರ ಸಮಿತಿಯನು ಅಪಾಯಿಂಟ್ ಮಾಡಿದ್ದೆವು Suicidal death ಗೆ ಕಾರಣ ಏನು ಎನ್ನತಕ್ಕಂಥದ್ದರ ಬಗ್ಗೆ, ಆದರೆ, ಅವರ ವರದಿ ಬಂದ ಮೇಲೆ ಸಾರ್ವಜನಿಕವಾಗಿ ಕೂಡ ಅದನ್ನು ರಿಜೆಕ್ಟ್ ಮಾಡಬೇಕು ಎನ್ನುವ ವಿಚಾರ ಬಂತು. ಮಾನ್ಯ ಕೃಷಿ ಸಚಿವರು ಇದರ ಬಗ್ಗೆ ಯೋಚನೆ ಮಾಡಿ, ಅದು ವಾಸ್ತವಾಂಶವಾದ ವಿಚಾರ ಅಲ್ಲವೆಂದು ಹೇಳಿದರು. ನಾವೆಲ್ಲರೂ ಕೂಡ ರೈತ ಮೂಲದಿಂದ ಬಂದಿರತಕ್ಕಂಥವರು ಕೃಷಿಯನ್ನು ನಂಬಿರತಕ್ಕಂಥವರು, ಯಾರೋ ಒಬ್ಬರು ಸತ್ತರು ಕೂಡ ಹೌದು ಅವನು ಕುಡಿಯುತ್ತಿರಬಹುದು, ಅದರ ಹಿಂದಿನ ದಿವಸ ಕುಡಿದಿರಬಹುದು ಅದಕ್ಕಿಂತ 8 ದಿವಸ ಮುಂಚೆ ಕುಡಿದಿರಬಹುದು. ಅವನು ಯಾತಕ್ಕೋಸ್ಕರ ಕುಡಿಯುತ್ತಾನೆ. ಕುಡಿಯಬೇಕಾದರೆ ಬಹಶಃ ಎರಡು–ಮೂರು ಕಾರಣಗಳು ಇರುತ್ತವೆ. ದುಡ್ಡು ಹೆಚ್ಚಾದಾಗಲೂ ಕುಡಿಯುತ್ತಾನೆ. ದುಡ್ಡು ಕಡಿಮೆಯಾದಾಗಲೂ ಕುಡಿಯುತ್ತಾನೆ. ಅವನಿಗೆ ಆರ್ಥಿಕವಾಗಿ ಎಲ್ಲೋ ಅಭದ್ರತೆ ಉಂಟಾದಾಗಲೂ ಕೂಡ ಅಗಲೂ ಅವನು ಕುಡಿಯುತ್ತಾನೆ. ಬಹಶಃ ರೈತ ದುಡ್ಡು ಇದ್ದಾಗಲಂತು ಕುಡಿಯುವುದಕ್ಕೆ ಆಗಿಲ್ಲ, ಅವನಿಗೆ ಎಲ್ಲೋ ಒಂದು ಕಡೆ ಬೀಜ, ಗೊಬ್ಬರ ಸಿಗದಂಥ ಸಂದರ್ಭದಲ್ಲಿ ನಾವು ಟೀಕೆಗೆ ಒಳಗಾಗುತ್ತಿದ್ದೇವೆ. ಹೆಂಡತಿ ಮಕ್ಕಳು ನಮ್ಮನ್ನು ಕೇರ್ ಮಾಡುವುದಿಲ್ಲ. ನಾನು ಬಿತ್ತನೆ ಮಾಡದೇ ಹೇಗೆ ಮಾಡುವುದು ನಾನು ಮಕ್ಕಳನ್ನು ಶಾಲೆಗೆ ಸೇರಿಸಿದ್ದೇನೆ ಯಾವ ರೀತಿಯಾಗಿ ಬದುಕಬೇಕು, ನಾನು ಯಾವ ರೀತಿಯಾಗಿ ಹಣ ಮಾಡಬೇಕು ಎನ್ನತಕ್ಕಂಥದ್ದನ್ನು ಆ ಚಿಂತೆಯಲ್ಲಿ ಬಹುಶಃ ಕುಡಿದಿರಬಹುದು. ಅಂದಾಕ್ಷಣ ಕುಡಿದು ಸತ್ತ ಎನ್ನತಕ್ಕಂಥ ಮಾತನ್ನು ಇವತ್ತು ಸರ್ಕಾರದ ಮಂತ್ರಿಗಳು ಮತ್ತು ಅಧಿಕಾರಿ ಬಾಯಿಂದ ಏನಾದರೂ ಬಂದರೆ ಬಹುಶ ರೈತರ ಪರಿಸ್ಥಿತಿ ಏನಾಗುತ್ತದೆ. ನಾವು ನಿಜವಾಗಲೂ ಆತ್ಮಶೋಧನೆ ಮಾಡಿಕೊಳ್ಳೋಣ, ನಾವು ನಿಜವಾಗಲೂ ರೈತರ ಪ್ರತಿನಿಧಿಗಳೇ ಎನ್ನತಕ್ಕಂಥದ್ದನ್ನು ಮರೆಯಬಾರದು. ನಾನು ನನ್ನ ಅನುಭವದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಾನು ಗ್ರಾಮೀಣ ಪ್ರದೇಶದಿಂದ ಬಂದವನು. ಕೃಷಿಯನ್ನು ನಂಬಿರತಕ್ಕಂಥ ರೈತರುಗಳಲ್ಲಿ ಇವತ್ತು ಇರತಕ್ಕಂಥ ಅಭದ್ರತೆ ಇದಕ್ಕೆ ಮೂಲ ಕಾರಣವಾಗಿದೆ. ಆ ಕಾರಣಕ್ಕೋಸ್ಕರ ಬೇರೆ ಬೇರೆ ಚಟಗಳಿಗೆ ಒಳಗಾಗಿರಬಹುದು. ಆದರೆ ಅವನಿಗೆ ಎಲ್ಲೋ ಒಂದು ಕಡೆಗೆ ಅದೊಂದು remunerative profession ಆಗಿ ನಾವು ಮಾಡಲಿಲ್ಲ.

ಅವನಿಗೆ ಅದು ಲಾಭದಾಯಕವಾದಂಥ ಒಂದು ಉದ್ಯಮವಾಗಿಲ್ಲ. ಅದನ್ನು ಮಾಡುವುದರ ಬಗ್ಗೆ ಚಿಂತನೆ ಮಾಡಬೇಕು. ಆದರೆ ಅವನು ಆತ್ಮಹತ್ಯೆಗೆ ಒಳಗಾದ ತಕ್ಷಣ ಅದು ಬೇರೆ ಕಾರಣಕ್ಕೆಂದು ಹೇಳಿ ಕಾರಣವನ್ನು ಕೊಡತಕ್ಕಂಥದ್ದು ಸರಿ ಅಲ್ಲ. ನನಗೆ ನನ್ನ ಸ್ನೇಹಿತರು ಹೇಳುತ್ತಿದ್ದರು. ಏನೆಂದರೆ, ನಿಮ್ಮ ಅಧಿಕಾರಿಗಳು ಸತ್ತಂತಹವರ ಮನೆಗೆ ಹೋಗಿ ಖಾಲಿ ಕಾಗದದ ಮೇಲೆ ಸಹಿಯನ್ನು ಮಾಡಿಸಿಕೊಂಡು ಹೇಳಿಕೆಗಳನ್ನು ಪಡೆದು ಆ ಕಾರಣಕ್ಕೋಸ್ಕರ ಸತ್ತ, ಈ ಕಾರಣಕ್ಕೋಸ್ಕರ ಸತ್ತ ಎಂದು ಹೇಳುವುದು ಕೂಡ ಇವತ್ತು ನಡೆದಿದೆ ಎನ್ನುವುದನ್ನು ತಾವು ಅಲ್ಲಗಳೆಯಬೇಕು. ಅದರ ಬಗ್ಗೆ ವಿಚಾರ ಮಾಡಿ. ಆದರೆ ಇವತ್ತು ನಾವು ರೈತರ ಪ್ರತಿನಿಧಿಗಳಾಗಿರತಕ್ಕಂಥವರು, ರೈತ ಆತ್ಮಹತ್ಯೆಗೆ ಒಳಗಾಗಬೇಕಾದರೆ, ಅದಕ್ಕೆ ಮೂಲ ಕಾರಣವೆಂದರೆ, ಕೃಷಿಯಲ್ಲಿ ಲಾಭವಿಲ್ಲದಿರುವುದು ಮೂಲ ಕಾರಣ, ಅವನ ಆತ್ಮಹತ್ಯೆಗೆ ಸರ್ಕಾರಗಳೇ ಕಾರಣವಾಗುತ್ತವೆ ಎನ್ನತಕ್ಕಂಥದ್ದನ್ನು ಕೂಡ ತಾವು ಯೋಚನೆ ಮಾಡಬೇಕು ಎನ್ನುವಂಥ ಮಾತನ್ನು ಕೂಡ ಹೇಳುತ್ತೇನೆ. ಇವತ್ತು ಆ ರೈತನ ಬಗ್ಗೆ ಲಘುವಾಗಿ ಮಾತನಾಡತಕ್ಕಂಥದ್ದು ಸರಿ ಅಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಮುಂದಿನ ದಿನಗಳಲ್ಲಿ ಬರತಕ್ಕಂಥ ಸಮಸ್ಯೆಗಳ ಬಗ್ಗೆ ಕೂಡ ನಾನು ಸೂಕ್ಷ್ಮವಾಗಿ ಹೇಳಿದ್ದೇನೆ. ಅದರ ಬಗ್ಗೆ ಕೂಡ ಹೆಚ್ಚಿನ ಗಮನವನ್ನು ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಿಲುವಳಿ ಸೂಚನೆಯನ್ನು ಕೊಡುವುದಕ್ಕೆ ತಾವು ಯೋಚನೆಯನ್ನು ಮಾಡಬೇಕಾಗಿತ್ತು. ನಿಮ್ಮನ್ನು ಹೋಗಳುವುದಕ್ಕೆ ಅಥವಾ ತೆಗೆಳುವುದಕ್ಕೆಂದು ನಾನು ಈ ಮಾತನ್ನು ಹೇಳುತ್ತಿಲ್ಲ. ನೀವು ಉತ್ತರ ಕರ್ನಾಟಕ ಭಾಗದಿಂದ ಆ ರೈತ ಸಮುದಾಯದ ಗಂಡುಮೆಟ್ಟಿನ ನಾಡಿನ ಮೂಲದಿಂದ ಬಂದಿರತಕ್ಕಂಥ ನೀವು ಎಲ್ಲೋ ಒಂದು ಕಡೆ ರೈತರ ಪರವಾದಂಥ ತೀರ್ಮಾನಕ್ಕೆ ಬದ್ಧರಾಗುತ್ತೀರಿ ಎಂದು ನಾನು ಮಾಡಿದ್ದೆ. ಆದರೆ ನಿಮ್ಮ ಆದೇಶದಂತೆ ನಾವು ನಿಯಮ 69ರ ಅಡಿಯಲ್ಲಿ ಇವತ್ತು ನಾವು ಚರ್ಚೆಯನ್ನು ಮಾಡಿದ್ದೇವೆ. ಇದರಲ್ಲಿ ಹೆಚ್ಚು ಮಾತನಾಡುವುದಕ್ಕೆ ಅವಕಾಶವಿಲ್ಲದಿದ್ದರೂ ಕೂಡ ಆ ಮುಂದಿನ ದಿನಗಳು ಏನು ಎನ್ನತಕ್ಕಂಥದ್ದು ಮತ್ತು ಕಷ್ಟದ ದಿನಗಳು ಏನು ಎನ್ನತಕ್ಕಂಥದ್ದರ ಬಗ್ಗೆ ನಾನು ಹೇಳಿದ್ದೇನೆ. ಆದರೆ ಇವತ್ತಿನ ಆತ್ಮಹತ್ಯೆಗೆ ಇವತ್ತಿನ ಗೋಲಿಬಾರಿಗೆ ಇವತ್ತು ನೈತಿಕವಾಗಿರತಕ್ಕಂಥ ಹೊಣೆ ಯಾರದು ಎಂದು ಹೇಳಿದರೆ ಇವತ್ತು ಅದು ಸರ್ಕಾರದ್ದು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಎಲ್ಲ ಸಚಿವರು ಇದರ ಹೊಣೆಯನ್ನು ಹೊರಬೇಕಾಗುತ್ತದೆ. ಆದರೆ ನೀವು ರೈತರ ಹೆಸರಿನ ಮೇಲೆ ಇವತ್ತು ಅಧಿಕಾರಕ್ಕೆ ಬಂದು ಆ ರೈತರಿಗೆ ಈ ಪರಿಸ್ಥಿತಿ ಆದಂಥ ಸಂದರ್ಭದಲ್ಲಿ ನಿಮ್ಮ ನಡವಳಿಕೆಗಳು ನಿಮ್ಮ ತೀರ್ಮಾನಗಳು ನಿಮ್ಮ ಹೇಳಿಕೆಗಳು ತದ್

ವಿರುದ್ಧವಾಗಿದೆ, ರೈತರಿಗೆ ವಿರೋಧವಾಗಿದೆ. ಆ ರೈತ ನಿಮ್ಮನ್ನು ಎಂದೂ ಕೂಡ ಕ್ಷಮಿಸುವುದಿಲ್ಲವೆನ್ನುವಂಥ ಮಾತು. ಇವತ್ತು ಆ ಸಂದರ್ಭದಲ್ಲಿ ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಪ್ರಯತ್ನ ಪಟ್ಟಿರಿ. ಆದರೆ ಇವತ್ತು ಏನಾದರೂ ಕೂಡ ಈಗ ಅಥವಾ ಎರಡು ತಿಂಗಳಲ್ಲಿ ಚುನಾವಣೆ ಏನಾದರೂ ಆದರೆ, ಬಹುಶಃ ಈ ಪರಿಸ್ಥಿತಿ ಇರುವುದಕ್ಕೆ ಸಾಧ್ಯವಿಲ್ಲ. ಅದನ್ನು ತಾವು ಅರಿಯಬೇಕಾಗುತ್ತದೆ. ಯಾರಾದರೂ ರೈತರಿಗೆ ಮಣ್ಣು ತಿನ್ನಿಸಬಹುದು ಎಂದು ಹೇಳಿದರೆ, ಆ ರೈತರು ಕೂಡ ನಮಗೆ ಮಣ್ಣು ತಿನ್ನಿಸುತ್ತಾರೆ ಎನ್ನುವುದನ್ನು ನಾವು ಮರೆಯಬಾರದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಾವು ಆ ನೈತಿಕ ಹೊಣೆ ಹೊತ್ತು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಸಲಹೆ ಮಾಡಿರುವ ರೀತಿಯಲ್ಲಿ ಜಂಟಿ ಸದನ ಸಮಿತಿ ಇರಬಹುದು ಮತ್ತು ರೈತರನ್ನು ಬಹಿರಂಗವಾಗಿ ಕ್ಷಮಾಪಣೆ ಕೇಳತಕ್ಕಂಥ ವಿಚಾರವಾಗಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನೊಂದು ಮುಖ್ಯವಾಗಿ ಮುಂದಿನ ದಿನಗಳಲ್ಲಿ ಆಹಾರದ ಅಭದ್ರತೆ ನಮ್ಮಲ್ಲಿ ಕಾಡುತ್ತಿರುತ್ತದೆ. ಆ ಅಭದ್ರತೆಯನ್ನು ಇವತ್ತು ನಾವು ಹೋಗಲಾಡಿಸಬೇಕಾದಾಗ ನೀವು ಕೃಷಿ ಖಾತೆಯನ್ನು ಹೊತ್ತು ಆ ಜವಾಬ್ದಾರಿಯನ್ನು ಹೊತ್ತು ಆ ಕೆಲಸವನ್ನು ಮಾಡಿದರೆ ಸ್ವಲ್ಪಮಟ್ಟಿಗೆ ನಿಭಾಯಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪದೇ ಪದೇ ನೀವು ಕೃಷಿ ಖಾತೆಯನ್ನು ಅವರೇ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ. Mines and Geology ಎಲ್ಲಿ ಹೋಗಬೇಕು. BDA ಎಲ್ಲಿ ಹೋಗಬೇಕು. Forest ಎಲ್ಲಿ ಹೋಗಬೇಕು. Urban Development ಎಲ್ಲಿ ಹೋಗಬೇಕು. ಬರೀ ಅದನ್ನೇ ತೆಗೆದುಕೊಂಡು ಕುಳಿತರೆ ಹೇಗೆ? ಇವೆಲ್ಲಾ ಇರಬೇಕಾಗುತ್ತದೆ, ಅದಕ್ಕಾಗಿ ಅದನ್ನು ಅವರಿಗೆ ಕೊಟ್ಟಿದ್ದಾರೆ.

ಶ್ರೀ ಟಿ. ಬಿ. ಜಯಚಂದ್ರ: ಎಲ್ಲವನ್ನು ಹೇಳಿದ ಮೇಲೆಯೂ ಅವರು ವಹಿಸಿಕೊಳ್ಳಲಿಲ್ಲವೆಂದರೆ ಇವರು ಖಾತೆಗಳನ್ನು ಅವರು ಇಟ್ಟುಕೊಂಡರು ಎಂದರೆ, ಅವರ ಕಾಳಜಿ ಏನು ಎನ್ನುವುದು ಜನರಿಗೆ ಗೊತ್ತಾಗುತ್ತದೆ. ಇಷ್ಟು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ರಾಮನಗರ): ಸನ್ಮಾನ್ಯ ಅಧ್ಯಕ್ಷರೇ, ಈ ದಿನ ರಸಗೊಬ್ಬರದ ಸರಬರಾಜು ಮತ್ತು ಬಿತ್ತನೆ ಬೀಜ ವಿಷಯದಲ್ಲಿ ರಾಜ್ಯದಲ್ಲಿ ಕಳೆದ 20–

25 ದಿವಸಗಳಿಂದ ನಡೆಯುತ್ತಿರುವಂಥ ಪ್ರತಿಭಟನೆಗಳ ಬಗ್ಗೆ ಈಗಿರುವ ಕೆಲವು ಅನಾಹುತಗಳ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟು ಈಚರ್ಚೆಯಲ್ಲಿ ಭಾಗವಹಿಸಲಿಕ್ಕೆ ನನಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ, ನನಗೆ ಈ ಸಂದರ್ಭದಲ್ಲಿ ವೈಯಕ್ತಿಕವಾಗಿ ನನ್ನ ವಂದನೆಗಳನ್ನು ತಮಗೆ ಸಲ್ಲಿಸಬಯಸುತ್ತೇನೆ.

ಈ ಒಂದು ಬಿತ್ತನೆ ಬೀಜನೆ ವಿಷಯದಲ್ಲಿ ರಸ ಗೊಬ್ಬರದ ವಿಷಯದಲ್ಲಿ, ರೈತರ ಹಲವಾರು ಭಾಗಗಳಲ್ಲಿ ಆತಂಕಕ್ಕೆ ಒಳಗಾಗಿರುವ ಸನ್ನಿವೇಶ ಅಂತಿಮವಾಗಿ ಹಾವೇರಿಯಲ್ಲಿ ಗೋಲಿಬಾರ್ ಘಟನೆ ನಡೆಯುವವರೆಗೆ ಈ ಒಂದು ಘಟನೆ ನಮ್ಮ ಮುಂದೆ ನಡೆದಿರುವಂಥ ಸನ್ನಿವೇಶವನ್ನು ನಾವು ಗಮನಿಸಿದ್ದೇವೆ. ಮೇ 30ನೇ ತಾರೀಖಿನಂದು ಹೊಸ ಸರ್ಕಾರ ಪ್ರಮಾಣ ವಚನ ಸ್ವೀಕಾರ ಮಾಡುತ್ತದೆ. ಈ ಒಂದು ರಸಗೊಬ್ಬರದ ಸಮಸ್ಯೆ ಈ ಸರ್ಕಾರ ಬಂದ ನಂತರ ಪ್ರಾರಂಭವಾಗಿರುವುದಿಲ್ಲವೆಂದು ಸದನದ ಗಮನಕ್ಕೆ ತರಬಯಸುತ್ತೇನೆ. ದಾವಣಗೆರೆ ಮತ್ತು ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಮೇ 25ನೇ ತಾರೀಖಿನಿಂದಲೇ ಈ ಒಂದು ಪ್ರತಿಭಟನೆಗಳು ನಡೆದಿರತಕ್ಕಂಥದ್ದನ್ನು ನಾವೆಲ್ಲಾ ಗಮನಿಸಬೇಕಾದ ಅಂಶ. ಮೇ 30ನೇ ತಾರೀಖು ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿ ಎರಡು ದಿವಸಗಳಲ್ಲಿ ದೆಹಲಿಗೆ ಪ್ರಯಾಣ ಮಾಡಿದರು. ಅವರ ಪಕ್ಷದ ಹಿರಿಯ ನಾಯಕರುಗಳು, ಪ್ರಧಾನ ಮಂತ್ರಿಗಳು ಮತ್ತು ಕೆಲವು ಪ್ರಮುಖ ಕೇಂದ್ರ ಸಚಿವರನ್ನು ಭೇಟಿ ಮಾಡಿ ಒಂದು ಕಾರ್ಯಕ್ರಮದ ಅಡಿಯಲ್ಲಿ ಅವರು ದೆಹಲಿಯಲ್ಲಿ ಪ್ರವಾಸವನ್ನು ಮಾಡಿದರು. ಮಾಧ್ಯಮದ ಮೂಲಕ ನಾವು ಗಮನಿಸಿದ್ದೇವೆ. ರಾಜ್ಯದಲ್ಲಿ ರಸಗೊಬ್ಬರದ ಬಗ್ಗೆ ಪ್ರಧಾನ ಮಂತ್ರಿಗಳ ಜೊತೆ ಚರ್ಚೆಯನ್ನು ಮಾಡಿದ್ದನ್ನು ಸಾರ್ವಜನಿಕವಾಗಿ ಹೇಳಿದ್ದಾರೆ. 4ನೇ ತಾರೀಖು ರಾಜ್ಯಪಾಲರ ಬಾಷಣವನ್ನು ಈ ಒಂದು ಸರ್ಕಾರ, ಸರ್ಕಾರದ ಭಾವನೆಗಳನ್ನು ಸದನದ ಮೂಲಕ ಇಡೀ ರಾಜ್ಯದ ಜನತೆಗೆ ಗಮನಕ್ಕೆ ತರಲಿಕ್ಕಾಗಿ ಈ ಒಂದು ಸದನ ಪ್ರಾರಂಭ ಆಯಿತು. 6ನೇ ತಾರೀಖೂ ವಿಶ್ವಾಸ ಮತವನ್ನು ಪಡೆಯುವ ಸಂದರ್ಭದಲ್ಲಿ ತಾವು ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿರಿ. ನಾನು ಸರ್ಕಾರದ ಗಮನಕ್ಕೆ ಆ ದಿನ ರಸಗೊಬ್ಬರದ ಕೊರತೆಯ ಬಗ್ಗೆ ರಾಜ್ಯದಲ್ಲಿ ನಡೆಯತಕ್ಕಂಥ ಪ್ರತಿಭಟನೆಗಳ ಬಗ್ಗೆ ಗಮನವನ್ನು ಸೆಳೆದಾಗ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಪತ್ರಿಕೆಗಳಲ್ಲಿ ಕೊಟ್ಟಿರತಕ್ಕಂಥ ಹೇಳಿಕೆ ಒಂದು ಕಡೆ ಇರಲಿ, ಯಾವುದೇ ರೀತಿಯ ರಸಗೊಬ್ಬರದ ಕೊರತೆ ನಮ್ಮ ರಾಜ್ಯದಲ್ಲಿ ಇಲ್ಲ. ನಮ್ಮ ರಾಜ್ಯದ ರೈತರಿಗೆ ರಸಗೊಬ್ಬರವನ್ನು ಕೊಡತಕ್ಕಂಥದ್ದರಲ್ಲಿ ನಾವು

ಸಂಪೂರ್ಣವಾಗಿ ಸಮರ್ಥರಿದ್ದೇವೆ. ಆವತ್ತಿನ ದಿವಸ ವಿಶ್ವಾಸ ಮತ ಪಡೆಯುವ ದಿವಸ ಅವರು ಹೀಗೆಂದು ಉಚ್ಚಾರ ಮಾಡಿದ್ದಾರೆ. ನಾನು ಆ ಸಂದರ್ಭದಲ್ಲಿ ರಸಗೊಬ್ಬರದ ವಿಷಯದಲ್ಲಿ ರೈತರ ಪ್ರತಿಭಟನೆಗಳು ನಡೆಯುತ್ತಿವೆ, ಸರ್ಕಾರ ಇದನ್ನು ಕೇವಲವಾಗಿ ತೆಗೆದುಕೊಳ್ಳತಕ್ಕಂಥದ್ದು ಸೂಕ್ತ ಅಲ್ಲ. ತಮಗೆ ಅಧಿಕಾರಿಗಳು ಸರಿಯಾಗಿ ಮಾಹಿತಿಯಗಳನ್ನು ಕೊಟಿದ್ದಾರೋ ಇಲ್ಲವೋ ನನಗಂತೂ ಗೊತ್ತಿಲ್ಲ. ನಮಗೆ ಇರುವ ಮಾಹಿತಿ ಪ್ರಕಾರ ಸರ್ಕಾರದಲ್ಲಿ ಕೃಷಿ ಇಲಾಖೆಯಲ್ಲಿರುವ ಸ್ಟಾಕ್ ಅನ್ನು ಗಮನಿಸಿದಾಗ ರಸಗೊಬ್ಬರದ ಕೊರತೆ ಇರುವುದನ್ನು ನೀವು ನೋಡಬಹುದು ಎಂಬ ಮಾತನ್ನು ಹೇಳಿದೆವು. ಆದರೆ ಅದನ್ನು ಅಷ್ಟು ಗಂಭೀರವಾಗಿ ಆ ಸಂದರ್ಭದಲ್ಲಿ ಸರ್ಕಾರ ಪರಿಗಣಿಸಿಲ್ಲ ಎಂದು ನನ್ನ ಭಾವನೆ. 10ನೇ ತಾರೀಖು ಗೋಲಿಬಾರ್ ಪ್ರಕರಣ ಹಾವೇರಿಯಲ್ಲಿ ನಡೆಯಿತು. 6ನೇ ತಾರೀಖು ಒಂದು ಭಾರಿ ಹಾವೇರಿಯಲ್ಲಿ ಪ್ರತಿಭಟನೆ ನಡೆದಾಗ ಲಾಠಿ ಛಾರ್ಜು ಆದಂಥ ವಿಷಯ ಪತ್ರಿಕೆಗಳಲ್ಲಿ ನಾವು ಗಮನಿಸಿದ್ದೇವೆ. ನಂತರ ಹುಬ್ಬಳ್ಳಿ, ಧಾರವಾಡಗಳಲ್ಲಿ ನಡೆದಂಥ ಘಟನೆಗಳನ್ನು ಪತ್ರಿಕೆಗಳಲ್ಲಿ ವಿವರವಾಗಿ ನಾವು ಗಮನಿಸಿದ್ದೇವೆ. ಸರ್ಕಾರ ಮೊದಲಿನಿಂದಲೂ ಈ ಒಂದು ರಸಗೊಬ್ಬರದ ವಿಷಯದಲ್ಲಿ ಎಲ್ಲೋ ಒಂದು ಕಡೆ ಎಡವಿದ್ದಾರೆ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ಅದಕ್ಕೆ ಕಾರಣ ಅಧಿಕಾರಿಗಳು ಕೊಟ್ಟಂಥ ಮಾಹಿತಿಯೋ ಅಥವಾ ಸನ್ಮಾನ್ಯ ಮುಖ್ಯಮಂತ್ರಿಗಳು ವಿಶ್ವಾಸ ಮತವನ್ನು ಒಂದು ಕಡೆ ಪಡೆಯತಕ್ಕಂಥದ್ದು ಮತ್ತೊಂದು ಕಡೆ ಇಲಾಖೆಯನ್ನು ಸಚಿವರುಗಳಿಗೆ ಹಂಚುವಾಗ, ಯಾವ್ಯಾವ ಇಲಾಖೆಗಳನ್ನು ಯಾರ್‍ಯಾರಿಗೆ ಕೊಡಬೇಕೆನ್ನುವಂಥ ವಿಷಯದಲ್ಲಿ ಎಲ್ಲೋ ಒಂದು ಕಡೆ ಮಾನಸಿಕವಾಗಿ ತೊಂದರೆಗೊಳಗಾಗಿದ್ದು ಇದರ ಕಡೆಗೆ ಗಮನವನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲವೇನೋ ಎನ್ನುವುದು ನನ್ನ ಭಾವನೆ. ವಿಶ್ವಾಸ ಮತವನ್ನು ಪಡೆಯುವ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳಿದ್ದೆ. ನೀವು ಕೇವಲ ಪತ್ರವನ್ನು ಬರೆದರೆ ಕೇಂದ್ರ ಸರ್ಕಾರ ಸ್ಪಂದಿಸಲಿಕ್ಕೆ ಸಾಧ್ಯವಾಗುವುದಿಲ್ಲ. ತಕ್ಷಣ ನೀವಾದರೂ ದೆಹಲಿಗೆ ಹೋಗಿ ಸಂಬಂಧಪಟ್ಟ ಸಚಿವರನ್ನಾಗಲಿ, ಪ್ರಧಾನಮಂತ್ರಿಯನ್ನಾಗಲಿ ಭೇಟಿ ಮಾಡಿ, ಇಲ್ಲವೇ ನಿಮ್ಮ ಪ್ರಮುಖ ಸಚಿವರೊಬ್ಬರನ್ನು ರೆಪ್ರೆಸೆಂಟೆಟಿವ್ ಆಗಿ ಕಳುಹಿಸಿ ಈ ಜವಾಬ್ದಾರಿಯನ್ನು ನಿರ್ವಹಿಸಲಿಕ್ಕೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೆ. ಅದರ ಬಗ್ಗೆ ಕೂಡ ಗಮನವನ್ನು ಕೊಡಲಿಲ್ಲ. ಈ ಘಟನೆಗಳಾದ ನಂತರ ನೀವು ಕೊಟ್ಟಿರತಕ್ಕಂಥ ಹೇಳಿಕೆಗಳೇನಿವೆ, ಗೃಹ ಸಚಿವರ ಹೇಳಿಕೆ, ಮುಖ್ಯಮಂತ್ರಿಗಳ ಹೇಳಿಕೆ, ಕೃಷಿ ಸಚಿವರ ಹೇಳಿಕೆ ನೋಡಿದಾಗ ಸರ್ಕಾರ ಇವತ್ತು ಹೊಂದಾಣಿಕೆಯಿಂದ ಕೆಲಸವನ್ನು ಮಾಡುತ್ತಿದ್ದಾರೆಯೇ ಎನ್ನುವುದು

ನಾವು ಹೊರನೋಟದಲ್ಲಿ ತಕ್ಷಣಕ್ಕೆ ಯೋಚಿಸಿದಾಗ ಈ ಸರ್ಕಾರ ಯಾವುದೇ ರೀತಿಯ ಹೊಂದಾಣಿಕೆಯಿಂದ ಕೆಲಸ ಮಾಡುತ್ತಿಲ್ಲ. ಬೇಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆಂಬುದನ್ನು ನಾವು ಗಮನಿಸಲಿಕ್ಕೆ ಸಾಧ್ಯವಿದೆ. ಯಾವ್ಯಾವ ರೀತಿ ಹೇಳಿಕೆಯನ್ನು ಕೊಟ್ಟಿದ್ದಾರೆ, ಬೆಳಿಗ್ಗೆ ಈ ಒಂದು ನಿಲುವಳಿ ಸೂಚನೆಯನ್ನು ತರತಕ್ಕಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡುವಾಗ ರೈತರು ಆತ್ಮಹತ್ಯೆ ಮಾಡಿಕೊಂಡಂಥ ಸಂದರ್ಭದಲ್ಲಿ ನಿಲುವಳಿ ಸೂಚನೆಯನ್ನು ತರುವಾಗ ಆವತ್ತೇನು ತೀರ್ಮಾನವಾಯಿತು, ಯಾವುದೇ ರೀತಿಯ ಹೊಸ ಸಂಪ್ರದಾಯವನ್ನು ನಾವು ಇವತ್ತು ಸೃಷ್ಟಿ ಮಾಡಬೇಕೆಂಬುದನ್ನು ಹೇಳುತ್ತಿಲ್ಲ. ಹಿಂದೆ ಹಲವಾರು ನಿದರ್ಶನಗಳು ಇದ್ದಾವೆಂಬುದನ್ನು ಸದನದ ಗಮನಕ್ಕೆ ತಂದೆ ಅಧ್ಯಕ್ಷರೆ, ರೈತರ ಆತ್ಮಹತ್ಯೆ ಘಟನೆಗಳ ಬಗ್ಗೆ ಈ ಭಾಗದಲ್ಲಿ ಕುಳಿತು ಕೆಲಸ ಮಾಡಬೇಕಾದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಯಾವ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ಕೆಲವು ವಿಷಯಗಳನ್ನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಏಕೆಂದರೆ ಈಗ ಮುಖ್ಯಮಂತ್ರಿಗಳಾಗಿ ಅವರು ಹೇಳುತ್ತಿದ್ದಾರೆ, ಈ ರಾಜ್ಯದಲ್ಲಿ ಎಲ್ಲಿಯೂ ರೈತರು ಆತ್ಮಹತ್ಯೆಯನ್ನು ಗೊಬ್ಬರದ ಕೊರತೆಯಿಂದಾಗಿ ಇನ್ನಾವುದೇ ರೀತಿಯ ಸರ್ಕಾರದ ವೈಫಲ್ಯದಿಂದ ಇವತ್ತು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿಲ್ಲ, ಇದು ರಾಜಕೀಯವಾಗಿ ವಿರೋಧ ಪಕ್ಷಗಳು ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರಲಿಕ್ಕೆ ಹೊರಟಿದ್ದಾರೆಂಬ ಮಾತನ್ನು ಪದೇ ಪದೇ ಹೇಳುತ್ತಿದ್ದಾರೆ. ನಮ್ಮ ರೈತರು ಎಲ್ಲಾದರೂ ಆತ್ಮಹತ್ಯೆ ಮಾಡಿಕೊಂಡಂಥ ಸಂದರ್ಭದಲ್ಲಿ ನಾವೀಗ ಅವರ ಮನೆಗಳಿಗೆ ಹೋಗಲಿಕ್ಕೆ ಭಯ ಪಡುವಂಥ ವಾತಾವರಣವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ತಂದಿದ್ದಾರೆಂದು ಹೇಳಿದರೆ ತಪ್ಪಾಗಲಾರದು ಎನ್ನುವುದು ನನ್ನ ಭಾವನೆ. ಏಕೆಂದರೆ ಒಂದು ರೀತಿಯ ಅನುಮಾನ ಏನೀ ಸರ್ಕಾರ ಕೆಲಸವನ್ನು ಮಾಡಲಿಕ್ಕೆ ಅವಕಾಶವನ್ನು ಕೊಡದೇ ಇರುವಂಥ ರೀತಿಯಲ್ಲಿ ವಿರೋಧ ಪಕ್ಷದವರು ಎಲ್ಲೋ ಒಂದು ಕಡೆ ಕೆಟ್ಟ ಅಭಿಪ್ರಾಯವನ್ನು ಮೂಡಿಸಲಿಕ್ಕೆ ಹೊರಟಿದ್ದಾರೆಂದು ಪದೇ ಪದೇ ಹೇಳುತ್ತಿದ್ದೀರಿ. ನೀವು ಈಗ ಮುಖ್ಯಮಂತ್ರಿಗಳಾಗಿದ್ದೀರಿ. ಈ ಭಾಗದಲ್ಲಿ ತಾವು ಕುಳಿತು ಚರ್ಚೆ ಮಾಡಿದಂಥ ಕೆಲವು ಹಳೆಯ ನೆನಪುಗಳನ್ನು ತಾವು ಮರೆತಿರಬಹುದು, ಅದನ್ನು ನೆನಪಿಸಿಕೊಡಲಿಕ್ಕೆ ಬಯಸುತ್ತೇನೆ. ಯಾವ ಗುಲಬರ್ಗಾ ಬೀದರ್ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಂಥ ಸಂದರ್ಭದಲ್ಲಿ ತಾವು ಈ ಭಾಗದಿಂದ ಯಾವ ರೀತಿ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಲಿಕ್ಕೆ ಹೊರಟಿರಿ, ಯಾವ ಮಾತುಗಳನ್ನು ಹೇಳಲಿಕ್ಕೆ ಹೊರಟಿರಿ ಎಂದು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಈ ಸಾವು ರೈತ ಬೆಳೆಯನ್ನು ಹಾಳು

ಮಾಡಿಕೊಂಡ ಪರಿಣಾಮ ಅಲ್ಲ, ಅದಕ್ಕೆ ಬೇರೆ ಕಾರಣ ಇದೆ. ಎಂದು ಅದೇ ಜಿಲ್ಲೆಯ ಉಸ್ತುವಾರಿ ಸಚಿವರು ಹೇಳುತ್ತಾರೆ. ಜಿಲ್ಲಧಿಕಾರಿಗಳು ಹೇಳುವುದು ಮಾರ್ಚ್ 4ನೇ ತಾರೀಖು, ನಿಮ್ಮ ಜಿಲ್ಲಾ ಮಂತ್ರಿಗಳು ಹೇಳುವುದು ಮಾರ್ಚ್ 7ನೇ ತಾರೀಖು. ಅಧಿಕಾರಿಗಳು ಒಂದು ರೀತಿ ಹೇಳಿಕೆ ಕೊಡುತ್ತಾರೆ, ಮುಖ್ಯಮಂತ್ರಿಗಳು ಒಂದು ರೀತಿ ಹೇಳಿಕೆ ಕೊಡುತ್ತಾರೆ ಎನ್ನತಕ್ಕಂಥ ಮಾತನ್ನು ತಾವು ಈ ಭಾಗದಿಂದ ಚರ್ಚೆ ಮಾಡಿದ್ದೀರಿ. ನಂತರ ಒಂದು ವಿಷಯವನ್ನು ಅಂದಿನ ಮುಖ್ಯಮಂತ್ರಿಗಳಿಗೆ ಪ್ರಸ್ತಾಪ ಮಾಡಿದ್ದೀರಿ. ಆವತ್ತಿನ ಮುಖ್ಯಮಂತ್ರಿಗಳಿಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ನಿಮಗೆ ಹೆಲಿಕಾಪ್ಟರನ್ನು ಏತಕ್ಕಾಗಿ ಕೊಟ್ಟಿದ್ದೇವೆ? ಮೋಜು ಮಾಡಲು ಅಥವಾ ಸ್ವಂತ ಓಡಾಟ ಮಡಲು ಕೊಟ್ಟಿದ್ದೇವಾ? ಈ ವಿಚಾರವನ್ನು ತಾವು ಈ ಭಾಗದಿಂದ ಕುಳಿತು ಚರ್ಚೆ ಮಾಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಅದನ್ನು ಅವರು 2000ದಲ್ಲಿ ಹೇಳಿದ್ದಾರೆ

ಶ್ರೀ ಹೆಚ್. ಡಿ. ಕುಮಾರಸ್ವಾಮಿ: ಇಲ್ಲಾ 1998ರಲ್ಲಿ ಜೆ. ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಾಗ ಮಾಡಿದ್ದಾರೆ. ಆಗ ನೀವು ವಿರೋಧ ಪಕ್ಷದ ನಾಯಕರಾಗಿದ್ದೀರಿ. ಅವರು ಈ ಕಡೆ ನಮ್ಮ ಭಾಗದಲ್ಲಿ ಇದ್ದರು. ನೀವು ಆ ಕಡೆ ಇದ್ದೀರಿ. ಬೈರೇಗೌಡರು ಕೃಷಿ ಸಚಿವರಾಗಿದ್ದರು. ಸಿದ್ದರಾಮಣ್ಣನವರು ಹಣಕಾಸು ಸಚಿವರಾಗಿದ್ದರು. ಜೆ. ಹೆಚ್. ಪಟೇಲರು ಮುಖ್ಯಮಂತ್ರಿಯಾಗಿದ್ದರು. ಆ ಸಂದರ್ಭದಲ್ಲಿ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದರು. ಆವತ್ತು ತಾವು ಹೆಲಿಕಾಪ್ಟರ್ ವಿಷಯವನ್ನು ಚರ್ಚೆ ಮಾಡಿದ್ದೀರಿ. ನೀವು ಹೊಸದಾಗಿ ಸರ್ಕಾರವನ್ನು ರಚನೆ ಮಾಡಿದಿರಲ್ಲ. ಸರ್ಕಾರದ ಜೊತೆಗೆ ಈ ರಾಜ್ಯದಲ್ಲಿ ಐದಾರು ಹೆಲಿಕಾಪ್ಟರ್ ಓಡಾಡಿದವು, ಒಂದೊಂದು ನಿಮಿಷವನ್ನೂ ವ್ಯರ್ಥಮಾಡದೇ ಒಡಾಡಿದವು.

ಶ್ರೀ ಎಂ. ಶ್ರೀನಿವಾಸ್: ಹೆಲಿಕಾಪ್ಟರ್‌ನಲ್ಲಿ ಜಾಸ್ತಿ ಓಡಾಡುವುದನ್ನು ನೀವೇ ತೋರಿಸಿಕೊಟ್ಟಿರಿ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ: ಶ್ರೀನಿವಾಸ್ ರವರೆ ನಿಮಗೆ ಗೊತ್ತಿಲ್ಲ ಕುಳಿತುಕೊಳ್ಳಿ. ನೀವು ಉತ್ತರಳ್ಳಿ ಬಿಟ್ಟು ಹೊರಗಡೆ ಬಂದಿಲ್ಲ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್: ನೀವು ಹೆಲಿಕಾಪ್ಟರ್‌ನಲ್ಲಿ ಸ್ವಲ್ಪ ಜಾಸ್ತಿ ಓಡಾಡುತ್ತೀರ, ನಾವೇ ಅಲ್ಲ ಓಡಾಡಿದ್ದು ಎಂದು ನಾನು ಹೇಳಿದ್ದು, ಬೇರೆ ಏನನ್ನೂ ನಾನು ಹೇಳಿಲ್ಲ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ: ನಾವೂ ಓಡಾಡಿದ್ದೇವೆ ತಾವು ಕುಳಿತುಕೊಳ್ಳಿ. ನಾವು ಮಜಾ ಮಾಡಲು ಓಡಾಡಲಿಲ್ಲ. ಈ ರಾಜ್ಯದಲ್ಲಿ 20 ತಿಂಗಳಿನಲ್ಲಿ ಒಂದೊಂದು ಜಿಲ್ಲೆಗೆ 15–20 ಬಾರಿ ಭೇಟಿ ಕೊಟ್ಟಿದ್ದೇನೆ. ಈ ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ಓಡಾಡಿದ್ದೇನೆ. ಮಜಾ ಮಾಡಲು ಒಡಾಡಿಲ್ಲ. ತಾವು ಕುಳಿತುಕೊಳ್ಳಿ. ತಮಗೆ ಕಗ್ಗಲಿಪುರ ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ ಕುಳಿತುಕೊಳ್ಳಿ. ಸರ್ಕಾರ ರಚನೆ ಮಾಡಲು ಪಾಪ ಐದಾರು ಹೆಲಿಕಾಪ್ಟರ್‌ನ್ನು ಓಡಾಡಿಸಿದಿರಿ. ನಾನು ಪತ್ರಿಕೆಗಳಲ್ಲೂ ನೋಡಿದ್ದೇನೆ. ಇದೇ ಕೆಲಸವನ್ನು ನೀವು ಏನಾದರೂ ಈ ರಾಜ್ಯದಲ್ಲಿ ಗೊಬ್ಬರದ ಸಮಸ್ಯೆ ಪ್ರಾರಂಭವಾಯಿತಲ್ಲ. ಇಲ್ಲಿ 30 ಜನ ಮಂತ್ರಿಗಳು ಕುಳಿತಿದ್ದೀರಲ್ಲಾ, ಸಮಯ ಸ್ವಲ್ಪ ನೋಡಿ ಅವರನ್ನು ಆ ಕಡೆ ಏನಾದರೂ ಕಳುಹಿಸಿದ್ದರೆ ಆಗ ಮೆಚ್ಚಿಕೊಳ್ಳುತ್ತಿದ್ದೆ, ನಿಜಕ್ಕೂ ನೀವು ರೈತ ಮುಖ್ಯಮಂತ್ರಿ ಮಾತಿಗೂ ಕೃತಿಗೂ ವ್ಯತ್ಯಾಸವಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಿದ್ದೆ, ಇಷ್ಟಕ್ಕೆ ಇದನ್ನು ನಿಲ್ಲಿಸುತ್ತೇನೆ. ಇನ್ನೊಂದು ಕಡೆ ಹೇಳುತ್ತೀರಿ. ತಾವು ಏಕೆ ಜಿಲ್ಲಾ ಮಂತ್ರಿಗಳಾಗಿದ್ದೀರಿ ಸ್ವಾಮಿ? ಏತಕ್ಕಾಗಿ ನಿಮಗೆಲ್ಲಾ ಗೂಟದ ಕಾರನ್ನು ವ್ಯವಸ್ಥೇ ಮಾಡಿರತಕ್ಕದ್ದು, ನಿಮ್ಮ ಜಿಲ್ಲೆಯಲ್ಲಿ ಇಂಥದ್ದೇ ಪರಿಸ್ಥಿತಿ ಬಂದಾಗ 24 ಗಂಟೆಯೊಳಗಾಗಿ ಅಲ್ಲಿಗೆ ಧಾವಿಸಿ ಹೋಗಿ ಅಲ್ಲಿನ ವಾಸ್ತವ ಪರಿಸ್ಥಿತಿಯನ್ನು ನೋಡಿಕೊಂಡು ಜಿಲ್ಲಾಧಿಕಾರಿಯನ್ನು ಎಳೆದುಕೊಂಡು ಬಂದು ರೈತರಿಗೆ ಏನು ಕೊಡಿಸಬೇಕಾಗಿತ್ತೋ ಅದನ್ನು ಕೊಡಿಸಬೇಕಾಗಿತ್ತು. ಇದು ಈ ಭಾಗದಿಂದ ಹೇಳತ್ತೀರಿ. ಆದರೆ, ಇವತ್ತು ಸಮಾಜಘಾತುಕ ಶಕ್ತಿಗಳು ಕೆಲವು ರಾಜಕೀಯ ಶಕ್ತಿಗಳು ಒಂದು ರೀತಿ ಪಿತೂರಿ ಷಡ್ಯಂತರವನ್ನು ನಡೆಸುತ್ತಿದ್ದೀರೆಂದು ಪದೇ ಪದೇ ಹೇಳುತ್ತಿದ್ದೀರಿ. ನಾನು ಆವತ್ತು ವಿಶ್ವಾಸ ಮತವನ್ನು ಪಡೆಯತಕ್ಕ ದಿವಸ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ, ನಾನು ರಾಜಕೀಯವನ್ನು ಬೆರೆಸಿ ಮಾತನಾಡಲಿಲ್ಲ. ಈ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದಾಗ ಸಂಪೂರ್ಣ ಸಹಕಾರವನ್ನು ಕೊಡಲು ಸಿದ್ಧರಿದ್ದೇವೆ ಈ ಭಾಗದಿಂದ ಎನ್ನತಕ್ಕ ಮಾತನ್ನು ಆವತ್ತು ಹೇಳಿದ್ದೇನೆ. ಇವತ್ತು ಸರ್ಕಾರ ನೀವು ಎಲ್ಲಿ ಎಡವಿದೀರಿ, ಎಡವಿರತಕ್ಕ ತಪ್ಪುಗಳೇನು ಎನ್ನತಕ್ಕದ್ದನ್ನು ನೀವು ಇವತ್ತು ಮನವರಿಕೆ ಮಾಡಕೊಂಡರೆ ಸಾಕು. ಇವತ್ತು ಹಲವಾರು ರೀತಿಯ ಹೇಳಿಕೆಗಳನ್ನು ಕೊಟ್ಟುಕೊಂಡು ಬಂದಿದ್ದೀರಿ. ಅದರ ಕಟ್ಟಿಂಗ್‌ಗಳನ್ನು ಇಟ್ಟಿದ್ದೇವೆ. 6ನೇ ತಾರೀಖಿಗೆ ನಾನು ಹೇಳಿದೆ, ಯಾವ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದ 24 ಗಂಟೆಗಳಲ್ಲಿ ಲಾಠಿ ಪ್ರಹಾರದ ಕೆಲಸ ಈ ರಾಜ್ಯದಲ್ಲಿ ನಡೆದಿದೆ. ಮುಂದಿನ ದಿನಗಳಲ್ಲಿ ನೀವು ಯಾವ ರೀತಿಯಾಗಿ ನಡೆಯಬಹುದು ಎಂಬುದನ್ನು 24 ಗಂಟೆಗಳಲ್ಲಿ ಈ ರಾಜ್ಯದ ರೈತರಿಗೆ ಸಂದೇಶವನ್ನು ಕೊಟ್ಟಿದ್ದೀರಿ ಎಂಬ ಮಾತನ್ನು ಈ ಸ್ಥಳದಿಂದ

ಅಂದು ಹೇಳಿದ್ದೇನೆ. 9ನೇ ತಾರೀಖು ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ಘಟನೆ ನಡೆಯಿತು. ಅಲ್ಲೂ ಗೋಲೀಬಾರ್ ಪ್ರಕರಣ ಆಗಬೇಕಾಗಿತ್ತು. ಆದರೆ ಕೆಲವರು ಮುಂಜಾಗ್ರತವಾಗಿ ಕ್ರಮ ತೆಗೆದುಕೊಂಡಿದ್ದರಿಂದ ಕೆಲವು ಪ್ರಮುಖರು ಹೋಗಿ ಈ ರೀತಿಯ ಘಟನೆಗೆ ಅವಕಾಶ ಕೊಡದಿರತಕ್ಕ ಕೆಲಸವನ್ನೇನು ಜನಪ್ರತಿನಿಧಿಗಳು ಮಾಡಿದ್ದಾರೆ, ಇವತ್ತು ನೀವೇನು ಜನಪ್ರತಿನಿಧಿಯಾಗಿದ್ದೀರಿ, ಆ ಜಿಲ್ಲೆಯಲ್ಲಿ ನಡೆದಿರುವ ಘಟನೆ ನಿಮ್ಮ ಗಮನಕ್ಕೂ ಬಂದಿದೆ. ಆದರೆ ಮಾರನೆ ದಿವಸ ಏಕೆ ಹಾವೇರಿಯಲ್ಲಿ ಗೋಲಿಬಾರ್ ಘಟನೆ ನಡೆಯಿತು? ಏತಕ್ಕೋಸ್ಕರ ನಡೆಯಿತು? ಅದಕ್ಕೆ ಕಾರಣವೇನು? ಗೋಲಿಬಾರ್‌ನ ಅವಶ್ಯಕತೆ ಇತ್ತೇ? ಪ್ರತಿಭಟನೆ ನಡೆಸಲು ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನರು ಸೇರಿದ್ದರೇ? ಆವತ್ತು ಹಾವೇರಿ ನಗರದ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಬೆಳಗ್ಗೆಯಿಂದ ಅಲ್ಲೇ ಇದ್ದಾರೆ. ಅಂದು ಬೆಳಿಗ್ಗೆ ನಿಮ್ಮ ಪಕ್ಷದ ವತಿಯಿಂದ ಕೇಂದ್ರ ಸರ್ಕಾರದ ತೈಲ ಬೆಲೆ ಏರಿಕೆಯ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆಯನ್ನು ಪ್ರಾರಂಭ ಮಾಡಿದ್ದೀರಿ. ಕೇಂದ್ರ ಸರ್ಕಾರದ ವಿರುದ್ಧ ದರ ಕಡಿಮೆ ಮಾಡಬೇಕೆಂದು ಪ್ರತಿಭಟನೆ ಮಾಡಿದ್ದೀರಿ. ಬಹಶಃ ಆವತ್ತಿನ ದಿವಸ ನಿಮ್ಮ ಸರ್ಕಾರ ಇದ್ದರೂ ಏನು ಮಾಡುತಿದ್ದರೋ ಗೊತ್ತಿಲ್ಲ. ಆವತ್ತು ನಿಮ್ಮ ಸರ್ಕಾರ ಇದ್ದರೂ ಬೆಲೆ ಏರಿಸಬೇಕಾಗುತ್ತಿತ್ತು ಎಂದು ನನಗೆ ಕಾಣಿಸುತ್ತದೆ. ಅದರ ಅನುಭವವನ್ನು ನೀವೇ ಹೇಳಬೇಕು. ಅದು ನನಗೆ ಗೊತ್ತಿಲ್ಲ. ನೀವೇನು ಎಲ್ಲಾ ಕಡೆ ಪ್ರತಿಭಟನೆ ನಡೆಸುತ್ತಿದ್ದೀರಿ, ಇಡೀ ರಾಜ್ಯದ ಉದ್ದಗಲ ಬಿ.ಜೆ.ಪಿ. ಪಕ್ಷದ ವತಿಯಿಂದ, ಏನು ಪೆಟ್ರೋಲಿಯಂ ಪ್ರಾಡಕ್ಟ್ ಗಳ ಬೆಲೆ ಹೆಚ್ಚಿಸಿದಂಥ ಸಂದರ್ಭದಲ್ಲಿ ಅದರ ವಿರುದ್ಧ ಪ್ರತಿಭಟನೆಯನ್ನು ಹಮ್ಮಿಕೊಂಡಂಥ ನಿಮ್ಮ ಪಕ್ಷದ ಕಾರ್ಯಕ್ರಮಗಳೇನಿತ್ತು ಆವತ್ತು ಬೆಳಿಗ್ಗೆ ಆ ಕಾರ್ಯಕ್ರಮವನ್ನು ನಡೆಸುತ್ತೀರಿ. ಬೀಜ ತರಲು ಹೋದಂಥವನ್ನು ಇವತ್ತು ಏನು ಸಂಜಯಗಾಂಧಿ ಆಸ್ಪತ್ರೆಯಲ್ಲಿ ಮಲಗಿದ್ದಾನೆ ಅವನು ಏನು ಹೇಳಿದ್ದಾನೆ "ಹೊನ್ನತ್ತಿಯ ಬೆನ್ನತ್ತಿರುವ ಗೋಲಿ" ಎನ್ನತಕ್ಕ item ನಲ್ಲಿ ಸಂಜಯಗಾಂಧಿ ಆಸ್ಪತ್ರೆಯಲ್ಲಿ ಪುಟ್ಟಪ್ಪನ ಯೋಗಕ್ಷೇಮ ನೋಡಿಕೊಳ್ಳುತ್ತಿರುವ ಆತನ ಭಾವ ಚನ್ನಪ್ಪ ಚಂದ್ರ ಪಟ್ಟಣ್ ಪ್ರಕಾರ ಅಂದು ನಡೆದ ಪ್ರತಿಭಟನೆಯಲ್ಲಿ ಪುಟ್ಟಪ್ಪ ಭಾಗಿಯಾಗಿರಲಿಲ್ಲ. ಹಾವೇರಿ ಪಟ್ಟಣದಲ್ಲಿ ಪೆಟ್ರೋಲ್ ಬೆಲೆ ಏರಿಕೆ ಖಂಡಿಸಿ ಬಿ.ಜೆ.ಪಿ. ಯವರು ನೀಡಿದ ಪ್ರತಿಭಟನೆ ನಡೆಯುತ್ತಿತ್ತೇ ಹೊರತು ರಸಗೊಬ್ಬರ ಕೊರತೆ ವಿರೋಧಿಸಿ ರೈತರ ಮುಷ್ಕರ ಇರಲಿಲ್ಲ. ಪ್ರತಿಭಟನೆ ಮುಗಿದ ನಂತರ ರೈತಸಂಪರ್ಕ ಕೇಂದ್ರದ ಬಳಿ ಬಂದು ರಸಗೊಬ್ಬರ ಕೊರತೆ ಕುರಿತು ಕೆಲ ರೈತ ಮುಖಂಡರು ಚರ್ಚೆ ನಡೆಸಿದರು. ಬಿ.ಜೆ.ಪಿ.ಯವರ ಪ್ರತಿಭಟನೆ ಮುಗಿದ

ನಂತರ ರೈತರು ಅಲ್ಲಿ ಬಂದು ಅಲ್ಲಿಯ ನಿಮ್ಮ ಪ್ರಮುಖ ಜನಪ್ರತಿನಿಧಿಗಳನ್ನು ಕೇಳುತ್ತಾರೆ. ಅಲ್ಲಿಂದ ಪ್ರಾರಂಭವಾಯಿತು. ಇಲ್ಲಿ ಬಸ್ ಸ್ಟ್ಯಾಂಡ್‌ನಲ್ಲಿ ಇದ್ದಂಥವರ ಮೇಲೆ ಹೆಣ್ಣುಮಕ್ಕಳ ಮೇಲೆ ಸಹ ಪೊಲೀಸ್ ನವರು ಏನು ಮಾಡಿದರು, "ಗೋಲೀಬಾರ್ ಆಗಿದ್ದು ಏಕೆ" ಹೊಸಮನೆ ಸಿದ್ದಪ್ಪ ವೃತ್ತದಲ್ಲಿ ರೈತರ ಪ್ರತಿಭಟನೆ ಮುಂದುವರೆದ ಸಂದರ್ಭದಲ್ಲಿ ಬಸ್ ನಿಲ್ದಾಣ ಪ್ರವೇಶಿಸಿದ ಕೆಲವು ಪೊಲೀಸರು ಅಲ್ಲಿದ್ದ ಪ್ರಯಾಣಿಕರು, ಪತ್ರಕರ್ತರನ್ನು ಹಿಗ್ಗಾಮುಗ್ಗಾ ಥಳಿಸಿದ್ದೇ ಅಲ್ಲದೆ ಮುಂದಿನ ಎಲ್ಲಾ ಘಟನೆಗೂ ಕಾರಣವಾಯಿತು ಎನ್ನಲಾಗುತ್ತಿದೆ. ಈ ವೇಳೆ ತೀವ್ರವಾಗಿ ಗಾಯಗೊಂಡ ವ್ಯಕ್ತಿಯೊಬ್ಬ ಮೂರ್ಛೆಹೋದ ಅಲ್ಲಿದ್ದ ಮಾಧ್ಯಮದವರು ಪ್ರಥಮ ಚಿಕಿತ್ಸೆ ನೀಡಿದರು. ಪೊಲೀಸ್ ನವರ ಈ ವರ್ತನೆಯಿಂದ ಮಹಿಳೆಯರು ಭಯಭೀತರಾಗಿ ಓಡತೊಡಗಿದರು. ಸುದ್ದಿ ಕಾಡ್ಗಿಚ್ಚಿನಂತೆ ಹರಡಿದಾಗ ಪ್ರತಿಭಟನಾಕಾರರು ತೀವ್ರ ಆಕ್ರೋಶಗೊಂಡು ಕಲ್ಲುತೂರಾಟವನ್ನು ಚುರುಕುಗೊಳಿಸಿದರು. ಉದ್ರಿಕ್ತ ಗುಂಪನ್ನು ಸದುರಿಸಲು ಪೊಲೀಸರಿಗೆ ಗೋಲಿಬಾರ್ ಅನಿವಾರ್ಯವಾಯಿತು. ಇದು ಯಾರು ಶಾಂತಿಯಿಂದ ಹೋರಾಟ ಮಾಡುತ್ತಿದ್ದರು, ಅಂಗಡಿಗಳ ಮುಂದೆ ಗೊಬ್ಬರಕ್ಕೆ ಕ್ಯೂ ನಿಂತಿದ್ದರೋ, ಕಾರಣ ಎಲ್ಲಿ ಆಯಿತು ಎಂಬುದನ್ನು ಇವತ್ತು ಸರ್ಕಾರ ಅರಿಯಬೇಕಾಗುತ್ತದೆ. ಪದೇ ಪದೇ ವಿರೋಧ ಪಕ್ಷದವರು ಈ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರಲು ಪಿತೂರಿ ನಡೆಸುತ್ತಿದ್ದಾರೆ, ಷಡ್ಯಂತರ ನಡೆಸುತ್ತಿದ್ದಾರೆ ಮುಂತಾದ ಪದಗಳನ್ನು ಬಳಸುತ್ತಿದ್ದೀರಿ. ಇದು ಆದ ನಂತರ ಮಾರನೆ ದಿವಸ ಮಾನ್ಯ ಮುಖ್ಯ ಮಂತ್ರಿಯವರು ಅಲ್ಲಿಗೆ ಹೋಗುತ್ತಾರೆ. ಅದಕ್ಕೂ ಮೊದಲು ಅವರು ಏನು ಹೇಳಿಕೆ ಕೊಡುತ್ತಾರೆಂದರೆ, ಅದು 6ನೇ ತಾರೀಖು, ಹಾವೇರಿಯಿಂದ ಶಿಕಾರಿಪುರಕ್ಕೆ ಗೊಬ್ಬರ, ಹಾವೇರಿಗೆ ಏನು 400 ಟನ್ ಗೊಬ್ಬರ ಅಲಾಟ್ ಆಗಿರುತ್ತದೆ ಅದನ್ನು ಶಿಕಾರಿಪುರಕ್ಕೆ ತೆಗೆದುಕೊಂಡು ಹೋಗತಕ್ಕ ಸಂದರ್ಭದಲ್ಲಿ ಹತ್ತು ಲಾರಿಗಳನ್ನು ಸವಳಂಗ ಕ್ರಾಸ್ ಬಳಿ ರೈತರು ನಿಲ್ಲಿಸುತ್ತಾರೆ. ಇದನ್ನು ನಾವು ಅಲ್ಲಿಗೆ ಕೊಡಲು ಸಾಧ್ಯವಿಲ್ಲ, ನಮಗೇ ಕೊಡಬೇಕು, ನಮಗೂ ಇಲ್ಲಿ ಗೊಬ್ಬರದ ಕೊರತೆ ಇದೆಯೆಂದು ಪ್ರತಿಭಟನೆ ನಡೆಸುತ್ತಾರೆ. ಇದನ್ನು ಕಾಂಗ್ರೆಸ್ ಪಕ್ಷವಾಗಲಿ, ಜನತಾದಳ ಪಕ್ಷವಾಗಲಿ ಇದನ್ನು ಏನೋ ರಾಜಕೀಯವಾಗಿ ದುರುಪಯೋಗ ಪಡಿಸಿಕೊಳ್ಳಬೇಕೆಂದು ಮಾಡಿದಂಥ ಘಟನೆಯಲ್ಲ ಇದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಪದೇ ಪದೇ ಇದರ ಬಗ್ಗೆ ತಾವು ಹೇಳಿಕೆಗಳನ್ನು ಕೊಡುತ್ತಿದ್ದೀರಿ. "ಗೊಬ್ಬರ ಸಮಸ್ಯೆ ಹಂತ ಹಂತವಾಗಿ ಬಗೆಹರಿಯುತ್ತದೆ. ಅನಗತ್ಯವಾಗಿ ಕೆಲವರು ಗೊಬ್ಬರ ರಾಜಕೀಯ ಮಾಡುತ್ತಿದ್ದಾರೆ, ಅವರು ಯಾರು ಎಂಬುದು ನನಗೆ ಗೊತ್ತು, ರೈತರ ಹಿತದೃಷ್ಟಿಯಿಂದ

ಗೊಬ್ಬರ ರಾಜಕೀಯ ಕೈ ಬಿಡಿ, ಬಂದ್ ಮಾಡುವುದರಿಂದ, ಬಸ್ಸಿಗೆ ಕಲ್ಲು ಹೊಡೆಯುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ರಾಜ್ಯಪಾಲರ ಅವಧಿಯಲ್ಲಾದ ಸಮಸ್ಯೆಗೆ ನಾನು ಪರಿಹಾರ ನೀಡುವೆ" ಎಂದು ನೀವೇ ಹೇಳಿದ್ದೀರಿ. 11ನೇ ತಾರೀಖು ಬೆಳಿಗ್ಗೆ ನೀವು ಆ ಗೋಲಿಬಾರ್ ನಲ್ಲಿ ಮೃತಪಟ್ಟಮತಹ ಕುಟುಂಬಕ್ಕೆ ಭೇಟಿ ಕೊಟ್ಟು, ದೆಹಲಿಗೆ ಹೋಗತಕ್ಕ ಕಾರ್ಯಕ್ರಮ ನಿಗದಿ ಮಾಡುತ್ತೀರಿ. ಆಸ್ಪತ್ರೆಗೂ ಕೂಡ ಭೇಟಿ ಕೊಡುತ್ತೀರಿ. ಗುಂಡೇಟುತಿಂದಂತಹ ಹಲವಾರು ಜನ ರೈತರು ಆಸ್ಪತ್ರೆಯಲ್ಲಿ ಮಲಗಿರುತ್ತಾರೆ. ಹೆಚ್ಚಿನ ಗಾಯವಾಗಿರುವವರಿಗೆ 50 ಸಾವಿರ ರೂಪಾಯಿಗಳನ್ನು ಮತ್ತು ಸಣ್ಣ ಪುಟ್ಟ ಗಾಯವಾಗಿರುವವರಿಗೆ 25 ಸಾವಿರ ರೂಪಾಯಿಗಳನ್ನು ತಾವು ಘೋಷಣೆ ಮಾಡಿದಿರಿ. ಆಸ್ಪತ್ರೆಗೆ ಸೇರಿ 3–4 ದಿವಸವಾದರೂ, ಯಾವ ರೈತ ಗುಂಡೇಟು ಬಿದ್ದು ಆಸ್ಪತ್ರೆಯಲ್ಲಿ ಮಲಗಿರುತ್ತಾನೋ, ಅವನ ದುಡಿಮೆ ಮೇಲೆ ಜೀವನ ಮಾಡತಕ್ಕ ಕುಟುಂಬಕ್ಕೆ ಎರಡು ಹೊತ್ತಿನ ಊಟಕ್ಕೂ ಗತಿ ಇಲ್ಲದೇ ಇರತಕ್ಕ ವಿಷಯ ಪತ್ರಿಕೆಗಳಲ್ಲು ಬರೆಯುತ್ತಾರೆ. ನೀವು ಏನೋ ಒಂದು ಕಾಟಾಚಾರಕ್ಕೆ ಭೇಟಿ ಕೊಡುತ್ತೀರಿ. ಮಾನ್ಯ ವಿರೋಧ ಪಕ್ಷದ ನಾಯಕರಾದ ಖರ್ಗೆಯವರು ಬೆಳಿಗ್ಗೆ ಆ ಬಗ್ಗೆ ಹೇಳಿದರು.ನಿಮ್ಮ ಜಿಲ್ಲೆಯ, ನಿಮ್ಮ ತಾಲ್ಲೂಕಿನಲ್ಲಿ ರೈತರ ಆತ್ಮಹತ್ಯೆ ಪ್ರಕರಣವಾಯಿತು. ಅದು ಆತ್ಮಹತ್ಯೆ ಅಲ್ಲವೆಂದು ನೀವು ಈಗ ಹೇಳುತ್ತಿದ್ದೀರಿ. ಅದು ಗೊಬ್ಬರಕ್ಕಾಗಿ ಮಾಡಿಕೊಂಡ ಆತ್ಮಹತ್ಯೆ ಅಲ್ಲದೇ ಇದ್ದರೆ, ನೀವು ಅಲ್ಲಿಗೆ ಹೋಗಲೇಬಾರದಿತ್ತು. ಏತಕ್ಕಾಗಿ ತಾವು ಅಲ್ಲಿಗೆ ಹೋದಿರೋ ನನಗೆ ಗೊತ್ತಾಗುತ್ತಿಲ್ಲ. ನೀವು ಅಲ್ಲಿಗೆ ಹೋದಾಗ, ನೀವು ರೈತನ ಶವಕ್ಕೆ ಎಡಗೈಯಲ್ಲಿ ಶ್ರೀಗಂಧದ ಹಾರವನ್ನು ಎಸೆದಂತಹ ಘಟನೆ ಏನಿದೆ, ಅದು ಟಿ.ವಿ.ಯಲ್ಲಿ ಪ್ರಸಾರವಾಗಿದೆ. ಅದನ್ನು ಇಡೀ ರಾಜ್ಯದ ಜನತೆ ನೋಡಿದೆ. ನೀವು ಆಸ್ಪತ್ರೆಯಲ್ಲಿ ಯಾವ ರೀತಿ ನಡೆದುಕೊಂಡಿರಿ ಎಂಬುದನ್ನು ನಾನು ಹೇಳುತ್ತೇನೆ. ನಾನು ಮಾರನೇ ದಿವಸ ಅಲ್ಲಿಗೆ ಹೋಗಬೇಕೋ ಬೇಡವೋ ಎಂಬ ದ್ವಂದ್ವ ಮನಸ್ಸಿನಿಂದಲೇ ಹೋದೆ. ಅದಕ್ಕೆ ಕಾರಣ ಆ ರೈತರು ಹೋರಾಟ ಮಾಡಿ, ಆ ಗೋಲಿಬಾರ್ ಪ್ರಕರಣದ ಏನು ನಡೆಯಿತು. ಅಲ್ಲಿಗೆ ಹೋದಂತಹ ಪ್ರತಿಯೊಬ್ಬ ರಾಜಕಾರಣಿಗಳಿಗೂ ಮತ್ತು ಜನಪ್ರತಿನಿಧಿಗಳಿಗೂ ಆ ಜನಗಳು ಆಕ್ರೋಶದಲ್ಲಿ ಮಾತನಾಡಿರತಕ್ಕ ಪತ್ರಿಕಾ ವರದಿಗಳನ್ನು ನಾನು ಗಮನಿಸಿದೆ. ರಾಜಕಾರಣಿಗಳ ಬಗ್ಗೆ ಮತ್ತು ಜನ ಪ್ರತಿನಿಧಿಗಳ ಬಗ್ಗೆ ಜನಗಳಲ್ಲಿ ಒಂದು ರೀತಿಯ ಕೀಳು ಮಟ್ಟದ ಭಾವನೆ ಮೂಡತಕ್ಕಂಥ ರೀತಿಯ ವಾತಾವರಣ ಅಲ್ಲಿದೆ ಎಂಬ ವರದಿಗಳನ್ನು ಗಮನಿಸಿದೆ. ಆದರೂ ನಾನು ಅಲ್ಲಿಗೆ ಹೋಗದಿದ್ದರೆ ತಪ್ಪಾಗಬಹುದು ಎಂಬ ಕಾರಣದಿಂದ ನಾನು

ಅಲ್ಲಿಗೆ ಭೇಟಿ ಕೊಟ್ಟೆ ಏಕೆಂದರೆ, ನಾನು ಅಲ್ಲಿಗೆ ಭೇಟಿ ಕೊಟ್ಟರೆ, ನೀವು ಮತ್ತೆ ಇದು ರಾಜಕೀಯ ಪಿತೂರಿ ನಡೆಸಲಿಕ್ಕಾಗಿ ವಿರೋಧ ಪಕ್ಷದವರು ಹೋಗಿದ್ದಾರೆಂದು ಇಲ್ಲೊಂದು ಹೇಳಿಕೆ ಕೊಡುತ್ತೀರಿ. ಒಂದು ರೀತಿಯಲ್ಲಿ ಏನು ಮಾಡಬೇಕೆಂಬುದೇ ನಮಗಿಲ್ಲಿ ಗೊತ್ತಾಗುತ್ತಿಲ್ಲ. ನಿಮ್ಮನ್ನು ಕೇಳಿಯೇ ಪ್ರತಿಯೊಂದು ಹೆಜ್ಜೆಯನ್ನು ನಾವು ಇನ್ನು ಮುಂದೆ ಇಡಬೇಕಾದಂಥಹ ಪರಿಸ್ಥಿತಿ ಈ ರಾಜ್ಯದಲ್ಲಿ ಬರಬಹುದೋ ಏನೋ, ನನಗೆ ಗೊತ್ತಿಲ್ಲ. ಇತ್ತೀಚಿನ ನಿಮ್ಮ ಹೇಳಿಕೆಗಳನ್ನು ನಾವು ಗಮನಿಸಬಹುದು. ಅಲ್ಲಿ ಆಸ್ಪತ್ರೆಗೆ ಹೋದಾಗ ನನಗೆ ಆ ನೋವನ್ನು ಹೇಳಿಕೊಳ್ಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದರು, ಹೋದರು. ಇವತ್ತು ನಮಗೆ ಊಟಕ್ಕೆ ಗತಿ ಇಲ್ಲ. ನಮ್ಮನ್ನು ಯಾರು ನೋಡಬೇಕು? ಎಂದು ಕೇಳುತ್ತಾರೆ. ಕೊನೆಗೆ ಐದೈದು ಸಾವಿರ ರೂಪಾಯಿಗಳನ್ನು ನಮ್ಮ ಕಾರ್ಯಕರ್ತರ ಮುಖಾಂತರ ಕೊಡಿಸಲು ಏರ್ಪಾಡು ಮಾಡಿದೆ. ಈಗ ಇಲ್ಲಿನ ಸಂಜಯಗಾಂಧಿ ಆಸ್ಪತ್ರೆಗೆ ಅಧಿಕಾರಿಗಳು ತಂದು ಮಲಗಿಸಿರುವ ಪುಟ್ಟಪ್ಪನ ಹೆಂಡತಿಯನ್ನು ಮತ್ತು ಅವರ ತಾಯಿಯನ್ನು ನನ್ನ ಮುಂದೆ ಕರೆದುಕೊಂಡು ಬಂದರು. ಅವರಿಗೆ ಮೂವರು ಸಣ್ಣ ಸಣ್ಣ ಮಕ್ಕಳಿದ್ದಾರೆ. ಯಾರು ಹಾಸಿಗೆ ಮೇಲೆ ಮಲಗಿರುತ್ತಾನೋ ಅವನೇ ಆ ಕುಟುಂಬಕ್ಕೆ ಸಂಪೂರ್ಣ ಆಧಾರ. ನೀವು ಅಲ್ಲಿಗೆ ಹೋದರೆ ತಕ್ಷಣಕ್ಕಾದರೂ ಏನಾದರೂ ಅವರಿಗೆ ತಕ್ಷಣ ವ್ಯವಸ್ಥೆ ಮಾಡಬೇಕೆಂಬ ಮಾನವೀಯ ಮೌಲ್ಯವನ್ನು ನೀವು ಅಲ್ಲಿ ತೋರಿಸಲಿಲ್ಲ. ಮನುಷ್ಯತ್ವವನ್ನೂ ತೋರಿಸಲಿಲ್ಲ ಎಂಬ ಮಾತನ್ನು ಹೇಳಿದರೆ ತಪ್ಪಗಲಾರದು. ಪದ ಸ್ವಲ್ಪ ಕಟುವಾಯಿತೋ ಏನೋ ಗೊತ್ತಿಲ್ಲ. ಆದರೆ ನಡೆದಂತಹ ಘಟನೆ ಅದು. ನಾನು ಅಲ್ಲಿ ಗಮನಿಸಿ ತಕ್ಷಣಕ್ಕೆ ಏನು ವ್ಯವಸ್ಥೆ ಮಾಡಬೇಕೋ ಮಾಡಿದೆವು. ಗೋಲಿಬಾರ್ ಪ್ರಕರಣದ ಬಗ್ಗೆ ಮತ್ತು Law and Order ಬಗ್ಗೆ ಇಲ್ಲಿ ಚರ್ಚೆ ಮಾಡಬಾರದು. ಚರ್ಚೆ ಮಾಡಲಿಕ್ಕೆ ಅವಕಾಶಗಳಿಲ್ಲವೆಂದು ಬೆಳಿಗ್ಗೆ ನೀವು ಇಲ್ಲಿ ಹೇಳಿದಿರಿ. ಮಾನ್ಯ ಖರ್ಗೆಯವರು ಗೃಹ ಸಚಿವರಾಗಿದ್ದಾಗ ವಿಷಯಗಳನ್ನು ತಿಳಿದುಕೊಳ್ಳಲಿಕ್ಕಾಗಿ Karnataka Police Manualನ ಕನ್ನಡ ಅನುವಾದ ಮಾಡಲಾಯಿತು. ಅದರಲ್ಲಿ ಯಾವ ರೀತಿ ಅವರು ಗೋಲಿಬಾರ್ ಮಾಡಬೇಕು? ಎಂದು ಇದೆ. ಆದರೆ ಅಲ್ಲಿ ಯಾವ ರೀತಿ ಗೋಲಿಬಾರ್ ನಡೆಸಿದರು? ನಾನು ಎಲ್ಲವನ್ನೂ ಕೂಡ ಹೇಳಲಿಕ್ಕೆ ಹೋಗುವುದಿಲ್ಲ. ಕೇವಲ ಒಂದೇ ಒಂದು ಪ್ಯಾರಾವನ್ನು ಮಾತ್ರ ಹೇಳಬಯಸುತ್ತೇನೆ.

"ಜನಜಂಗುಳಿ ಆದೇಶವನ್ನು ಉಲ್ಲಂಘಿಸಿದರೆ, ಫಿರಂಗಿಯಿಂದ ನೀರು ಹೊಡೆದರೆ ಮತ್ತು ಅಶ್ರೂವಾಯು ಮತ್ತು ಬೆತ್ತ ಪ್ರಯೋಗ ಅಥವಾ ಆ

> ಎರಡೂ ಪರಿಣಾಮಕಾರಿಯಾಗದಿದ್ದರೆ, ರಬ್ಬರ್ ಗುಂಡು ಹಾರಿಸುವುದು ಪ್ರಯೋಜನವಾಗದಿದ್ದರೆ ಅಥವಾ ಫಲಕಾರಿಯಾಗದಿದ್ದರೆ ಅಥವಾ ತಮ್ಮ ಉದ್ದೇಶ ಸಾಧನೆಯಲ್ಲಿ ವಿಫಲರಾದರೆ ಗುಂಡು ಹಾರಿಸಬಹುದು. ಒಂದು ಅಕ್ರಮ ಕೂಟವನ್ನು ಬಲ ಪ್ರಯೋಗದಿಂದ ಯಾವಾಗ ಚದುರಿಸಬಹುದು ಎಂದು ತೀರ್ಮಾನಿಸುವ ಹೊಣೆಗಾರಿಕೆಯು ಹಾಗೂ ಯಾವ ರೀತಿಯ ಬಲ ಪ್ರಯೋಗ ಮಾಡಬೇಕೆಂದು ತೀರ್ಮಾನಿಸುವ ಜವಾಬ್ದಾರಿ ಆ ದಂಡಾಧಿಕಾರಿಗೆ ಇರುತ್ತದೆ. ಸಾಧ್ಯವಿದ್ದ ಮಟ್ಟಿಗೆ ಗುಂಡು ಹಾರಿಸುವಂತೆ ಆದೇಶಿಸುವ ಮುಂಚೆ ಅಶ್ರುವಾಯು ಮತ್ತು ಬೆತ್ತ ಪ್ರಹಾರ ಮಾಡುವಂತೆ ಅಥವಾ ಎರಡನ್ನೂ ಮಾಡುವಂತೆ ಆದೇಶಿಸಬಹುದು ಮತ್ತು ಗುಂಪಿನ ಮೇಲೆ ಪರಿಣಾಮ ಬೀರಲು ಅವಶ್ಯವಿರುವ ಸಂಖ್ಯೆಯ ಪೊಲೀಸರು ಇಲ್ಲದಿದ್ದರೆ ಬೆತ್ತ ಪ್ರಹಾರವನ್ನು ಪ್ರಾರಂಭಿಸಬಾರದು.

ಇದೆಲ್ಲಾ ಹೇಳಿಕೊಂಡು ಹೋಗಿದ್ದಾರೆ. ಯಾರ ರೀತಿ ಗುಂಡು ಹಾರಿಸಿದ್ದಾರೆ ಎಂಬುದನ್ನು ಇಲ್ಲಿ ಹೇಳಿದ್ದಾರೆ. ಪೊಲೀಸ್ ಇಲಾಖೆಯಿಂದ ಸಿಬ್ಬಂದಿಗಳ್ಯಾರೂ ಗುಂಡು ಹಾರಿಸಲಿಲ್ಲ. ಯಾರೋ ಒಬ್ಬ ಸಾರ್ವಜನಿಕ ಗನ್ ಕಿತ್ತುಕೊಂಡು ಗುಂಡು ಹಾರಿಸಿದ್ದಾನೆ. ಆಮೇಲೆ ಗನ್ ತೆಗೆದು ಎಲ್ಲಿಯೋ ಎಸೆದು ಹೋಗಿದ್ದಾನೆ ಎಂದು ಒಬ್ಬ ಅಧಿಕಾರಿ ಹೇಳುತ್ತಾರೆ. ಪೊಲೀಸ್ ಇಲಾಖೆಯ ಅಧಿಕಾರಿಗಳಿಂದ ಈ ರೀತಿ ಹೇಳಿಕೆ ಬಂದಿದ್ದರೆ, ನಮ್ಮ ಗೃಹ ಸಚಿವರು 'ಗೋಲಿಬಾರ್‌ನ ಅವಶ್ಯಕತೆ ಇರಲಿಲ್ಲ' ಎಂದು ನಿನ್ನೆ ಅಥವಾ ಮೊನ್ನೆ ಹೇಳಿರುವುದನ್ನು ನಾನು ನೋಡಿದ್ದೇನೆ. ಇವತ್ತು ಯಾವ ಒಂದು ಗೋಲಿಬಾರ್ ಪ್ರಕರಣದ ನಡೆಯಿತು, ಆ ಸಂದರ್ಭದಲ್ಲಿ ಅದಕ್ಕೆ ಮ್ಯಾಜಿಸ್ಟ್ರೇಟ್ ಆದೇಶ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ.

> "ಗೋಲಿಬಾರ್‌ಗೆ ಆದೇಶ ನೀಡಿದವರು ಯಾರು? ನಗರದಲ್ಲಿ ಮಂಗಳವಾರ ರೈತರ ಪ್ರತಿಭಟನೆ ವೇಳೆ ಗೋಲಿಬಾರ್ ಮಾಡುವ ಅವಶ್ಯಕತೆಯಿತ್ತೇ? ಇದಕ್ಕೆ ಆದೇಶ ನೀಡಿದವರು ಯಾರು? ಎಂಬ ಪ್ರಶ್ನೆಗಳು ತೀವ್ರ ಚರ್ಚೆಗೆ ಗ್ರಾಸವಾಗಿವೆ. ಗೋಲಿಬಾರ್‌ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಥವಾ ಜಿಲ್ಲಾ ದಂಡಾಧಿಕಾರಿ ಅಥವಾ ತಹಶೀಲ್ದಾರ್

> ಆದೇಶ ನೀಡಬೇಕು. ಆದರೆ ಇವರಲ್ಲಿ ಯಾರೋಬ್ಬರೂ ತಾವು ಆದೇಶ ನೀಡಿದ್ದೇವೆ ಎಂದು ಒಪ್ಪಿಕೊಳ್ಳದೇ ಒಬ್ಬರ ಮೇಲೊಬ್ಬರು ಹೇಳುತ್ತಿರುವುದು ತೀವ್ರ ಕುತೂಹಲದ ವಿಷಯವಾಗಿದೆ. 'ನಾನು ಗೋಲಿಬಾರ್‌ಗೆ ಆದೇಶ ಮಾಡಿಲ್ಲ. ಎಸ್ಪಿಯವರು ಆದೇಶ ಮಾಡಿರಬಹುದು ಎಂದು ತಿಳಿದಿದ್ದೇ ಎಂದು ತಹಶೀಲ್ದಾರ್‌ರವರು ಹೇಳುತ್ತಾರೆ. ಇದೇ ರೀತಿಯ ಉತ್ತರಗಳು ಜಿಲ್ಲಾಧಿಕಾರಿ ಹಾಗೂ ಎಸ್ಪಿಯವರಿಂದಲೂ ಬಂದಿವೆ. ಸಂಜೆ ನಗರಕ್ಕೆ ಆಗಮಿಸಿದ ಅಧಿಕಾರಿಗಳು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಈ ಮಧ್ಯ ತರಾತುರಿಯಲ್ಲಿ ತಹಶೀಲ್ದಾರರ ಕಡೆಯಿಂದ ಲಿಖಿತವಾಗಿ ಗೋಲಿಬಾರ್ ಆದೇಶ ಬರೆಸಿಕೊಳ್ಳುವ ಪ್ರಯತ್ನಗಳು ಪ್ರವಾಸಿ ಮಂದಿರದಲ್ಲಿ ನಡೆಯಿತು, ಇದಕ್ಕೆ ಅವರು ಒಪ್ಪಲಿಲ್ಲ.

ಅಲ್ಲಿ ಹಿರಿಯ ಅಧಿಕಾರಿ ತಹಶೀಲ್ದಾರ್‌ಗೆ ಯಾವ್ಯಾವ ರೀತಿಯಲ್ಲಿ ಬೆದರಿಕೆ ಹಾಕಿದ್ದಾರೆ ಎಂಬುದನ್ನು ದಯವಿಟ್ಟು ನಿಮ್ಮ ನ್ಯಾಯಾಂಗ ತನಿಖೆ ಎಂದು ಈಗೇನು ಹೇಳಿದ್ದೀರಲ್ಲಾ, ಅದರಲ್ಲಿ ಸೇರಿಸಿ. ತಿಪ್ಪೆ ಸಾರಿಸುವ ಕೆಲಸಕ್ಕೆ ನ್ಯಾಯಾಂಗ ತನಿಖೆ ಮಾಡಬೇಡಿ. ಈ ರಾಜ್ಯದಲ್ಲಿ ಅಥವಾ ಈ ದೇಶದಲ್ಲಿ ನ್ಯಾಯಾಂಗ ತನಿಖೆಗಳ ವರದಿಗಳಿಗೆ ಅಂತಿಮವಾಗಿ ಏನು ಗತಿ ಎಂದು ನನಗೆ ಗೊತ್ತಿದೆ. ಹಿಂದೆ ನ್ಯಾಯಾಂಗ ತನಿಖೆ ವರದಿಗಳು ಏನು ಬಂದವು, ಅದಕ್ಕೆ ಯಾರ್‍ಯಾರು ಏನೇನು ಪ್ರಾಯಶ್ಚಿತ ಕೊಟ್ಟಿದ್ದಾರೆ? ಯಾವ್ಯಾವ ರೀತಿಯ ಕ್ರಮಗಳನ್ನು ತೆಗದುಕೊಂಡಿದ್ದಾರೆ ಎಂಬುದನ್ನೆಲ್ಲಾ ನನಗೆ ಗೊತ್ತಿದೆ. ಹಿಂದಿನ ಘಟನೆಗಳನ್ನು ನೋಡಿದ್ದೇವೆ. ಮತ್ತೆ ಅದೇ ಕೆಲಸ ಆಗಬಾರದು. ಇವತ್ತು ನಿಮಗೆ ರೈತರ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ, ಯಾವ ರೈತನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದೀರಿ, ಇವತ್ತು ನೀವು ಆ ಬದ್ಧತೆಯನ್ನು ಪ್ರದರ್ಶನ ಮಾಡಬೇಕು. ನಿಮ್ಮ ಮನಸ್ಸಿನಲಿ ಆ ಸಂಕಲ್ಪ ಇದ್ದರೆ, ತೋರಿಕೆಯಾಗಿ ನ್ಯಾಯಾಂಗ ತನಿಖೆಯನ್ನು ಮಾಡಬೇಡಿ. ಮೊದಲು ಅಲ್ಲಿ ಇರತಕ್ಕಂಥ ಎಲ್ಲಾ ಹಿರಿಯ ಅಧಿಕಾರಿಗಳನ್ನು ವರ್ಗಾಯಿಸತಕ್ಕ ಕೆಲಸ ಮಾಡಿ. ತರಾತುರಿಯಲ್ಲಿ ಕುಳಿತುಕೊಂಡು, ಗೊಬ್ಬರದ ತೊಂದರೆಗಳಿವೆ ಎನ್ನುವುದನ್ನು ಪ್ರತಿನಿತ್ಯ ನೀವು ಪತ್ರಿಕೆಗಳಲ್ಲಿಸ ಗಮನಿಸಿದರೂ, ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ನೀವು ಆವತ್ತು ಜೆ. ಹೆಚ್. ಪಟೇಲ್‌ರ ಸರ್ಕಾರದಲ್ಲಿ ಗೂಟದ ಕಾರು ಮತ್ತು ಹೆಲಿಕಾಪ್ಟರ್‌ಗಳ ಬಗ್ಗೆ ಹೇಳಿದ್ದೀರಿ. ಯಾವ ಜಿಲ್ಲಾ ಮಂತ್ರಿಗಳು ಈ ಒಂದು ಸಮಸ್ಯೆಗಳನ್ನು ಕೈಗೆತ್ತಿಕೊಂಡು ಸ್ಥಳಕ್ಕೆ ಹೋಗಲಿಲ್ಲ. ಇವತ್ತು ಪಾಪ! ನೀವು ವಿಡಿಯೋ ಕಾನ್ಫರೆನ್ಸ್ ಹೊಸದಾಗಿ ಪ್ರಾರಂಭ ಮಾಡಿದ್ದೀರಿ. ವಿಡಿಯೋ

ಕಾನ್ಫರೆನ್ಸ್ ಮುಖಾಂತರ ಅಧಿಕಾರಿಗಳನ್ನು hi-tech ಸಂಸ್ಕೃತಿಗೆ ತರುವುದಕ್ಕೆ ಏನು ಪ್ರಯತ್ನ ಪಡುತ್ತಿದ್ದೀರಿ, ಅದಕ್ಕೆ ನಾನು ಶುಭ ಕೋರುತ್ತೇನೆ. ನಾನು ನಿಮ್ಮ ಜೊತೆ ನೀವು ಕೊಟ್ಟಂತಹ ಸಹಕಾರದಿಂದ ಏನು ಕೆಲಸ ಮಾಡಿದ್ದೇನೆ. ಆಗ ನನಗೆ ಅಧಿಕಾರಿಗಳ ಬಗ್ಗೆ ಗೊತ್ತಾಗಿದೆ. ಅಧಿಕಾರಿಗಳು ಯಾವ ರೀತಿಯಿಂದ ಕೆಲಸ ಮಾಡುತ್ತಾರೆ ಎನ್ನುವುದನ್ನೂ ಸಹ ನಾನು ಗಮನಿಸಿದ್ದೇನೆ. ನಿಮ್ಮ ವಿಡಿಯೋ ಕಾನ್ಫರೆನ್ಸ್ ಎಷ್ಟ ಮಟ್ಟಿಗೆ ಯಶಸ್ವಿಯಾಗುತ್ತದೆ ಎನ್ನುವುದನ್ನು ಮುಂದಿನ ದಿನಗಳಲ್ಲಿ ಕಾದು ನೋಡೋಣ. ಗೋಲಿಬಾರ್‌ಗೆ ಆದೇಶ ಯಾರು ನೀಡಿದರು ಎಂಬ ಬಗ್ಗೆ ನಿಮಗೆ ಇನ್ನೂ ಗೊತ್ತಿಲ್ಲ. ಘಟನೆಯಾಗಿ ನಾಲ್ಕು ದಿವಸಗಳಾದ ಮೇಲೂ ಗೃಹ ಸಚಿವರು ಅಲ್ಲೆಲ್ಲೋ 'ಇನ್ನೂ ನಮಗೆ ಯಾರು ಆದೇಶ ಮಾಡಿದರೂ?' ಎನ್ನುವುದು ಗಮನಕ್ಕೆ ಬಂದಿಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ.

ರೈತರ ಆತ್ಮಹತ್ಯೆ ಪ್ರಕರಣಗಳು ಶುರುವಾಗಿವೆ, ಅದಕ್ಕೆ ನಿಮಗೆ ನಾನು ದೋಷ ಕೊಡುವುದಿಲ್ಲ. ಏನೋ ಈ ಸರ್ಕಾರ ಬಂದ ತಕ್ಷಣವೇ ಆರಂಭವಾಯಿತೆಂದು ಹೇಳುವುದಿಲ್ಲ. ನಾನು ಇದ್ದಾಗಲೂ ಆಗಿವೆ. ಸುಮಾರು 8–10 ವರ್ಷಗಳಿಂದ ಈ ರೈತರ ಆತ್ಮಹತ್ಯೆ ಪ್ರಕರಣಗಳು ಈ ದೇಶದಲ್ಲಿ ಈ ರಾಜ್ಯದಲ್ಲಿ ಏನು ನಡೆಯುತ್ತಿವೆ, ನಾವು ಕೇವಲ ರಾಜಕೀಯಕ್ಕೆ ಈ ಆತ್ಮಹತ್ಯೆ ಪ್ರಕರಣಗಳನ್ನು ದುರ್ಬಳಕೆ ಮಾಡುವುದು ಬೇಡ ನೀವು ಮಾಡುವುದ ಬೇಡ. ರೈತರಿಗೆ ಯಾವ ರೀತಿಯ ಕಾರ್ಯಕ್ರಮವನ್ನು ಕೊಡಬೇಕೆನ್ನುವುದನ್ನು ಏನು 17ನೆ ತಾರೀಖು ಆಯವ್ಯಯದಲ್ಲಿ ಮಂಡನೆ ಮಾಡುತ್ತಿದ್ದೀರಿ. ದಯವಿಟ್ಟು ಅದನ್ನು ಕೊಟ್ಟುಬಿಟ್ಟರೆ, ರೈತರ ಪರವಾಗಿ ನಾನೇ ನಿಮಗೆ ವಂದನೆಗಳನ್ನು ಸಲ್ಲಿಸುವುದಕ್ಕೆ ಸಿದ್ದನಿದ್ದೇನೆ. ನೀವು ಪದೆ ಪದೆ ರೈತರ ಬಗ್ಗೆ ಹೇಳುತ್ತೀರಿ, ನಾನು ರೈತರ ಮಗ, ರೈತರಿಗೋಸ್ಕರ ಈ ಸರ್ಕಾರ ಏನು ಮಾಡುವುದಕ್ಕೂ ಸಿದ್ಧವಿದೆ ಎಂದು ಹೇಳುತ್ತೀರಿ ನಾನು ನಿಮ್ಮ ಜೊತೆ ಮುಖ್ಯಮಂತ್ರಿಯಾಗಿ ಕೆಲಸ ಮಾಡುವಾಗ ರೈತರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಸಿದಂತೆಯೇ ಬೆಳಗಿನಿಂದ ಸಂಜೆಯವರೆಗೆ ಒಂದು ಕಾರ್ಯಕ್ರಮವನ್ನು ಇಟ್ಟಿದ್ದೆವು, ಆ ಸಭೆಗೆ ಧರ್ಮಸಿಂಗ್, ಹೆಚ್.ಕೆ. ಪಾಟೀಲ್ ಬಂದರು, ಆ ಸಭೆಗೆ ಉಪ ಮುಖ್ಯಮಂತ್ರಿಗಳು ತಿರುಗಿಯೂ ನೋಡಲಿಲ್ಲ. ಬೆಳಗಿನಿಂದ ಸಂಜೆಯವರೆಗೆ ಜಾಗವನ್ನು ಕಾಯ್ದಿರಿಸಿದರು ಬರಲಿಲ್ಲ. ಹಾಗೆಂದು ನೀವು ರೈತರ ಪರವಾಗಿಲ್ಲವೆಂದು ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಅದರ ಆಧಾರದ ಮೇಲೆ ಕೆಲವು ಪ್ರಾಮಾಣಿಕ ಅಧಿಕಾರಿಗಳು ಕೆಲವು ವರದಿಗಳನ್ನು ರಾಜ್ಯಪಾಲರ ಆಡಳಿತವಿದ್ದಾಗ ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ರೈತರಿಗೆ ಯಾವ ರೀತಿಯಾಗಿ ಮಾನಸಿಕವಾಗಿ

ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡುವುದಕ್ಕೆ ಕಾರ್ಯಕ್ರಮ ಕೊಡಬೇಕೆಂದು ವರದಿಯನ್ನು ಕೊಟ್ಟಿದ್ದಾರೆ, ಸಾಧ್ಯವಾದರೆ ಆ ಪ್ರಾಮಾಣಿಕ ಅಧಿಕಾರಿಗಳೊಡನೆ ಚರ್ಚೆ ಮಾಡಿ ಈ ಆತ್ಮಹತ್ಯೆ ಪ್ರಕರಣಗಳನ್ನು ನಿಲ್ಲಿಸುವುದಕ್ಕೆ ಆ ಕಾರ್ಯಕ್ರಮಗಳ ಮುಖಾಂತರ ಸಾಧ್ಯವಾದರೆ ಮಾಡಲೆಂದು ನಾನು ನಿಮಗೆ ಶುಭ ಹಾರೈಸುತ್ತೇನೆ. ಇವತ್ತು ನಾನು ನಿಮ್ಮ ಗಮನಕ್ಕೆ ತಂದಾಗ ಗೊಬ್ಬರದ ಕೊರತೆ ಇಲ್ಲವೆಂದು ಹೇಳುತ್ತೀರಿ, ಆದರೆ ಪ್ರಧಾನ ಮಂತ್ರಿಗಳಿಗೆ 11ನೇ ತಾರೀಖಿನಂದು ಏನೆಂದು ಪತ್ರವನ್ನು ಬರೆಯುತ್ತೀರಿ? ಸದನದಲ್ಲಿ, ಗೊಬ್ಬರಕ್ಕೆ ಯಾವ ಕೊರತೆ ಇಲ್ಲವೆಂದು ಹೇಳುವ ನೀವು 11ನೇ ತಾರೀಖಿನಂದು ಪತ್ರ ಬರೆಯುತ್ತೀರಿ. I also wrote to you on June 4, 2008 drawing your attention to the shortage of fertilizers in Karnataka and requested you to instruct the concerned to make available the required quantity of fertilizers in the first fortnight of June 2008 ಅಲ್ಲಿ ಇನ್ನೊಂದು ಮಾತನ್ನು ಹೇಳಿದ್ದೀರಿ, indeed the State Government officers concerned seem to have followed up on these letters to ensure that adequate stocks are moved to the State of Karnataka in time, consequently leading to the present crisis situation. It is only after my review that a sense of urgency has been instilled and the officers and the Union Department of Fertilizer officials led by Fertilizer secretary have visited Karnataka ನಾನು 6ನೇ ತಾರೀಖು ಸದನದಲ್ಲಿ ಪ್ರಸ್ತಾಪ ಮಾಡಿದರೆ ಅದರ ತೊಂದರೆಯೇ ಇಲ್ಲವೆಂದು ಹೇಳಿಬಿಟ್ಟಿರಿ, 11ನೇ ತಾರೀಖು ಪ್ರಧಾನ ಮಂತ್ರಿಗಳಿಗೆ ಪತ್ರದಲ್ಲಿ ಏನು ಬರೆಯುತ್ತೀರಿ? ಭೇಟಿ ಮಾಡಿದಿರಿ, ತರಾತುರಿಯಲ್ಲಿ ಯಾರನ್ನು ಭೇಟಿ ಮಾಡಿದಿರಿ? ಆವತ್ತು ಹುಬ್ಬಳ್ಳಿಯಿಂದ ವಿಶೇಷ ವಿಮಾನದಲ್ಲಿ 10–12 ಜನ ಮಂತ್ರಿಗಳು ಹೋದಿರಿ, ಪ್ರಧಾನ ಮಂತ್ರಿ ಮತ್ತು ರಸಾಯನಿಕ ಗೊಬ್ಬರ ಮಂತ್ರಿಗಳನ್ನು ಭೇಟಿ ಮಾಡಿದಿರಿ. ಒಂದು ಐದೈದು ನಿಮಿಷ ಭೇಟಿ ಮಾಡಿ ನಿಮ್ಮ ಮನವಿಯನ್ನು ಕೊಟ್ಟು ಬಂದುಬಿಟ್ಟಿರಿ. ಇಫ್ಕೋ ಮತ್ತಿ ಕ್ರಿಫ್ಕೋ ಈ ಎರಡು ಸಂಸ್ಥೆಗಳು ಯಾರ ಅಧೀನದಲ್ಲಿ ಕೆಲಸ ಮಾಡುವ ಸಂಸ್ಥೆಗಳು? ಈ ಎರಡು ಸಂಸ್ಥೇಗಳು ಕೃಷಿ ಇಲಾಖೆಯ ಅಧೀನದಲ್ಲಿ ಏನು ಕೆಲಸ ಮಾಡುತ್ತವೆ, ಈ ಎರಡು ಸಂಸ್ಥೆಗಳಿಂದ ಗೊಬ್ಬರವನ್ನು ಪಡೆಯುವುದಕ್ಕೆ ಕೇಂದ್ರ ಕೃಷಿ ಇಲಾಖೆಯ ಸಚಿವರಾದ ಶ್ರೀ ಶರದ್ ಪವಾರ್ ಅವರನ್ನು ಭೇಟಿ ಮಾಡಿದಿರೇನೋ ನನಗೆ ಗೊತ್ತಿಲ್ಲ. ಇದೊಂದು ಕಡೆ ಇರಲಿ. ಆಮೇಲೆ ನೀವು ದೆಹಲಿಯಿಂದ ಬಂದ ಮೇಲೆ ನೀವು ಪದೆ ಪದೆ, ನಾವು

ಯಾವುದೇ ರೀತಿಯ ಸಂಘರ್ಷಕ್ಕೆ ಹೋಗುವುದಿಲ್ಲ ನಮಗೆ ಯಾರ ಬಗ್ಗೆಯೂ ಅಸೂಯೆ ಇಲ್ಲ. ನಮ್ಮ ಅಜೆಂಡವೇ ಅಭಿವೃದ್ಧಿ ಎಂದು ಹೇಳುತ್ತೀರಿ. ನಾನು ಮೊನ್ನೆ ಯಾವುದೋ ಟಿವಿಯಲ್ಲಿ ಗಮನಿಸಿದೆ. ಒಬ್ಬ ಸಚಿವರು ಹೇಳಿಕೆಯನ್ನು ಕೊಡುತ್ತಾರೆ, ನೋಡಿ ಮೊನ್ನೆ ದೆಹಲಿಗೆ 10–12 ಜನ ಹೋದೆವು, ಕೇಂದ್ರ ಸರ್ಕಾರಕ್ಕೆ ಹೋದೆವು ನೋಡಿ ಗೊಬ್ಬರ ಹಾಗೆ ಇಲ್ಲಿಗೆ ಬಂತು ಎಂದು ಹೇಳಿದರು, ನಾನು ಗಮನಿಸಿದೆ. ಯಾವ ತ್ಯಾಗದ ಬಗ್ಗೆ ಕೇಸರಿ ಬಗ್ಗೆ ಬೆಳಿಗ್ಗೆ ಚರ್ಚೆ ನಡೆಯುತ್ತಿತ್ತು. ಯಾವ ಕೇಸರಿಯ ಸಂಕೇತ ತ್ಯಾಗ, ಬಲಿದಾನ ಇದರ ಸಂಕೇತವೆಂದು ಮಾತ್ರ ಹೇಳುತ್ತಿದ್ದೀರಿ, ಇನ್ನೊಂದನ್ನು ಅದಕ್ಕೆ ಸೇರಿಸಿಕೊಳ್ಳಲಿಲ್ಲ. ಏನು ರಾಜಕೀಯ ಶಕ್ತಿಗಳ ಪಿತೂರಿಯ ಬಗ್ಗೆ ಹೇಳುತ್ತಿದ್ದೀರಲ್ಲ. ಆ ಬಣ್ಣವನ್ನು ನಿಮ್ಮ ಪಕ್ಷಕ್ಕೆ ಗುತ್ತಿಗೆ ತೆಗೆದುಕೊಂಡ ಮೇಲೆ ಆ ಪಿತೂರಿಯನ್ನು ನಿಮ್ಮ ಕೇಸರಿಯಲ್ಲಿ ಅಳವಡಿಸಿದ್ದೀರಿ ಎಂಬುದನ್ನು ನಾವು ಹಲವಾರು ವಿಷಯಗಳನ್ನು ಗಮನಿಸಿದಾಗ, ಆ ಪಿತೂರಿ ಮಾಡುವ ಕೆಲಸ ಮಾಡುವುದನ್ನು ಕೂಡ ಆ ಕೇಸರಿಯಲ್ಲಿ ಅಳವಡಿಸಿಕೊಂಡಿದ್ದಿರೆಂಬುದನ್ನು ನಾನು ಇವತ್ತು ಬಹಳ ನೋವಿನಿಂದ ಹೇಳಬೇಕಾಗಿದೆ. ಏಕೆಂದರೆ ಪದೆ ಪದೆ ಈ ಪಿತೂರಿ ವಿಷಯವಾಗಿ ಕಳೆದ 10 ದಿವಸಗಳಿಂದ ಪ್ರಸ್ತಾಪ ಮಾಡುತ್ತಿದ್ದೀರಿ. ಇವತ್ತು ಏನು ಹೇಳುತ್ತಿದ್ದೀರಿ, ಆವತ್ತು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದಿರಿ, ಪ್ರಧಾನ ಮಂತ್ರಿಗಳು ನನಗೆ ಸಕಾರಾತ್ಮಕವಾಗಿ ಸ್ಪಂದಿಸಿದರೆಂದು ಹೇಳುತ್ತೀರಿ ಮತ್ತೆ ಎರಡು ನಿಮಿಷಕ್ಕೆ ಅದೇ ಪಕ್ಷದ ಕಾಲಂನಲ್ಲಿ ಅದೇ ಪತ್ರಿಕೆಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ನಾವು ಯಾವ ಸಂಘರ್ಷಕ್ಕು ತಯಾರಿದ್ದೇವೆ ಎಂದು ನೀವೆ ಹೇಳಿದಿರಿ, ಕಾಯತಕ್ಕಂಥ ವ್ಯವದಾನವಿಲ್ಲ. ತಾಳ್ಮೆ ಇಲ್ಲ, ಅಲ್ಲೆ ಹೇಳಿತ್ತೀರಿ, ರೈತರಿಗೆ ನೀವೊಂದು ಮನವಿಯನ್ನು ಮಾಡಿದ್ದಿರಿ, ನಾಡಿನ ರೈತ ಬಂಧುಗಳೆ, ಪ್ರತಿ ರೈತನ ಜೀವವು ಅಮೂಲ್ಯ ರೈತನ ಬದುಕು ನೆಮ್ಮದಿಯಿಂದ ಇರಬೇಕೆಂಬುದೆ ನಮ್ಮ ಸರ್ಕಾರದ ಹೆಬ್ಬಯಕೆ. ಹಾವೇರಿಯ ಘಟನೆ ನಡೆದ ಕೂಡಲೆ ನಾನು ಸ್ಥಳಕ್ಕೆ ಭೇಟಿ ನೀಡಿ, ಮೃತ ಕುಟುಂಬಕ್ಕೆ ಪರಿಹಾರ ಒದಿಗಿಸಿ, ಅವರ ಪತ್ನಿಗೆ ಸರ್ಕಾರಿ ನೌಕರಿಯನ್ನು ನೀಡಿ, ಅವರ ಮಕ್ಕಳ ಶಿಕ್ಷಣ ವೆಚ್ಚವನ್ನು ಸರ್ಕಾರವೇ ಭರಿಸುವ ನಿರ್ಧಾರವನ್ನು ಕೈಗೊಂಡು ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಗೂ ಕೂಡ ಆದೇಶಿಸಿದ್ದೇನೆ. ಇತ್ತೀಚೆಗೆ ರಾಜ್ಯದ ಕೆಲವೆಡೆ ರೈತರು ಆತ್ಮಹತ್ಯೆ ಮಾಡಿಕೊಂಡ ಘಟನೆಗಳು ವರದಿಯಾಗಿವೆ. ಜಿಲ್ಲಾಧಿಕಾರಿಗಳ ವರದಿಯಂತೆ ರೈತರ ಈ ಆತ್ಮಹತ್ಯೆಗೂ ರಸಗೊಬ್ಬರದ ಕೊರತೆಗೂ ಸಂಬಂಧವಿರುವುದಿಲ್ಲ. ಬೇರೆ ಬೇರೆ ಕಾರಣಗಳಿಂದ ರೈತರು ಆತ್ಮಹತ್ಯೆಗೆ ಶರಣಾದರು. ಅದನ್ನು ಕೆಲವು ಪಟ್ಟಭದ್ರಹಿತಾಸಕ್ತಿಗಳು ರಸಗೊಬ್ಬರದ ಕೊರತೆಯ ಜೊತೆಗೆ

ತಳುಕು ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ರೈತರು ಆ ವಿಷಯಕ್ಕೆ ಆತ್ಮಹತ್ಯೆ ಮಾಡಿಕೊಳ್ಳದೆ ಇದ್ದ ಮೇಲೆ ನೀವು ಈ ರೀತಿಯ ಜಾಹಿರಾತನ್ನು ಕೊಡುವ ಅವಶ್ಯಕತೆ ಏನಿತ್ತು? ರೈತರು ಬೇರೆ ಬೇರೆ ರೀತಿಯಲ್ಲಿ ಅವರ ಕುಟುಂಬದ ಸಮಸ್ಯೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಇದರ ಅವಶ್ಯಕತೆ ಸರ್ಕಾರಕ್ಕೆ ಏನಿತ್ತು? ಇದು ನಾನು ನಿಮ್ಮನ್ನು ಕೇಳುತ್ತಿರುವ ಪ್ರಶ್ನೆ. ಏಕೆಂದರೆ, ಆಗಲೇ ನೀವು ವಿರೋಧಪಕ್ಷದಲ್ಲಿ ಕುಳಿತಾಗ ಹೇಳಿದ್ದಿರಿ, ರೈತರ ಬಗ್ಗೆ ಯಾವ ರೀತಿಯಾಗಿ ನಡೆದುಕೊಳ್ಳಬೇಕೆಂದು ಮುಖ್ಯಮಂತ್ರಿಗಳ ಬಹಳ ಸರ್ಕಾರಕ್ಕೆ ಉಪದೇಶವನ್ನು ಮಾಡಿದ್ದೀರಿ, ಇವತ್ತು ಹಾವೇರಿಯಲ್ಲಿ ನಡೆದಂತಹ ಘಟನೆ ಇದೆಯಲ್ಲ. ನೀವು ತಕ್ಷಣ, ಇದು ರಾಜಕೀಯ ಶಕ್ತಿಗಳ ಪಿತೂರಿ ಎಂದು ಹೇಳಿಬಿಟ್ಟಿರಿ. ನಾನು ಆ ಕುಟುಂಬಕ್ಕೆ ಭೇಟಿ ಕೊಟ್ಟಾಗ, ಗೋಲಿಬಾರ್ ನಿಂದ ಮೃತನಾದವನ ಅಣ್ಣ ಹೇಳುತ್ತಾನೆ. ನಾನು ವಿಷಯ ಗೊತ್ತಾದಂತೆ ಪ್ರವಾಸಿ ಮಂದಿರಕ್ಕೆ ಹೋದೆ, ಅಲ್ಲಿ ನಮ್ಮ ಶಾಸಕರಿದ್ದರು, ಅವರನ್ನು ಬನ್ನಿ ಸ್ಥಳಕ್ಕೆ ಹೋಗಬೇಕೆಂದು ಕಾಡಿಬೇಡಿದೆ, ಬರತಕ್ಕಂಥ ಸೌಜನ್ಯ ತೋರಿಸಲಿಲ್ಲವೆಂದು ಅವರು ಕುಟುಂಬ ವರ್ಗದವರು ಹೇಳುತ್ತಾರೆ. ಈಗ ನೀವು ಕೆಲವರನ್ನು ಅರಸ್ಟ್ ಮಾಡಿದ್ದೀರಿ, ಶಂಕರಯ್ಯ ಎಂಬುವ ಒಬ್ಬ ಜಂಗಮನನ್ನು ಅರೆಸ್ಟ್ ಮಾಡಿದ್ದಾರೆ. ಆ ಪುಣ್ಯಾತ್ಮ ಯಾರು ಮರಣ ಹೊಂದಿದ್ದ ಅವನ ಅಂತ್ಯಕ್ರಿಯೆ ಮಾಡುವ ಕ್ರಮವನ್ನು ವಿಧಿವಿಧಾನಗಳನ್ನು ಮಾಡುವುದಕ್ಕೆ ಹೋದಂತಹ ಒಬ್ಬ ಜಂಗಮರು. ಏನೋ ಆ ಭಾಗದಲ್ಲಿ ಹೆಬ್ಬೆಟ್ಟಿನಲ್ಲಿ ಒತ್ತಿ ಆ ಸಮಾಧಿ ಮುಂದೆ ಶವಕ್ಕೆ ಏನೋ ಮಾಡುತ್ತಾರೆ, ಅದಕ್ಕೆ ಹೋಗಿ ಅವರಿಗೆ ಚಂಬು ಏನೋ ಆ ಕುಟುಂಬದವರು ಕೊಟ್ಟಿದ್ದಾರೆ. ಆ ಚಂಬು ಸಮೇತ ಕರೆದುಕೊಂಡು ಹೋಗಿ ಅವರಿಬ್ಬರನ್ನು ಆ ಧಾರವಾಡದ ಜೈಲಿನಲ್ಲಿಟ್ಟಿದ್ದಾರೆ. ಯಾರನ್ನು ನಿಮ್ಮ ಅಧಿಕಾರಿಗಳು ಅರೆಸ್ಟ್ ಮಾಡಿದ್ದಾರೆಂಬುದನ್ನು ದಯವಿಟ್ಟು ಸ್ವಲ್ಪ ಅರ್ಥ ಮಾಡಿಕೊಳ್ಳಿ. ಅಲ್ಲಿರುವ ಅಧಿಕಾರಿಗಳನ್ನು ತಕ್ಷಣ ನೀವು ವರ್ಗ ಮಾಡದೇ ಇದ್ದರೆ. ಇಲ್ಲಿ ಗೊಬ್ಬರದ ಕೊರತೆ ನಿಮ್ಮ ಗಮನದಲ್ಲಿ ಇದ್ದರು ರಾಜ್ಯದಲ್ಲಿದ್ದಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದಕ್ಕೆ ಕ್ರಮ ಕೈಗೊಂಡಿರಿ, ನಿಮ್ಮ ಅಧಿಕಾರಿಗಳು ನಿಮ್ಮ ದಿಕ್ಕನ್ನು ತಪ್ಪಿಸಿದರೋ ಏನೋ ಗೊತ್ತಿಲ್ಲ ತರಾತುರಿಯಲ್ಲಿ ಮಾಸ ಟ್ರಾನ್ಸ್‌ಫರ್ ಮೂಲಕ 60 ಅಧಿಕಾರಿಗಳನ್ನೇನು ವರ್ಗಾವಣೆ ಮಾಡುವುದಕ್ಕೆ ಸಮಯ ಇಟ್ಟಿರಲ್ಲ. ಅದೇ ಸಮಯವನ್ನು ಇಲ್ಲಿ ನಡೆದಂತಹ ಘಟನೆಗೆ ಸಂಬಂಧಿಸಿದ ಅಧಿಕಾರಿಗಳನ್ನು ವರ್ಗಾವಣೆ ಮಾಡದೆ ಇಲ್ಲಿಯವರೆಗೆ ರಕ್ಷಣೆ ಕೊಟ್ಟಿಕೊಂಡು ಕುಳಿತ್ತಿದ್ದೀರಿ? ಏತಕ್ಕೆ ನೀವು ಇನ್ನೂ ಹೊರಗಡೆಗೆ ಕಳುಹಿಸಲಿಲ್ಲ. ಈ ಅಧಿಕಾರಿಗಳನ್ನು ನೀವು ಅಲ್ಲಿ ಇಟ್ಟುಕೊಂಡು ನ್ಯಾಯಾಂಗ ತನಿಖೆಯ ಮುಖಾಂತರ ಆಗಿರುವ. ಘಟನೆಯ

ಬಗ್ಗೆ ನ್ಯಾಯವನ್ನು ಒದಗಿಸಲು ನಿಮ್ಮ ಸರ್ಕಾರಕ್ಕೆ ಸಾಧ್ಯವಿದೆಯೇ? ಇವತ್ತು ಪತ್ರಿಕೆಯಲ್ಲೇ ಬರೆದಿದ್ದಾರೆ, ನಿಮಗೆ ಯಾರು ರಕ್ಷಣೆ ಕೊಟ್ಟು ಈ ಚುನಾವಣೆಯಲ್ಲಿ ಸಂಪೂರ್ಣ ಬೆಂಬಲವನ್ನು ಕೊಟ್ಟಿದ್ದಾರೆ, ಆ ಪತ್ರಿಕೆಗಳಲ್ಲಿಯೇ ಬರೆದಿದ್ದಾರೆ. ತಹಸೀಲ್ದಾರ್ ಕೈನಲ್ಲಿ ಒತ್ತಡ ಹಾಕಿ ಆದೇಶ ಮಾಡಿದೆ ಎಂದು ಸಹಿ ಹಾಕಿಸಿಕೊಳ್ಳಬೇಕೆಂದು ಹೇಳಿ, ಇಲ್ಲಿಯವರೆಗೆ ಹಾಕಿಕೊಟ್ಟಿದ್ದಾರೊ ಇಲ್ಲವೋ ಎಂಬುದನ್ನು ಗೃಹ ಸಚಿವರು ಈ ಸದನದ ಮುಂದೆ ಇಡಬೇಕಾಗುತ್ತದೆ. ಯಾರನ್ನೋ ಒಬ್ಬರಿಗೆ ಅರೆಸ್ಟ್ ಮಾಡಿದ್ದೇವೆಂದು ಹೇಳಿದ್ದಾರೆ. ಯಾರೋ ಗನ್ ತೆಗೆದುಕೊಂಡು ಹೊಡೆದಿದ್ದಾನೆ ಎಂದು ಹೇಳಿದ್ದೀರಿ. ಯಾರು ಮರಣ ಹೊಂದಿರತಕ್ಕಂತಹ ವ್ಯಕ್ತಿ? ನಿಮ್ಮ ಪಕ್ಷದ ಒಬ್ಬ ಸಕ್ರಿಯ ಕಾರ್ಯಕರ್ತ, ಬೇರೆ ಪಕ್ಷದವರು ಈ ರಾಜ್ಯದಲ್ಲಿ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ತರತಕ್ಕಂಥದ್ದಕ್ಕೆ ಗೊಬ್ಬರದ ಹೆಸರಿನಲ್ಲಿ ರಾಜಕೀಯ ಮಾಡುವುದಕ್ಕೆ ಹೋಗಿದ್ದರೆ ಅಲ್ಲಿ ಯಾರು ಸ್ಥಳದಲ್ಲಿ ಸತ್ತಿರತಕ್ಕಂತಹ ವ್ಯಕ್ತಿ ಅಮಾಯಕ ನಿಮ್ಮ ಪಕ್ಷದ ವ್ಯಕ್ತಿ. ಬೇರೆ ಯಾವುದೇ ಪಕ್ಷದ ಸಕ್ರಿಯ ಕಾರ್ಯಕರ್ತ ಅಲ್ಲ. ವಿಐಎಸ್‌ಎಲ್ ಸೊಸೈಟಿಯ ಅಧ್ಯಕ್ಷ. ಗೊಬ್ಬರದ ಬಗ್ಗೆ ನೀವು ಹೇಳಿದ್ದೀರಿ. ನಮ್ಮದು ಪೋಸ್ಟ್‌ಮ್ಯಾನ್ ಕೆಲಸ. ಕೇಂದ್ರ ಸರ್ಕಾರದವರು ಕೊಡದೇ ಇದ್ದರೆ ವಿರೋಧ ಪಕ್ಷದವರು ನಮ್ಮ ಜೊತೆ ಬರದೇ ಕಾಂಗ್ರೆಸ್‌ನವರು ಜೈಲಿಗೆ ಹೋಗಿ ಧರಣಿ ಮಾಡುವುದಕ್ಕೆ ಬರುತ್ತಾರಾ ಎಂದು ಹೇಳಿದರು. ಜನ ನಮ್ಮ ಹೋರಾಟ ನೋಡಿ ರೈತರ ಬಗ್ಗೆ ಇರತಕ್ಕಂತಹ ನಮ್ಮ ಕಾಳಜಿ ನೋಡಿ ನಮ್ಮನ್ನು ಇಲ್ಲಿ ಕೂರಿಸಿದ್ದಾರೆ. ನಿಮ್ಮನ್ನು ಅಲ್ಲಿ ಕಳುಹಿಸಿದ್ದಾರೆಂದು ಹೇಳಿದಿರಿ, ಅದೇ ಜನಗಳು ಮುಂದಿನ ದಿನ ತೀರ್ಮಾನ ಮಾಡುತ್ತಾರೆ. ಚಕ್ರ ಉರುಳುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ಯಾರಿಗೂ ಅಧಿಕಾರ ಶಾಶ್ವತ ಅಲ್ಲ. ಇವತ್ತು ಹೇಳಿದ್ದಿರಿ, ರಸಗೊಬ್ಬರದ ಉತ್ಪಾದನೆ ಮತ್ತು ನಿಯಂತ್ರಣದ ಹೊಣೆ ಕೇಂದ್ರ ಸರ್ಕಾರದ್ದು. ರಾಜ್ಯ ಸರ್ಕಾರದ್ದು ಪೋಸ್ಟಮ್ಯಾನ್ ಕೆಲಸ. ಗೊಬ್ಬರದ ಕೊರತೆಯಿಂದ ರೈತರು ಸತ್ತಿಲ್ಲ. ವಿಶೇಷ ಸಂದರ್ಶನಗಳು ನಿನ್ನೆ ಇಲ್ಲವೆಂದು ಎಲ್ಲ ಪತ್ರಿಕೆಗಳಲ್ಲಿ ಬಂದಿದೆ. ಕೇವಲ 23 ದಿವಸಕ್ಕೆ ವಿಶೇಷ ಸಂದರ್ಶನ ಎಂದು ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಬಂದಿದೆ. ಇದಕ್ಕೆ ನಿಮಗೆ ಸಮಯ ಇದೆ. ಗ್ರಾಮ ವಾಸ್ತವ್ಯದ ಬಗ್ಗೆ ಪತ್ರಿಕೆಯವರು ಕೇಳಿದರೆ ಒಬ್ಬ ಮುಖ್ಯಮಂತ್ರಿ 7–8 ಗಂಟೆ ಹೋಗಿ ಸಮಯ ವ್ಯರ್ಥ ಮಾಡುವುದಕ್ಕಾಗುತ್ತಾ ಎನ್ನತಕ್ಕಂತಹ ಮಾತು ಹೇಳಿದ್ದೀರಿ. ಗ್ರಾಮ ವಾಸ್ತವ್ಯಕ್ಕೆ ಹೋಗುತ್ತಿದ್ದುದು ಸಮಯ ಇದೆ ಎಂದು ಅಲ್ಲ. ಹರಕಲು ಬಟ್ಟೆ ಹಾಕಿಕೊಂಡು ಹಳ್ಳಿಯಲ್ಲಿ ಜೀವನ ಮಾಡುತ್ತಾರೆ, ಅವರ ಹೆಸರು ಹೇಳಿ ನೀವು ಇಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದ್ದಿರಿ, ನಿಮ್ಮ ಅಧಿಕಾರಿಗಳು ವಿಡಿಯೋ

ಕಾನ್‌ಫರೆನ್ಸ್ ಮುಖಾಂತರ ಚರ್ಚೆ ಮಾಡಿದರೆ, ಆ ಹಳ್ಳಿಯಲ್ಲಿ ಮೈಮೇಲೆ ದೂಳು ತುಂಬಿಕೊಂಡು ಕೆಲಸ ಮಾಡುವುದು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಬಗೆಹರಿಯುವುದಿಲ್ಲ. ನಾನೂ ನೋಡಿದ್ದೇನೆ. ನಾನು ಹಳ್ಳಿಯ ಜನರ ಮುಂದೆ ಹೋಗಿಯೇ ಇನ್ನೂ ಆ ಕೆಲಸ ಪೂರ್ಣ ಆಗಿಲ್ಲ. ಕುರುಡರು, ಕುಂಟರ ಮತ್ತು ಮೂಗರ ಕಥೆ ನಾನು ನೋಡಿದ್ದೇನೆ. ಪೋಸ್ಟ್‌ಮ್ಯಾನ್ ಕೆಲಸ ಮುಖ್ಯಮಂತ್ರಿಯದಲ್ಲ ಸ್ವಾಮಿ, ಈ ರಾಜ್ಯದ ಸರ್ಕಾರ ನಡೆಸತಕ್ಕಂತಹವರಿಗೆ ಕೇಂದ್ರ ಸರ್ಕಾರ ಗೊಬ್ಬರ ಕೊಡತಕ್ಕಂಥದ್ದಕ್ಕೆ ಅವರ ಕೈಯಲ್ಲಿ ಶಕ್ತಿ ಇಲ್ಲವೆಂದು ಹೇಳಿದಾಗ ನಿಮಗೆ ಏನಾಗಿತ್ತು, ಎಷ್ಟು ಖರ್ಚಾಗುತ್ತಿತ್ತು ನಿಮಗೆ? ಏನು ಕೊರತೆ ಇದೆ, ಆ ಕೊರತೆ ತುಂಬುವುದಕ್ಕೆ ಮೊದಲು ನಿಮ್ಮ ಕರ್ತವ್ಯ ನಿರ್ವಹಿಸಬೇಕಾಗಿತ್ತು. ನಮ್ಮ ಕಾಲದಲ್ಲಿ ನೀವೇ ಉಪ ಮುಖ್ಯಮಂತ್ರಿಗಳಾಗಿದ್ದೀರಿ, ಬಫರ್ ಸ್ಟಾಕ್ ಎಂದು ಮಾಡಿದ್ದೆವು. ಕೃಷಿ ಸಚಿವರು ಇಲ್ಲಿಯೇ ಕೂತಿದ್ದಾರೆ. ನಾವು ಮೊದಲನೇ ಬಾರಿಗೆ experiment basis ನಲ್ಲಿ ಕಳೆದ ಎರಡು ವರ್ಷಗಳಿಂದ ಈ ಸಮಸ್ಯೆ ಏನು ಇದೆ ಇದಕ್ಕೆ ಸರ್ಕಾರ ಗಮನಹರಿಸಬೇಕೆಂಬ ದೃಷ್ಟಿಯಿಂದ 25 ಕೋಟಿ ರೂಪಾಯಿಗಳನ್ನು ಇವತ್ತು ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ಗೊಬ್ಬರ ಖರೀದಿ ಮಾಡುವುದಕ್ಕೆ ಬಫರ್ ಸ್ಟಾಕ್ ಇಡುವುದಕ್ಕೆ ಸರ್ಕಾರದ ವತಿಯಿಂದ ತೀರ್ಮಾನ ಮಾಡಿದೆವು. 8 ಕೋಟಿ ರೂಪಾಯಿಗಳನ್ನು ರಾಜ್ಯಪಾಲರ ಆಡಳಿತದಲ್ಲಿ ಬಿಡುಗಡೆ ಮಾಡಿದ್ದಾರೆ. ಆದರೆ ಈ ಗೊಬ್ಬರದ ಕೊರತೆ ಬಂದಾಗ ಮಾರ್ಕೆಟಿಂಗ್ ಫೆಡರೇಷನ್‌ನವರು 8 ಕೊಟಿ ರೂಪಾಯಿಗಳನ್ನು ಹಾಕಿ, ಸರ್ಕಾರ ಏನು ತೀರ್ಮಾನ ಮಾಡಿತ್ತು, ಆ 8 ಕೋಟಿ ರೂಪಾಯಿಗಳನ್ನು ಹಾಕಿ ಇವತ್ತು ಗೊಬ್ಬರ ಸ್ಟಾಕ್ ಮಾಡಬೇಕೆಂದು ತೀರ್ಮಾನ ಮಾಡಿದೆವು. ಇವತ್ತು ಏನು ಕಷ್ಟವಾಗುತ್ತಿತ್ತು ಯಡಿಯೂರಪ್ಪನವರೇ ಪೋಸ್ಟ್‌ಮ್ಯಾನ್ ಕೆಲಸ, ನಮಗೆ ಗೊಬ್ಬರ ಕೊಡದೆ ಕೇಂದ್ರ ಸರ್ಕಾರದವರು ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ, ಎಂದು ಇಷ್ಟು ಹೇಳಿದರೆ ಸರ್ಕಾರದ ಜವಾಬ್ದಾರಿ ಮುಗಿಯಲಿಲ್ಲ. ನಿಮ್ಮ ಜವಾಬ್ದಾರಿ ನಮ್ಮ ರಾಜ್ಯ ಸರ್ಕಾರದ ಹಣದಿಂದ ಯಾರು ರೈತರು ಸಂಕಷ್ಟದಲ್ಲಿದ್ದಾರೆ, 400 ಕೋಟಿ ರೂಪಾಯಿಗಳಾಗಲಿ, 500 ಕೋಟಿ ರೂಪಾಯಿಗಳಾಗಲಿ, ಆ ಹಣ ಬಿಡುಗಡೆ ಮಾಡಿ ಗೊಬ್ಬರ ಖರೀದಿ ಮಾಡುವ ಕೆಲಸ ಮಾಡಬೇಕಾಗಿತ್ತು. ಸಬ್ಸಿಡಿ ಪಡೆಯುವುದಕ್ಕೆ ಕೇಂದ್ರ ಸರ್ಕಾರದಿಂದ ಮತ್ತೆ ಹಣವನ್ನು ರಿಎಂಬರ್ಸ್‌ಮೆಂಟ್ ಮಾಡುವುದು ಆ ಮೇಲೆ ಮಾಡಿಕೊಳ್ಳಬೇಕಾಗಿತ್ತು. ನಡಿಯಿರಿ ಹೋಗೋಣ ದೆಹಲಿಗೆ, ನಮ್ಮ ಜೊತೆ ಧರಣಿಗೆ ಕುಳಿತುಕೊಳ್ಳಿ ಎಂದು ವಿರೋಧ ಪಕ್ಷದವರಿಗೆ ಕರೆಯುತ್ತಿದ್ದೀರಲ್ಲ. ಕೇಂದ್ರ ಸರ್ಕಾರದವರು

ಗೊಬ್ಬರ ಕೊಡಲಿಲ್ಲವೆಂದು ಪ್ರತಿಭಟನೆ ಮಾಡುವುದು ವಿರೋಧ ಪಕ್ಷದವರ ಕೆಲಸ ಅಲ್ಲ ಅದು ಎಂದು ಒಂದು ಕಡೆ ಹೇಳುತ್ತೀರಿ. ಅದೂ ನಮ್ಮ ಹಕ್ಕು ಎಂದು ಹೇಳುತ್ತೀರಿ. ಎರಡೂ ಕೆಲಸ ನೀವೇ ಮಾಡುತ್ತೀರಾ? ಹೇಳಿಬಿಡಿ ನಾವು ಆರಾಮಾಗಿರುತ್ತೇವೆ. ಆ ಕೆಲಸವೂ ನೀವೆ ಜವಾಬ್ದಾರಿ ತೆಗೆದುಕೊಂಡು ಮಾಡುವುದಿದ್ದರೆ, ಈಗಲೇ ತೆಗೆದುಕೊಂಡು ಬಿಡಿ. ದ್ವಿಪಾತ್ರಾಭಿನಯ ನಡೆಸಬೇಕೆಂದು ನಿಮ್ಮ ಇಚ್ಛೆ ಇದ್ದರೆ, ಅದನ್ನೂ ಮಾಡಿ. ಪ್ರತಿಭಟನೆ ನಡೆಸುವುದು ಬಿ.ಜೆ.ಪಿ ಹಕ್ಕು ಎಂದು ಹೇಳಿದ್ದೀರಿ. ನೀವು ಈಗ ಮುಖ್ಯಮಂತ್ರಿಗಳು. ವಿರೋಧ ಪಕ್ಷದ ನಾಯಕರಲ್ಲ. ಕೇಂದ್ರ ಸರ್ಕಾರ ಪೆಟ್ರೋಲಿಯಂ ಪ್ರಾಡಕ್ಟ್ ಬಗ್ಗೆ ರೈಸ್ ಮಾಡಿತು ಎಂದರೆ ಅದಕ್ಕೂ ರಾಜಕೀಯ. ನೀವಿದ್ದರೆ ಏನು ಮಾಡುತ್ತಿದ್ದಿರಿ ಸ್ವಾಮಿ? ನಿಮ್ಮ ಎನ್.ಡಿ.ಎ. ಸರ್ಕಾರ ಇದ್ದಾಗ ನೀವೇನು ರೈಸ್ ಮಾಡಲಿಲ್ಲವಾ? ಇವತ್ತು International market ನಲ್ಲಿ ನಡೆಯುತ್ತಿರುವ price rise ನಿಂದ ಯಾವ ಸರ್ಕಾರಗಳಿದ್ದರೂ ಅದು ಮಾಡಲೇಬೇಕಾದಂತಹ ಪರಿಸ್ಥಿತಿ. ಅದಕ್ಕೆ ಕೇವಲ ಓಟು ಪಡೆಯುವುದಕ್ಕೋಸ್ಕರ ಪ್ರತಿಭಟನೆ ನಡೆಸಿಕೊಂಡು ಪ್ರಧಾನ ಮಂತ್ರಿಗಳ ಪ್ರತಿಕೃತಿ ದಹನ ಮಾಡುವುದು, ನಡೆಸಿ, ನಡೆಯಲಿ ನೋಡೋಣ ಎಷ್ಟು ದಿವಸ ನಡೆಯುತ್ತದೆ ಎಂದು. ಈಗಾಗಲೇ ನಾಳೆಯಿಂದ ಗೊಬ್ಬರದ ಬಗ್ಗೆ ಪ್ರತಿಭಟನೆ ಇದೆ, ಇವತ್ತು ತುಮಕೂರಿನಲ್ಲಿ ಪ್ರಾರಂಭ ಮಾಡಿದ್ದಾರೆಂದು ಹೇಳಿದರೆ. ನೀವಲ್ಲ ಪ್ರತಿಭಟನೆ ಮಾಡಬೇಕಾದುದು. ಈ ರಾಜ್ಯದ ಜನ ನಿಮಗೆ ಓಟು ಕೊಟ್ಟು ಅಲ್ಲಿ ಕೂರಿಸಿದ್ದಾರೆ. ಕೇಂದ್ರ ಸರ್ಕಾರದ ವೈಫಲ್ಯತೆ ಇದ್ದರೆ ಅದರ ಜವಾಬ್ದಾರಿ ನಿರ್ವಹಿಸಬೇಕಾದುದು ರಾಜ್ಯ ಸರ್ಕಾರ. ಗುಲ್ಬರ್ಗಾ ಜಿಲ್ಲೆಗೂ ಹೋದಿರಿ. ನಿಮ್ಮ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಉದ್ಘಾಟನೆ ಮಾಡಿದ ಜಾಹೀರಾತು ನೋಡಿದೆ. ಇದೆಲ್ಲಾ ಹಿಂದಿನ ಸರ್ಕಾರದಲ್ಲಿ ಕ್ಯಾಬಿನೆಟ್ ಡಿಸಿಷನ್ ಆಗಿರುವಂತಹವು. ಇದು ನೀವು ಬಂದು ಹೊಸದಾಗೇನೂ ಪ್ರಾರಂಭ ಮಾಡಿಲ್ಲ. ಆರು ಏರ್ ಪೋರ್ಟ್‌ಗಳನ್ನು ಮಾಡತಕ್ಕಂಥದಕ್ಕೆ ಹಿಂದಿನ ಸರ್ಕಾರದಲ್ಲಿಯೇ ತೀರ್ಮಾನ ಮಾಡಿದ್ದೇವೆ. ಹೋಗಿ ಅಲ್ಲೆಲ್ಲೋ ಅದನ್ನು ಮಾಡಲಿಕ್ಕೆ ನಿಮಗೆ ಸಮಯ ಇದೆ. "ಸಹ್ಯಾದ್ರಿಯ ಮಡಿಲಿನಿಂದ ಮುಗಿಲೆತ್ತರಕ್ಕೆ ಹಾರಿ ಮಲೆನಾಡ ಸೊಬಗು ಸವಿಯೋಣ." ಯಾವ ಸೊಬಗು ಸವಿಯುತ್ತೀರಿ ಮಾನ್ಯ ಮುಖ್ಯಮಂತ್ರಿಗಳೇ? ರೈತನ ಆತ್ಮಹತ್ಯೆ ಪ್ರಕರಣ ಏನು ನಡೆಯುತ್ತಿದೆ, ಗೋಲಿಬಾರ್ ಪ್ರಕರಣದಿಂದ ಒಬ್ಬ ರೈತ ನಿಮ್ಮ ಪಕ್ಷದವನೇ ಏನು ಅಸು ನೀಗಿದ್ದಾನೆ, ಅವನ ಸಮಾಧಿ ಮೇಲೆ ಸೊಬಗು ಸವಿಯುತ್ತಿರಾ ಸ್ವಾಮಿ? ಸವಿಯಿರಿ ಬಹಳ ಸಂತೋಷ. ಯಾವ ಪತ್ರಿಕೆ ತೆಗೆದರೂ ಇವತ್ತು ಅದೇ ವಿಷಯ ಇದೆ. ರೈತನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದರ

ಹಿನ್ನೆಲೆಯಲ್ಲಿ ಮಾನ್ಯ ಪ್ರತಿಪಕ್ಷದ ನಾಯಕರು ನನ್ನ ಸ್ವಕ್ಷೇತ್ರಕ್ಕೆ ತೆರಳಿದ್ದಾರೆ, ಅವರು ಹೋಗುವುದಕ್ಕೆ ನನ್ನ ಅಭ್ಯಂತರವಿಲ್ಲವೆಂದು ಅಲ್ಲಿ ಹೇಳುತ್ತೀರಿ. ಮತ್ತೆ ಮಾನ್ಯ ವಿರೊಧ ಪಕ್ಷದ ನಾಯಕರು ನನ್ನನ್ನೆ ದೂರವಾಣಿ ಮುಖಾಂತರ ಕೇಳಬಹುದಾಗಿತ್ತು ಎಂದು ಇನ್ನೊಂದು ಪ್ಯಾರಾದಲ್ಲಿ ಹೇಳುತ್ತೀರಿ. ಅಲ್ಲಿಗೆ ಹೋಗುವುದಕ್ಕೆ ಮುಂಚೆ ನನ್ನನ್ನೇ ಕೇಳಿದ್ದರೆ ಎಲ್ಲಾ ವಿವರಗಳನ್ನು ಕೊಡುತ್ತಿದ್ದೆ ಎಂದು ಹೇಳುತ್ತೀರಿ. ಪ್ರಧಾನ ಮಂತ್ರಿಯವರಿಗೆ ಪತ್ರ ಬರೆಯಬಹುದೇ ಹೊರತು ಇದ್ದಕಿಂತ ಹೆಚ್ಚಿಗೆ ಏನು ಮಾಡುವುದು ಎಂದು ಹೇಳುತ್ತೀರಿ. ಪ್ರಧಾನಿಗೆ ಪತ್ರ ಬರೆದ ತಕ್ಷಣ ನಮ್ಮ ರೈತರಿಗೆ ಗೊಬ್ಬರ ಸಿಕ್ಕಿ ಬಿಟ್ಟಿತು. ಇದಕ್ಕಿಂತ ನಾನು ಇನ್ನೇನು ಮಾಡುವುದಕ್ಕಾಗುತ್ತದೆ ಎಂದು ಇವತ್ತಿನ ಸಂದರ್ಶನದಲ್ಲಿ ಹೇಳುತ್ತೀರಿ. ಈ ಆತ್ಮಹತ್ಯೆಗೆ ಬೇರೆಯೇ ಕಾರಣಗಳಿವೆ. ಕೌಟುಂಬಿಕ ಸಮಸ್ಯೆಗಳು, ಭಿನ್ನಾಭಿಪ್ರಾಯಗಳು ಇವೆಲ್ಲಾ ಹೇಳಿದೀರಿ. ನಿಮ್ಮ ಅಧಿಕಾರಿಗಳು ನೀವು ಯಾವ ರೀತಿ ವರದಿ ಮಾಡಬೇಕೆಂದು ಹೇಳುತ್ತೀರೋ ಆ ರೀತಿ ವರದಿ ಮಾಡುತ್ತಾರೆ. ಯಾರೂ ಕಾಣದೆ ಇರುವ ಅಧಿಕಾರಿಗಳಿಲ್ಲ ಈ ರಾಜ್ಯದಲ್ಲಿ. ಆತ್ಮಹತ್ಯೆ ಪ್ರಕರಣ ಎಂದು ನೀವು ನಿರ್ದೇಶನ ಕೊಟ್ಟರೆ ಅವರು ಆತ್ಮಹತ್ಯೆ ಪ್ರಕರಣ ಎಂದು ವರದಿ ಕೊಡುತ್ತಾರೆ. ಅದು ಆತ್ಮಹತ್ಯೆ ಅಲ್ಲ ಎನ್ನತಕ್ಕಂತಹ ರಿತಿಯಲ್ಲಿ ವರದಿ ಕೊಡಿ ಎಂದರೆ ಅದೇ ರೀತಿ ವರದಿ ಕೊಡುತ್ತಾರೆ. ಇವತ್ತು ಹೋರಾಟ ಮಾಡಬೇಕೆಂದು ಹೇಳಿದ್ದೀರಿ. ಇವತ್ತು ನೀವು ಒಂದು ಹೇಳುತ್ತೀರಿ. ರೈತರ ಆತ್ಮಹತ್ಯೆಗೆ ಕೃಷಿ ಸಾಲ ರಸಗೊಬ್ಬರದ ಕೊರತೆ ಕಾರಣವಲ್ಲ, ಕೌಟುಂಬಿಕ ಕಲಹ ಎಂದು ಹೇಳಿ, ಪ್ರತಿ ಪಕ್ಷಗಳು ಕ್ಷುಲ್ಲಕ ರಾಜಕೀಯ ಮಾಡುತ್ತಿವೆ. ಬರಗಾಲ ಇದ್ದಾಗಲೂ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಒಳ್ಳೆಯ ಮಳೆ ಬೆಳೆ ಆದಾಗಲೂ ಆತ್ಮಹತ್ಯೆ ನಡೆಯುತ್ತಿದೆ. ಯಾವುದೇ ಸಮಸ್ಯೆಗೆ ಆತ್ಮಹತ್ಯೆ ಒಂದೇ ಪರಿಹಾರ ಅಲ್ಲ. ಜನರಲ್ಲಿ ಜಾಗೃತಿ ಮೂಡಿಸುವ ಆತ್ಮವಿಶ್ವಾಸ ಮೂಡಿಸುವ ಕೆಲಸವನ್ನು ಸರ್ಕಾರ ಮಾಡಲಿದೆ. ಇದ್ದಕಾಗಿನ ವಿಶಿಷ್ಟ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಯಾವುದು ಸ್ವಾಮಿ ವಿಶಿಷ್ಟ ಕಾರ್ಯಕ್ರಮ? ಮಾನ್ಯ ವಿರೊಧ ಪಕ್ಷದ ನಾಯಕರು ಬೆಳಿಗ್ಗೆ ಒಂದು ವಿಷಯ ಪ್ರಸ್ತಾಪ ಮಾಡಿದರು. ನೆನ್ನೆ ಟಿವಿಯಲ್ಲಿ ಎಲ್ಲಾ ನೋಡಿದ್ದೇವೆ. ಒಬ್ಬ ವಿಎಸ್ಐಎಲ್ ಸೊಸೈಟಿಯ ಅಧ್ಯಕ್ಷ ಮಾನ್ಯ ವಿರೋಧ ಪಕ್ಷದ ನಾಯಕರು ನೆನ್ನೆ ನಿಮ್ಮ ಗ್ರಾಮ ಅಂಜನಾಪುರಕ್ಕೆ ಬಂದಾಗ ಅಲ್ಲಿರತಕ್ಕಂತಹ ಸಮಸ್ಯೆ ಜನರ ಮುಂದೆ ಮತ್ತು ವಿರೋಧ ಪಕ್ಷದ ನಾಯಕರ ಮುಂದೆ ಇಟ್ಟಾಗ, ಆ ವಿಷಯ ಏಕೆ ಪ್ರಸ್ತಾಪ ಮಾಡಿದೆ ಎಂದು ನೆನ್ನೆ ರೋಡ್ ರೋಡ್‌ನಲ್ಲಿಯೇ ಹೊಡೆಸಿದ್ದೀರಿ, ಇದಾ ವಿಶಿಷ್ಟವಾದ ಕಾರ್ಯಕ್ರಮ ನಿಮ್ಮದು? ಇನ್ನೆಲ್ಲಾ ಹತ್ತಿಕ್ಕಲಿಕ್ಕೆ, ಈ ದೇಶ ಇತಿಹಾಸದಲ್ಲಿ

ಯಾವುದಾದರೂ ಒಂದು ಪಕ್ಷದ ಕಾರ್ಯಕರ್ತರ ಮುಖಾಂತರ ಸರ್ಕಾರ ನಡೆಸತಕ್ಕಂತಹವರು ಈ ರೀತಿಯಾದಂತಹ ಘಟನೆ ನಡೆಸಿದ್ದರೆ, ಅದು ಬಹುಶಃ ಕೇಸರಿಯ ತ್ಯಾಗ ವರ್ಣರಂಜಿತವಾದ ಕಲರ್‌ನಿಂದ ತಾವು ಏನು ಬಂದಿದ್ದೀರಿ, ನಮ್ಮಿಂದ ಅದು ಪ್ರಾರಂಭವಾಗಿದೆ. ನೆನ್ನೆ ಆದಂಥ ಘಟನೆಯ ಹಿನ್ನಲೆಯಲ್ಲಿ ಇಲ್ಲಿಯವರೆವಿಗೆ ನೀವು ಯಾರನ್ನು ಅರೆಸ್ಟ್ ಮಾಡಿದ್ದೀರಿ? ಆಗಲೇ ಹೇಳಿದೆನಲ್ಲ, ಅಲ್ಲಿ ಶವಸಂಸ್ಕಾರದ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಶವಸಂಸ್ಕಾರವನ್ನು ನಡೆಸಿಕೊಡಲು ಬಂದಂಥ ಜಂಗಮವರನ್ನು ಕರೆದುಕೊಂಡು ಹೊಗಿ ಧಾರವಾಡದ ಜೈಲಿನಲ್ಲಿ ಇಟ್ಟಿದ್ದೀರಿ. ಈ ರಾಜ್ಯದಲ್ಲಿ ತಾವೇನು ಮಂತ್ರಿಮಂಡಲವನ್ನು ರಚಿಸಿದಿರಿ ಅದರಲ್ಲಿ ಸ್ಥಾನ ಸಿಗಲಿಲ್ಲವೆಂದು ಹೇಳಿ ಈ ರಾಜ್ಯದ ಕೆಲವಾರು ಭಾಗಗಳಲ್ಲಿ ಬಸ್‌ಗಳನ್ನು ಸುಟ್ಟಿದರಲ್ಲ, ಈ ವಿಚಾರದಲ್ಲಿ ಇಲ್ಲಿಯವರೆವಿಗೆ ಯಾರನ್ನು ನೀವು ಅರೆಸ್ಟ್ ಮಾಡಿದ್ದೀರಿ? ಈ ಬಗ್ಗೆ ಉತ್ತರವನ್ನು ಗೃಹ ಸಚಿವರು ಇಡುತ್ತೀರೋ ಅಥವಾ ನೀವೇ ಇಡುತ್ತೀರೋ ಅದನ್ನು ಸದನದ ಮುಂದೆ ಇಡಿ. ಬೀದಿಯಲ್ಲಿ ಹೋಗತಕ್ಕಂಥ, ಮಸೀದಿಯಲ್ಲಿ ಪ್ರಾರ್ಥನೆ ಮಂದಿರದೊಳಗೆ ನುಗ್ಗಿದೀರಿ, ಬಸ್‌ಸ್ಟ್ಯಾಂಡಿನಲ್ಲಿ ಕೂಲಿ ಕೆಲಸ ಮಾಡತಕ್ಕಂಥವರಲ್ಲಿ ಸಿಕ್ಕ ಸಿಕ್ಕಿದವರಿಗೆಲ್ಲಾ ಥಳಿಸಿದ್ದೀರಿ, ಪಾಪ ಆ ಜಂಗಮರನ್ನೂ ಕೂಡ ಥಳಿಸಿದಿರಿ, ಮೊದಲು ಅವರನ್ನು ಬಿಡಿಸುವುದಕ್ಕೆ ಸಾಧ್ಯವಿದ್ದರೆ ಬಿಡಿಸಿಬಿಡಿ. ಏಕೆಂದರೆ ಅವರ ಶಾಪವೇನಾದರೂ ತಟ್ಟಿಬಿಟ್ಟೀತು. ಏಕೆಂದರೆ ನಿಮಗೆ ಬಹಳ ನಂಬಿಕೆ ಇದೆ. ಒಂದು ಕಾಲದಲ್ಲಿ ರೇವಣ್ಣನವರಿಗೆ ಜಾಸ್ತಿ ನಂಬಿಕೆ ಇದೆ ಎನ್ನುತ್ತಿದ್ದಿರಿ, ದೇವೇಗೌಡರಿಗೆ ಜಾಸ್ತಿ ನಂಬಿಕೆ ಎನ್ನುತ್ತಿದ್ದಿರಿ. ಈಗ ನೀವು ಅವರೆಲ್ಲರನ್ನು overtake ಮಾಡಿಬಿಟ್ಟಿದ್ದೀರಿ. ಎಲ್ಲರನ್ನು ಈ ವಿಚಾರದಲ್ಲಿ ನೀವು ಮಾಡಿಬಿಟ್ಟಿದ್ದೀರಿ. ಅದುದರಿಂದ ಇವೊತ್ತೇನು ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ಹೇಳಿ ಈ ರೀತಿಯ ರಾಜಕಾರಣವನ್ನು ರಾಜ್ಯದಲ್ಲಿ ಹೊಸದಾಗಿ ಪ್ರಾರಂಭ ಮಾಡುವುದಕ್ಕೆ ಏನು ಹೊರಟಿದ್ದಿರಿ, ತಮ್ಮ ಪಕ್ಷದ ಕಾರ್ಯಕರ್ತರ ಮೇಲೆ ನಿನ್ನೆ ನೀವು ತೆಗೆದುಕೊಂಡಂಥ ನಿರ್ಧಾರ, ಈ ಸವಾಲನ್ನು ನಾನು ಸ್ವೀಕಾರ ಮಾಡುತ್ತಿದ್ದೇನೆ, 24 ಗಂಟೆಯಾಗಿದೆ, ಇಲ್ಲಿಯವರೆಗೆ ಯಾರನ್ನು ನೀವು ಅರೆಸ್ಟ್ ಮಾಡಿದ್ದಿರಿ? ಇಲ್ಲಿ ನೀವು ಹೇಳುತ್ತೀರಿ, ಮೊನ್ನೆ ಹಾವೇರಿಯಲ್ಲಿ ನಡೆದಂಥ ಘಟನೆಯ ವಿಡಿಯೋ ಚಿತ್ರವನ್ನು ನೋಡಿ ನಾವು ಅರೆಸ್ಟ್ ಮಾಡಿದ್ದೇವೆಂದು ಹೇಳುತ್ತೀರಿ. ನ್ಯಾಯಾಂಗ ತನಿಖೆಯಲ್ಲಿ ಯಾವ ಯಾವ ಪಕ್ಷಗಳು ಇವೊತ್ತು ಗೊಬ್ಬರ ವಿಚಾರದಲ್ಲಿ ರಾಜಕಾರಣ ಮಾಡಿದ್ದಾರೆಂಬ ಬಗ್ಗೆ ಸರಿಯಾದಂಥ ರೀತಿಯಲ್ಲಿ ಒಂದು ನ್ಯಾಯಾಂಗ ತನಿಕೆ ನಡೆದರೆ ಆಗ ನಿಮ್ಮ ಬಣ್ಣ ಬಯಲಾಗುತ್ತದೆ. ನೀವೇನು ಈಗಾಗಲೇ ಪತ್ರಿಕೆಗಳಲ್ಲಿ

ಹೇಳಿದ್ದೀರಿ, ಕೇಂದ್ರದ ವಿರುದ್ಧ ಗುಡುಗಿದ ಮುಖ್ಯಮಂತ್ರಿಗಳು ಎಂದು ಬಂದಿದೆ. ಒಂದು ಕಡೆ ನೀವು ಸಂಘರ್ಷ ಮಾಡುವುದಿಲ್ಲವೆಂದು ಹೇಳುತ್ತೀರಿ. ಒಬ್ಬ ಮಂತ್ರಿಗಳು ಹೇಳುತ್ತಾರೆ ಒಂದು ಕಡೆ ಒದ್ದು ನೋಡಿ, ಕೊಟ್ರು ಗೊಬ್ಬರ ಎನ್ನುತ್ತಾರೆ. ನಿಮಗೆ ಈಗ ಅಧಿಕಾರವಿದೆ. ನೀವು ನಿಮ್ಮ ಮಾತಿನಲ್ಲಿ ಏನು ಮಾತುಗಳನ್ನು ಆಡಿದ್ದಿರಿ, ಆ ನಿಟ್ಟಿನಲ್ಲಿ ಕೆಲಸವನ್ನು ಮಾಡುವುದರ ಮುಖಾಂತರ, ಇವೊತ್ತು ಈ ಗೊಬ್ಬರದ ವಿಚಾರದಲ್ಲಿ ಜವಾಬ್ದಾರಿಯನ್ನು ಕೇಂದ್ರ ಸರ್ಕಾರದ ಮೇಲೆ ಹೊರಿಸುವುದರ ಮುಖಾಂತರ ತಾವು ಜವಾಬ್ದಾರಿಯಿಂದ ನುಣಿಚಿಕೊಳ್ಳತಕ್ಕಂಥ ಕೆಲಸವನ್ನು ಮಾಡಬೇಡಿ. ಈಗೇನು ರೈತರುಗಳು ಹೋರಾಟವನ್ನು ಮಾಡುತ್ತಿದ್ದಾರೆ ಆ ಬಗ್ಗೆ ಇಲ್ಲಸಲ್ಲದ್ದನ್ನು ಹೇಳಬೇಡಿ. ಈಗಾಗಲೇ ಕೃಷಿ ಸಚಿವರು ಹೇಳಿದ್ದಾರೆ, ಕೆಲವು ರೈತರುಗಳು ಮಾತನಾಡುತ್ತಿದ್ದರು ಎಂದು ಹೇಳಿ ಸತ್ತವನು ಕುಡಿದು ಸತ್ತಿದ್ದಾನೆಂದು ಹೇಳಿದಿರಿ. ಇನ್ನೊಬ್ಬರು ಹೇಳುತ್ತಾರೆ ಸತ್ತವನು ರೈತನೇ ಅಲ್ಲವೆಂದು, ಈ ರಾಜ್ಯದಲ್ಲಿ ಎಷ್ಟೋ ರೈತರುಗಳು ಭೂಮಿ ಇಲ್ಲದೆ ಕೂಲಿ ಕೆಲಸವನ್ನು ಮಾಡತಕ್ಕಂಥವರು ಇದ್ದಾರೆ. ಗುತ್ತಿಗೆ ಆಧಾರದ ಮೇಲೆ 2 ಎಕರೆ 3 ಎಕರೆ ಭೂಮಿಯನ್ನು ಪಡೆದುಕೊಂಡು ಉಳುಮೆ ಮಾಡಿ ಗುತ್ತಿಗೆ ಕೆಲಸ ಮಾಡತಕ್ಕಂಥ ರೈತರುಗಳು ಇದ್ದಾರೆ. ಇಂಥ ರೈತರುಗಳ ಹೆಸರಿನಲ್ಲಿ ಯಾವುದೇ ಭೂಮಿ ಇಲ್ಲ. ಬೇರೆಯವರಿಂದ ಭೂಮಿಯನ್ನು ಇವೊತ್ತು ಗುತ್ತಿಗೆ ಆಧಾರದ ಮೇಲೆ ಪಡೆದು ಉಳುಮೆ ಮಾಡಿ ಜೀವನ ಮಾಡುತ್ತಿರುವ ಸಾವಿರಾರು ರೈತರುಗಳಿದ್ದಾರೆ. ಇವೊತ್ತು ಎಷ್ಟೋ ರೈತರುಗಳಿಗೆ ಇಲ್ಲಿಯವರೆವಿಗೂ ಬಗರ್ ಹುಕುಂ ಅಡಿಯಲ್ಲಿ ಸಾಗುವಳಿ ಮಾಡುತ್ತಿರುವವರಿಗೆ ಪಹಣಿಯನ್ನೇ ನೀಡದಿರುವಂಥ ಹಲವಾರು ಘಟನೆಗಳು ಇವೆ. ರೈತರು ಸುಮ್ಮಸುಮ್ಮನೆ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಆದರೆ ಇವೊತ್ತು ಇಂಥ ಘಟನೆಗಳು ಏನು ನಡೆಯುತ್ತಿವೆ ಇದಕ್ಕೆ ಕಾರಣ ಏನು ಎನ್ನತಕ್ಕಂಥ ವಿಷಯದಲ್ಲಿ ಉಡಾಫೆ ಮಾತನಾಡುವುದನ್ನು ಇನ್ನಾದರೂ ನಿಲ್ಲಿಸಿ. ಪದೇ ಪದೇ ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿ ಹೊರಿಸಿ ಕೇಂದ್ರ ಸರ್ಕಾರದ ವಿರುದ್ಧ ನಾವು ಬೀದಿಗಿಳಿದು ಹೋರಾಟ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಪದೇ ಪದೇ ನೀವು ಹೇಳಿದರೆ ಬಹಳ ದಿವಸ ಜನರು ನಿಮ್ಮ ಈ ಮಾತನ್ನು ಕೇಳುವುದಿಲ್ಲ. ಈ ರೀತಿಯ ಮಾತು ನಡೆಯುವುದಿಲ್ಲ. ಚುನಾವಣೆಯನ್ನು ಯಾವ ರೀತಿ ನಡೆಸಿಕೊಂಡು ಬರಲಾಯಿತು. ಎನ್ನುವ ಬಗ್ಗೆ ನಾನು ಈಗ ಚರ್ಚೆ ಮಾಡುವುದಿಲ್ಲ. ಚುನಾವಣೆ ನಡೆಸಬೇಕಾದರೆ ಎಲ್ಲಾ ರೀತಿಯಲ್ಲಿಯೂ ಚುನಾವಣೆ ನಡೆಸುತ್ತಾರೆ. ಸಾಮ, ಭೇದ ನಡೆಯುತ್ತವೆ. ಯಾವ ರೀತಿ ಚುನಾವಣೆಯಾಯಿತು. ಅದರಿಂದ ಈ ರೀತಿಯಾಯಿತು, ಈ ಆಪರೇಶನ್ ಮಾಡುವುದಕ್ಕೆ ನಾವು ಸಿದ್ದರಿಲ್ಲ. ಇದರ

ಬಗ್ಗೆ ಪೋಸ್ಟ್‌ಮಾರ್ಟಂ ಮಾಡುವುದಕ್ಕೂ ನಾವು ಸಿದ್ಧರಿಲ್ಲ. 110 ಸೀಟ್‌ಗಳನ್ನು ತಾವು ಗೆದ್ದಿದ್ದೀರಿ. ಆರು ಜನ ಪಕ್ಷೇತರ ಶಾಸಕರೂ ಕೂಡ ತಮಗೆ ಆಡಳಿತವನ್ನು ನಡೆಸುವುದಕ್ಕೆ ತಮಗೆ ಅವಕಾಶವನ್ನು ಕೊಟ್ಟಿದ್ದಾರೆ. ಆಡಳಿತವನ್ನು ನಡೆಸಿ. ಆದರ ತಲೆ ತಿರುಗಿ ಹೋದರೆ ನಾವೇನು ನಿಮಗೆ ಬುದ್ಧಿಯನ್ನು ಕಲಿಸಬೇಕಾಗಿಲ್ಲ. ಯಾರು ಇವೊತ್ತು ನಿಮಗೆ 110 ಸೀಟ್‌ಗಳನ್ನು ನಿಮಗೆ ಕೊಟ್ಟಿದ್ದಾರೋ ಆ ಪುಣ್ಯಾತ್ಮರು ಅದೇ ಜನರು ನಿಮಗೆ ಬುದ್ಧಿಯನ್ನು ಕಲಿಸತಕ್ಕಂಥ ಕಾಲ ದೂರವಿಲ್ಲ ಎನ್ನತಕ್ಕಂಥ ಮಾತನ್ನು ನಿಮಗೆ ಎಚ್ಚರಿಕೆ ಕೊಟ್ಟು, ಈ ವಿಷಯದಲ್ಲಿ ಸದನದ ಮುಂದೆ ನೀವು ಹೇಳಬೇಕಾಗುತ್ತದೆ, ಇವೊತ್ತು ನ್ಯಾಯಾಂಗ ತನಿಖೆಗೆ Terms of reference ಏನೇನು ಇಟ್ಟಿದ್ದೀರಿ ಎಂದು ಹೇಳಬೇಕು. ಅದು ನಮಗೆ ಬಹಳ ಮುಖ್ಯ. ಈ ಬಗ್ಗೆ ಸಾರ್ವಜನಿಕವಾಗಿ ನೀವೇನೂ ಪ್ರಕಟ ಮಾಡಿಲ್ಲ. ಆ ಬಗ್ಗೆ ನೀವು ಹೇಳಬೇಕಾಗುತ್ತದೆ. ಅಲ್ಲಿರತಕ್ಕಂಥ ಸಣ್ಣ ಮಟ್ಟದ ಅಧಿಕಾರಿಗಳೇನಿದ್ದಾರೆ ಅವರು ಏನು ಇವೊತ್ತು ಬೆದರಿಕೆಯನ್ನು ಹಾಕಿದ್ದಾರೆ ಅವರೆಲ್ಲರನ್ನೂ ವರ್ಗಾವಣೆ ಮಾಡಿ. ಅವರನ್ನು ಸಸ್ಪೆಂಡ್ ಮಾಡಿ ಎಂದು ನಾನು ಹೇಳುವುದಿಲ್ಲ. ಇವೊತ್ತು ಬೇರೊಂದು ಕಡೆ ನಮ್ಮ ಗೃಹ ಸಚಿವರು ನಮ್ಮ Intelligence failure ಆಯಿತು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಪತ್ರಿಕೆಯಲ್ಲಿ ಅದನ್ನು ನೋಡಿದೆ. Intelligence ಇರತಕ್ಕಂಥದ್ದು ಮುಖ್ಯಮಂತಿಗಳ ಕೈಕೆಳಗೆ. ಅಂದರೆ ಗೃಹ ಸಚಿವರು ಹೇಳತಕ್ಕಂಥದ್ದರಲ್ಲಿ Intelligence ಅಧಿಕಾರಿಗಳು failure ಆದರೋ ಅಥವಾ ಮುಖ್ಯಮಂತ್ರಿಗಳು failure ಆದರೋ ಎನ್ನುವ ಬಗ್ಗೆ ಸ್ವಲ್ಪ ವಿವರಣೆ ಕೊಟ್ಟರೆ ಸೂಕ್ತ ಎನ್ನುವುದನ್ನು ಈ ಸಂದರ್ಭದಲ್ಲಿ ಮಾನ್ಯ ಗೃಹ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇವೊತ್ತು ತಾವೇನು ಈ ವಿಚಾರದಲ್ಲಿ ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ಮತ್ತೊಮ್ಮೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಈಗಾಗಲೇ ಈ ವಿಚಾರದಲ್ಲಿ ಮಾನ್ಯ ಖರ್ಗೆಯವರು, ಮಾನ್ಯ ಜಯಚಂದ್ರರವರು ಗೊಬ್ಬರದ ಸ್ಟಾಕ್ ಬಗ್ಗೆ, ಕೇಂದ್ರ ಸರ್ಕಾರದ ಕಾರ್ಯದರ್ಶಿಗಳ ಜೊತೆ ಚರ್ಚೆ ಮಾಡಿರುವುದರ ಬಗ್ಗೆ ಎಲ್ಲಾ ವಿವರಗಳೂ ನನ್ನ ಬಳಿ ಇದ್ದರೂ ಕೂಡ ಮತ್ತೆ ಅದೇ ಮಾಹಿತಿಗಳ ಬಗ್ಗೆ ಚರ್ಚೆ ಮಾಡಿ ಸಮಯವನ್ನು ವ್ಯರ್ಥ ಮಾಡದೆ ಇವೊತ್ತು ರಾಜಕೀಯವಾಗಿ ಈ ಒಂದು ಘಟನೆಯನ್ನು ದುರ್ಬಳಕೆ ಮಾಡಿಕೊಳ್ಳುವುದಕ್ಕೆ ಇವೊತ್ತು ಸರ್ಕಾರ ಏನು ಹೊರಟಿದೆ, ಆ ರೀತಿಯ ದುರ್ಬಳಕೆಯನ್ನು ನಿಲ್ಲಿಸಬೇಕು ಎನ್ನತಕ್ಕಂಥ ಮಾತನ್ನು ಹೇಳಿ ನನಗೇನು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಿರಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಸಿ ಪಾಟೀಲ್ (ಹಿರೇಕೆರೂರ್):-- ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಹಾವೇರಿ ಗೋಲಿಬಾರ್ ಬಗ್ಗೆ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. "ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲಾ" ಎಂದು ಹೇಳಲಾಗುತ್ತದೆ. ಇವೊತ್ತು ಯಾವ ಒಕ್ಕಲಿಗ ಭೂಮಿಯನ್ನು ಒಕ್ಕಬೇಕು ಎಂದು ಹೊರಟಿದ್ದಾನೆ ಆ ಒಕ್ಕಲಿಗನಿಗೆ ಬಿಕ್ಕುವಂಥ ಪರಿಸ್ಥಿತಿ ಇವೊತ್ತು ಈ ಸರ್ಕಾರದಲ್ಲಿ ನಿರ್ಮಾಣವಾಗಿದೆ. ಕರ್ನಾಟಕದ ಜನತೆ ಅದರಲ್ಲಿಯೂ ವಿಶೇಷವಾಗಿ ಉತ್ತರ ಕರ್ನಾಟಕದ ಜನತೆ ಬಿ.ಜೆ.ಪಿ ಪಕ್ಷದ ಮೇಲೆ ಅಪಾರ ನಂಬಿಕೆಯನ್ನಿಟ್ಟು, ರೈತರ ಬಗ್ಗೆ ಬಹಳ ಹೋರಾಟವನ್ನು ಮಾಡುತ್ತಾರೆ. ಈ ಸರ್ಕಾರ ಬಂದ ತಕ್ಷಣ ರೈತರಿಗೆ ಉಚಿತ ವಿದ್ಯುತ್ ಕೊಡುತ್ತಾರೆ, ರೈತರ ಪರವಾಗಿ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆಂದು ಹೇಳಿ ವಿಶೇಷವಾಗಿ ಉತ್ತರ ಕರ್ನಾಟಕದ ಜನತೆ ಬಿ.ಜೆ.ಪಿ, ಪಕ್ಷವನ್ನು ಬೆಂಬಲಿಸಿ ಇವೊತ್ತು ಆಡಳಿತಕ್ಕೆ ತಂದಿದ್ದಾರೆ. ಹಲವಾರು ಕನಸುಗಳನ್ನು, ಆಶಾಗೋಪುರಗಳನ್ನು ಇಟ್ಟುಕೊಂಡಿರುವ ಆ ಜನತೆ ಕನಸು ಕಾಣುತ್ತಿದ್ದಾರೆ. ಉತ್ತರ ಕರ್ನಾಟಕದ ಹೆಬ್ಬಾಗಿಲಾದ ಹಾವೇರಿಯಲ್ಲಿ ಯಾವ ಜನತೆ ಅತಿ ಹೆಚ್ಚಿನ ಮಾತುಗಳನ್ನು ಕೊಟ್ಟು ನಿಮ್ಮನ್ನು ಆಡಳಿತಕ್ಕೆ ತಂದಿದ್ದರೋ ಅವರು ಕಟ್ಟಿದಂತಹ ಆಶಾಗೋಪುರವನ್ನು ಈವತ್ತು ನಿಮ್ಮ ಸರ್ಕಾರ ಆಡಳಿತಕ್ಕೆ ಬಂದ ಕೇವಲ ಹತ್ತು ದಿನಗಳಲ್ಲಿ ಗೋಲಿಬಾರ್‌ಅನ್ನು ಮಾಡುವುದರ ಮೂಲಕ ಮೊದಲನೆಯದಾಗಿ ರೈತರ ಬಲಿ ತೆಗೆದುಕೊಂಡ ಕೆಲಸವನ್ನು ಇವೊತ್ತು ಈ ಸರ್ಕಾರ ಮಾಡಿದೆಯೆಂದು ಹೇಳುವುದಕ್ಕೆ ಬಹಳ ವಿಷಾದವನ್ನು ಪಡುತ್ತೇನೆ. ಈಗಾಗಲೇ ವಿರೋಧ ಪಕ್ಷದ ನಾಯಕರು, ಮಾಜಿ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಸವಿಸ್ತಾರವಾಗಿ ಚರ್ಚೆಯನ್ನು ಮಾಡಿದ್ದಾರೆ.10.06.2008ರಂದು ಘಟನೆ ಹೇಗೆ ಪ್ರಾರಂಭವಾಯಿತು ಎನ್ನುವುದರ ಬಗ್ಗೆ ಸ್ವಲ್ಪ ಬೆಳಕನ್ನು ಇಲ್ಲಿ ಚೆಲ್ಲಬೇಕಾಗುತ್ತದೆ. ರಸಗೊಬ್ಬರದ ಕೊರತೆ ಕಳೆದ ಮೇ ತಿಂಗಳಿನಿಂದಲೂ ಪ್ರಾರಂಭವಾಗಿದೆ. 30ನೇ ತಾರೀಖು ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಇಲ್ಲಿ ಅಧಿಕಾರವನ್ನು ಸ್ವೀಕಾರ ಮಾಡಿದ್ದಾರೆ. ಅವರು ಅಧಿಕಾರವನ್ನು ಸ್ವೀಕಾರ ಮಾಡಿದ 22 ಗಂಟೆಯೊಳಗಾಗಿ ನಾನು ರೈತರ ಪರವಾಗಿ ಹಿರೇಕೆರೂರಿನಲ್ಲಿ ಒಂದು ಪ್ರತಿಭಟನೆಯನ್ನು ಮಾಡಿದೆ. ರಸಗೊಬ್ಬರದ ಕೊರತೆ ಇದೆ ಮತ್ತು ಬೀಜದ ಕೊರತೆ ಇದೆಯೆಂದು ಸರ್ಕಾರಕ್ಕೆ ವಿಷಯವನ್ನು ಮನದಟ್ಟು ಮಾಡಿದೆ. ತದನಂತರ ಪ್ರತಿ ದಿನ ಉತ್ತರ ಕರ್ನಾಟಕದಲ್ಲಿರಬಹುದು, ದಕ್ಷಿಣ ಕರ್ನಾಟಕದಲ್ಲಿರಬಹುದು, ಎಲ್ಲಾ ಕಡೆಯಲ್ಲಿಯು ಕೂಡ ರೈತರು ರಸಗೊಬ್ಬರದ ಕೊರತೆಯಿಂದ ಮತ್ತು ಬೀಜದ ಕೊರತೆಯಿಂದ ಪ್ರತಿಭಟನೆಯನ್ನು ಮಾಡುವುದು, ಅಂಗಡಿಗಳ

ಮುಂದೆ ನಿಲ್ಲುವುದು, ರಸ್ತೆಗಳಲ್ಲಿ ಹರತಾಳ ಮಾಡುವುದೆಲ್ಲವೂ ಕೂಡ ನಡೆದುಕೊಂಡು ಬಂದಂಥ ಪದ್ಧತಿ. ಬಹುಶಃ 8ನೇ ತಾರೀಕು ಹುಬ್ಬಳ್ಳಿಯಲ್ಲಿ ದೊಡ್ಡ ಗಲಭೆಯಾಯಿತು. ಬೆಂಕಿ ಹಚ್ಚಿದರು, ಗೋದಾಮುಗಳಿಗೆ ನುಗ್ಗಿದರು, 9ನೇ ತಾರೀಖು ಶಿಗ್ಗಾಂವ್ ಕ್ರಾಸ್‌ನಲ್ಲಿ ಗಲಾಟೆಯಾಯಿತು. ಆವೊತ್ತಿನ ದಿವಸ ನಾವು ಆ ಕಡೆ ಬರುವಾಗ ನಮ್ಮನ್ನೂ ಕೂಡ ಒಂದು ಗಂಟೆ ಕಾಲ ರೈತರು ತಡೆಹಿಡಿದಿದ್ದರು. ಇಷ್ಟಾದರೂ ಕೂಡ ಸರ್ಕಾರ ಯಾವುದೇ ರೀತಿಯಲ್ಲಿಯೂ ಗೊಬ್ಬರವನ್ನು ಸಮರ್ಪಕವಾಗಿ ವಿತರಣೆ ಮಾಡುವಂಥ ಕೆಲಸವನ್ನು ಮಾಡಲಿಲ್ಲ. ಆದರ 10ನೇ ತಾರೀಖು ರೈತರು ಗೊಬ್ಬರದ ಅಂಗಡಿಗಳ ಮುಂದೆ ಸಾಲು ಗಟ್ಟಿ ನಿಂತಿದ್ದಾರೆ, ಆವೊತ್ತಿನ ದಿವಸ ಹಾವೇರಿ ಶಾಸಕರು, ಹಾವೇರಿಯ ಮಾಜಿ ಶಾಸಕರು, ಆವೊತ್ತಿನ ದಿವಸ ಹಾವೇರಿ ಜಿಲ್ಲೆ ಉಸ್ತುವಾರಿ ಸಚಿವರು ಅಲ್ಲಿ ಅಧಿಕಾರಿಗಳ ಒಂದು ಸಭೆಯನ್ನು ಕರೆದಿದ್ದಾರೆ. ಆ ಸಭೆ ನಡೆಯುತ್ತಿದೆ. ಆ ಸಭೆ ನಡೆಯುವ ಸಮಯದಲ್ಲಿ ಸುಮರು 12 ಗಂಟೆಗೆ ಪ್ರವಾಸಿ ಮಂದಿರದಿಂದ ಒಂದು ಮೆರವಣಿಗೆ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆಯನ್ನು ಕೂಗಿಕೊಂಡು ಸಿದ್ದಪ್ಪ ಸರ್ಕಲ್‌ವರೆಗೂ ಬರುತ್ತಾರೆ. ಅಲ್ಲಿ ಆಗಲೇ ರೈತರು ಗೊಬ್ಬರ ಇಲ್ಲದೆ ಕಂಗೆಟ್ಟು ನಿಂತಿದ್ದಾರೆ. ಅಲ್ಲಿಗೆ ಬಂದಂತಹ ಸಂದರ್ಭದಲ್ಲಿ ಒಬ್ಬರು ಹಾಲಿ ಸರ್ಕಾರದಲ್ಲಿ ಇರುವಂತಹ ಶಾಸಕರು ಜೊತೆಗಿದ್ದುಕೊಂಡು ಅವರ ಸಮ್ಮುಖದಲ್ಲಿ ಟೈರ್‌ಗೆ ಬೆಂಕಿ ಹಚ್ಚಿಸುತ್ತಾರೆ. ಅಲ್ಲಿ ಅಶಾಂತಿ ವಾತಾವರಣವನ್ನು ಉಂಟು ಮಾಡುತ್ತಾರೆ. ಆ ಸಿದ್ದಪ್ಪ ಸರ್ಕಲ್‌ನಲ್ಲಿ ಇವರು ಭಾಷಣ ಮಾಡುವುದಕ್ಕೆ ಹೋದಾಗ ಅಲ್ಲಿ ರೈತರು ಕೇಳುತ್ತಾರೆ, ಇಲ್ಲಿ with photo ಇದೆ, ನಿಮ್ಮ photo ಕೂಡ ಇದೆ. ಇಲ್ಲಿ ಸದನದ ಗಮನಕ್ಕೆ ತರುತ್ತೇನೆ.

ಶ್ರೀ ನೆಹರು ಓಲೇಕರ್ ಚನ್ನಬಸಪ್ಪ: ನಾವು ಬರುವುದಕ್ಕಿಂತ ಪೂರ್ವದಲ್ಲೇ ಟೈರ್‌ಗೆ ಬೆಂಕಿಯನ್ನು ಹಚ್ಚಿದರು ಎಂದು ಮಾನ್ಯ ಶಾಸಕರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಿ.ಸಿ ಪಾಟೀಲ್: ನಿಮ್ಮ Photo ಇದರಲ್ಲಿ ಇದೆ. ಬೆಂಕಿ ಹಚ್ಚಿದ್ದು ಇದೆ, ಇದರಲ್ಲಿ Photo ಕೂಡ ಇದೆ. ನೀವು ಇದ್ದಿದ್ದು, ನೀವು ಇದ್ದಂತಹ ಚಿತ್ರಗಳು ಇಲ್ಲಿ ಇವೆ.

ಶ್ರೀ ನೆಹರು ಓಲೇಕಾರ್ ಚನ್ನಬಸಪ್ಪ: ನಾವು ಬರುವುದಕ್ಕಿಂತ ಪೂರ್ವದಲ್ಲೇ ಜನರು ಬೆಂಕಿಯನ್ನು ಹಚ್ಚಿದ್ದರು.

ಶ್ರೀ ಬಿ.ಸಿ ಪಾಟೀಲ್: ಇಲ್ಲಿ ಇದೆ, ರಸ್ತೆಯಲ್ಲಿ ನಿಮ್ಮ ಸಮಕ್ಷಮದಲ್ಲಿ ಬೆಂಕಿ ಹಚ್ಚಿದ್ದಂತಹ photo ಕೂಡ ಇದೆ. ಇದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುವುದದಕ್ಕೆ ಇಷ್ಟಪಡುತ್ತೇನೆ.

ಬಿಜೆಪಿ ಬಾವುಟವನ್ನು ಹಿಡಿದುಕೊಂಡು ಬಿ.ಜೆ.ಪಿ ಶಾಸಕರು, ಮಾಜಿ ಶಾಸಕರು ಎಲ್ಲರೂ ಇರುವಂತಹ photo ಗಳು ಇವೆ. ಇದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ರೈತರು, ನೀವು ಒಬ್ಬರ ಮೇಲೆ ಒಬ್ಬರು ಕೆಸರು ಎರಚುವ ಕೆಲಸ ಬಿಡಿ, ನಮಗೆ ಗೊಬ್ಬರವನ್ನು ಕೊಡಿ, ನಿಮ್ಮ ಭಾಷಣವನ್ನು ಬಂದ್ ಮಾಡಿ ಎಂದು ಹೇಳಿದರು. ಅವರು ಹೇಳಿದಂತಹ ಸಂದರ್ಭದಲ್ಲಿ ಇವರು ಟೈರ್‌ಗೆ ಬೆಂಕಿ ಹಚ್ಚಿಯಾದ ಮೇಲೆ ಅಲ್ಲಿ ವಾತಾವರಣ ಕಲುಷಿತವಾದ ನಂತರ ಅಲ್ಲಿಂದ ಆ ನಾಯಕರು ಪಲಾಯನಗೊಂಡರು. ಆದರೆ ಇವರ ಜೊತೆ ಬಂದಂತಹ ಹಲವಾರು ಜನ ಅಲ್ಲಿ ರೈತರ ಜೊತೆ ಸೇರಿಕೊಂಡು ಅಲ್ಲಿ ಒಂದು ಪ್ರಕ್ಷುಬ್ಧ ವಾತಾವರಣ ಉಂಟುಮಾಡಿದರು. ಆ ವಾತಾವರಣ ಉಂಟಾದಂತಹ ಸಂದರ್ಭದಲ್ಲಿ ಒಬ್ಬರು ಕಲ್ಲು ಎಸೆಯುವುದು, ಈ ರೀತಿ ಗಲಾಟೆ ಪ್ರಾರಂಭವಾಯಿತೇ ಹೊರತು, ಇವರು ಇದನ್ನು ಬೇರೆ ಪಕ್ಷಗಳ ಮೇಲೆ ಪ್ರತಿಪಕ್ಷಗಳು ಪಿತೂರಿ ಮಾಡಿದರು ಎಂದು ಹೇಳುತ್ತಾರೆ. ಈ ಗಲಾಟೆ, ಈ ಘಟನೆ ಆಗುವುದಕ್ಕೆ ಅಂದು ಸರ್ಕಾರದಲ್ಲಿದ್ದಂತಹವರು ರಸಗೊಬ್ಬರವನ್ನು ವಿತರಣೆ ಮಾಡುವುದರ ಬಗ್ಗೆ ಕಾಳಜಿ ವಹಿಸಬೇಕಾಗಿತ್ತೇ ಹೊರತು, ಅವತ್ತು ಯಾವ ಜ್ವಲಂತ ಸಮಸ್ಯೆ ಇತ್ತು ಆ ಸಮಸ್ಯೆಗೆ ಗಮನ ಕೊಡದೇ ತಮ್ಮ ಮೇಲಿರುವಂತಹ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಅಂದು ಕೇಂದ್ರ ಸರ್ಕಾರದ ಮೇಲೆ ಧರಣಿಯನ್ನು ಮಾಡಿ ಅವರೇ ಅಶಾಂತಿಗೆ ಕಾರಣರಾದರು. ಇವತ್ತು ಬೇರೆ ಪ್ರತಿಪಕ್ಷಗಳ ಮೇಲೆ ಪಿತೂರಿ ಮಾಡಿ ಗಲಾಟೆ ಆಯಿತು ಎಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು firing ಆಗಬೇಕಾದರೆ, ಮೊದಲು ಲಾಠಿ ಚಾರ್ಜ್ ಆಗಬೇಕು. Tear gas cell ಅನ್ನು ಸಿಡಿಬೇಕು. KRSP ಯನ್ನು ಒಂದು ಜಾಗದಲ್ಲಿ depute ಮಾಡಿದರೆ ಆ ಜಾಗಕ್ಕೆ ಒಬ್ಬ ಸ್ಥಳೀಯ ಪೊಲೀಸ್ ಅಧಿಕಾರಿ ಇರಬೇಕು. TV ಮಾಧ್ಯಮದಲ್ಲಿ, ಅದು TV 9 ಇರಬಹುದು ಈ ಟಿವಿಯಲ್ಲಿ ಹಿಡಿದಂತಹ ದೃಶ್ಯಗಳನ್ನು ತಾವು ತರಿಸಿ ಅವಲೋಕನ ಮಾಡಿದರೆ ಗೊತ್ತಾಗುತ್ತದೆ. ಪೊಲೀಸಿನವರು ಯಾವುದೇ ಮುಂಜಾಗ್ರತೆ ಕ್ರಮವನ್ನು ಜರುಗಿಸದೆ ಬೇಕಾಬಿಟ್ಟಿಯಾಗಿ, ಹೀನಾಯಮಾನವಾಗಿ ಆ ರಸ್ತೆಯಲ್ಲಿ ಇರುವಂತಹ ಅಮಾಯಕರ ಮೇಲೆ ಗುಂಡನ್ನು ಹಾರಿಸಿದ್ದನ್ನು TV ಮಾಧ್ಯಮದವರ clipping ಅನ್ನು ತಾವು ತರಿಸಿ ನೀಡಿದರೆ ಇವತ್ತು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವತ್ತಿನ ದಿವಸ ಅಧಿಕಾರಿಗಳು, ಶಾಸಕಾಂಗ ಮತ್ತು ಕಾರ್ಯಾಂಗದ ಮಧ್ಯೆ ಸಮನ್ವಯ ಇಲ್ಲ. ಮಧ್ಯಾಹ್ನ 2.00 ಗಂಟೆ ನಂತರ ಅಲ್ಲಿ firing ಆಗಿದೆ. ಸಿದ್ದಲಿಂಗಪ್ಪ ಚೂರಿ ಮೃತಪಟ್ಟಿದ್ದಾರೆ. ಉಳಿದ ಹತ್ತು ಜನ ಗಾಯಾಳುಗಳಾಗಿದ್ದಾರೆ. ಈ ಸಂದರ್ಭದಲ್ಲಿ

ಸಾಯಂಕಾಲ ಮಾನ್ಯ ಮುಖ್ಯಮಂತ್ರಿಗಳು ಒಂದು ಉನ್ನತಾಧಿಕಾರಿಗಳ ವಿಶೇಷ ಸಭೆಯನ್ನು ಕರೆದು ಪತ್ರಿಕಾ ಘೋಷ್ಠಿಯಲ್ಲಿ ಹೇಳುತ್ತಾರೆ. ಹಾವೇರಿಯಲ್ಲಿ ಆದಂತಹ ಈ ಘಟನೆಗೆ ವಿಷಾದಿಸಿ, ಮೃತನ ಕುಟುಂಬಕ್ಕೆ ನಾವು ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿ ಮತ್ತು ಈ ಘಟನೆಯನ್ನು ತನಿಖೆ ಮಾಡುವುದಕ್ಕೆ ಬೆಳಗಾವಿ Regional Commissioner ರವರನ್ನು depute ಮಾಡಿದ್ದೇವೆನ್ನುವ ಮಾತನ್ನು ಹೇಳುತ್ತಾರೆ.

ಇದಾದ ನಂತರ ಏಳುಮುಕ್ಕಾಲಿಗೆ Additional DGP (Law and Order) ಇವರು ಉದಯ ಟಿವಿ ನ್ಯೂಸ್‌ನಲ್ಲಿ, ಹಾವೇರಿಯಲ್ಲಿ ಗೋಲಿಬಾರ್ ಆಗಿದ್ದರ ವಿಚಾರದಲ್ಲಿ ನಮಗೆ ಇನ್ನು ಯಾವುದೇ confirmation ಇಲ್ಲ ಎಂದು ಹೇಳುತ್ತಾರೆ. ಉನ್ನತಾಧಿಕಾರಿಗಳ ಸಭೆ ನಡೆದು, ಮಾನ್ಯ ಮುಖ್ಯಮಂತ್ರಿಗಳು ಈ ಹೇಳಿಕೆಯನ್ನು ಕೊಟ್ಟು, enquiry order ಮಾಡಿದ ನಂತರ Additional DGP (Law and order) ರವರು ಹೇಳುತ್ತಾರೆ. ಈ ಘಟನೆ ಬಗ್ಗೆ ನಮಗೆ ಇನ್ನೂ confirmation ಇಲ್ಲ, yet to be confirmed ಎಂದು ಹೇಳುತ್ತಾರೆ. ಅಂದರೆ ಸರ್ಕಾರ ಮತ್ತು ಅಧಿಕಾರಿಗಳ ಮಧ್ಯೆ ಯಾವ ರೀತಿ ಸಮನ್ವಯ ನಡೆಯುತ್ತಿದೆ? ಯಾವ ರೀತಿ ಹೊಂದಾಣಿಕೆ ಇದೆ? ಅಲ್ಲಿ ನಡೆದಂತಹ ಗಲಭೆ ಬಗ್ಗೆ ಪೊಲೀಸ್ ಉನ್ನತಾಧಿಕಾರಿಗಳ ಗಮನಕ್ಕೆ ಬಂದಿಲ್ಲವೆಂದು ಹೇಳಿದರೆ ಸರ್ಕಾರ ಯಾವ ರೀತಿ ನಿರ್ಲಕ್ಷತೆ ವಹಿಸಿದೆ ಎನ್ನುವುದನ್ನು ಇಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿಗೆ ಗಲಭೆಯಾಗಿ 13 ದಿವಸವಾಗಿದೆ. ಇಲ್ಲಿಯವರೆಗೂ ಅಲ್ಲಿ ಗಲಭೆಯಾದಾಗ ಗೋಲಿಬಾರ್ ಮಾಡಿದಂತಹ ಯಾವುದೇ ಪೊಲೀಸ್ ಅಧಿಕಾರಿಗಳ ಮೇಲೆ ಯಾವುದೇ ರೀತಿಯ ಕ್ರಮವನ್ನು ಸರ್ಕಾರ ಜರುಗಿಸಿಲ್ಲ. ಕೇವಲ SP ಒಬ್ಬರನ್ನು ರಜೆ ಮೇಲೆ ಕಳುಹಿಸಿದ ತಕ್ಷಣ ಅಲ್ಲಿ ನೊಂದಂತಹ ಕುಟುಂಬಗಳಿಗೆ ಸಾಂತ್ವನ ಸಿಗುವುದಿಲ್ಲ. ನೀವು ನ್ಯಾಯಾಂಗ ತನಿಖೆಗೆ ಆದೇಶ ಮಾಡಿದ ತಕ್ಷಣ ಅವರಿಗೆ ನ್ಯಾಯ ಸಿಗುವುದಿಲ್ಲ. ಇವತ್ತು ಅಲ್ಲಿ ಯಾವ ಒಬ್ಬ ಪೊಲೀಸ್ ಅಧಿಕಾರಿ ಕೂಡ suspend ಆಗಲಿಲ್ಲ. ಅವರ ಮೇಲೆ enquiry ಆಗಲಿಲ್ಲ. ವಿಚಾರಣೆ ನಡೆಯಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಇವತ್ತು ಹಾವೇರಿ ನಗರ ನಲುಗಿ ಹೋಗುತ್ತಿದೆ. ಅಲ್ಲಿ ಈ ಘಟನೆಯಾದ ನಂತರ ಸಿದ್ಧಲಿಂಗಪ್ಪ ಚೂರಿಯವರು, ಈಗ ನಮ್ಮ ಮಾಜಿ ಮುಖ್ಯಮಂತ್ರಿಯವರು ಹೇಳಿದ ಹಾಗೆ ಅಪ್ಪಟ ಬಿಜೆಪಿ ಕಾರ್ಯಕರ್ತರು. ಅವರ ಅಣ್ಣ ಇವತ್ತು ನಗರಸಭೆಯ ಬಿಜೆಪಿ ಸದಸ್ಯರಾಗಿದ್ದಾರೆ. ಅಲ್ಲಿ ಗೋಲಿಬಾರ್‌ನಲ್ಲಿ ಅವರು ಹತ್ಯೆಯಾಗಿ ಮೃತಪಟ್ಟರು ಎಂದು ಸರ್ಕಾರ ಅವರ ಕುಟುಂಬಕ್ಕೆ ಎರಡು ಲಕ್ಷ

ರೂಪಾಯಿಗಳನ್ನು ಕೊಟ್ಟರು ಹಾಗೂ ಅವರ ಶ್ರೀಮತಿಯವರಿಗೆ ಉದ್ಯೋಗವನ್ನು ಏನು ಒದಗಿಸಿಕೊಟ್ಟಿದ್ದಾರೆ, ಅದೇ ಮಮತೆ, ಅದೇ ಪ್ರೀತಿ, ಅದೇ ಕರುಣೆಯನ್ನು ಬೇರೆ ಗಾಯಾಳುಗಳ ಮೇಲೆ ಈ ಸರ್ಕಾರ ಇಲ್ಲಿಯವರೆಗೆ ತೋರಿಸಲಿಲ್ಲ. ಇದನ್ನು ನಾವು ಖಂಡಿಸಬೇಕಾಗುತ್ತದೆ. ನಮಗೆ ಬಿಜೆಪಿ ಪಕ್ಷದ ಪ್ರಣಾಳಿಕೆ ಗೊತ್ತಿಲ್ಲ. ಬಹುಶಃ ಇವರು ಒಂದು word ಸೇರಿಸಿಕೊಳ್ಳಬಹುದು. ಗಂಡಂದಿರಿಗೆ ಗುಂಡೇಟು, ಹೆಂಡತಿಯರಿಗೆ ನೌಕರಿ. ಇದು ಇವತ್ತು ಆಗಿದೆ. ಗುಂಡೇಟು ಹಾಕಿ ಸಾಯಿಸಿಬಿಟ್ಟು, ಅವರ ಮನೆಯವರಿಗೆ ನೌಕರಿ ಕೊಟ್ಟು ಬಿಟ್ಟರೆ ಅದರಿಂದ ಅವರಿಗೆ ನ್ಯಾಯ ಸಿಗುವುದಿಲ್ಲ. ಅವರಿಗೆ ಗುಂಡೇಟಿನಿಂದ ಹೊಡೆದು, ಅವರ ಮನೆಯವರಿಗೆ ನೌಕರಿ ಕೊಡುವುದರ ಮೂಲಕ ಅದನ್ನು ಸಮಜಾಯಿಸಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರೆ ಇದಕ್ಕಿಂತ ದುರದೃಷ್ಟಕರ ಸಂಗತಿ ಇನ್ನೊಂದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ನಾನು ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಕೃಷಿ ಸಚಿವರ ಕ್ಷೇತ್ರದಲ್ಲಿ ಕೃಷಿಕನ ಆತ್ಮಹತ್ಯೆ. ಗೃಹ ಸಚಿವರ ಕ್ಷೇತ್ರದಲ್ಲಿ ಗೃಹಿಣಿ ಆತ್ಮಹತ್ಯೆ. ಇವತ್ತು ಈ ಸರ್ಕಾರ ಯಾವ ರೀತಿ ನಡೆದುಕೊಂಡು ಹೋಗುತ್ತಿದೆ ಎನ್ನುವುದಕ್ಕೆ ಇದು ಜೀವಂತ ನಿದರ್ಶನಗಳು ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಎನ್. ಯೋಗೀಶ್‌ಭಟ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇವತ್ತು ಕೂಡ ರಸಗೊಬ್ಬರದ ಕೊರತೆ ಇದೆ. ಬೀಜದ ಕೊರತೆ ಇದೆ. ಔಷಧಿ ಕೊರತೆ ಇದೆ. ಇದರ ಬಗ್ಗೆ ಇದುವರೆಗೂ ಸರ್ಕಾರ ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಂಡಿಲ್ಲ. ನಮಗೆ ಬಂದ ಒಂದು ಮಾಹಿತಿ ಪ್ರಕಾರ ಇವತ್ತು ದಾವಣಗೆರೆ ಮತು ಶಿವಮೊಗ್ಗ ಜಿಲ್ಲೆಗಳಿಗೆ IPL Company ಯಿಂದ ಹೆಚ್ಚಿನ ಗೊಬ್ಬರವನ್ನು ಒದಗಿಸಬೇಕು ಎಂದು ಒಂದು ಆದೇಶ ಹೋಗಿದೆ ಎಂದು ನಮಗೆ ತಿಳಿದು ಬಂದಿದೆ. ಇದರ ಸತ್ಯಾಸತ್ಯತೆಯನ್ನು ಕಂಡು ಹಿಡಿಯುವುದಕ್ಕೆ ಆ ಕಂಪನಿಗೆ ನೋಟೀಸನ್ನು ಕೊಟ್ಟು ರಾಜ್ಯದ ಯಾವ್ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಗೊಬ್ಬರವನ್ನು ಕೊಟ್ಟಿದ್ದಾರೆ ಎಂದು ಈ ಸದನದ ಗಮನಕ್ಕೆ ತಾವೆಲ್ಲ ತರಬೇಕು ಹಾಗೂ ಇದರ ಸತ್ಯಾಸತ್ಯತೆಯನ್ನು ಕಂಡುಹಿಡಿಯಬೇಕು ಎನ್ನುವ ಮಾತನ್ನು ಕೂಡ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರಾಜ್ಯದಲ್ಲಿ ಉಂಟಾಗಿರುವಂತಹ ಗೊಬ್ಬರ ಮತ್ತು ಬೀಜದ ಕೊರತೆ ಏನಿದೆ ಇದರ ಬಗ್ಗೆ ಕೂಡಲೇ ಸರ್ಕಾರ ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಂಡು ಕಾಳಸಂತೆಯಲ್ಲಿ ಮಾರುವವರು

ಏನಿದ್ದಾರೆ ಅವರ ಮೇಲೆ ಕ್ರಮ ಜರುಗಿಸಬೇಕು. ..... ಮಾನ್ಯ ಅಧ್ಯಕ್ಷರೆ, ಇವತ್ತು ಏನಾಯಿತು ಎಂದರೆ ಗೊಬ್ಬರವನ್ನು ವಿತರಣೆ ಮಾಡಬೇಕಾದರೆ, ಯಾವಾಗ ವಿತರಣೆ ಪ್ರಾರಂಭ ಮಾಡಿದರು, ಅದು systematic ಆಗಿ ವಿತರಣೆಯಾಗಲಿಲ್ಲ. ಈಗ "ಅ" ಖಾತೆಯನ್ನು ಇಟ್ಟುಕೊಂಡು ಗೊಬ್ಬರವನ್ನು ವಿತರಣೆ ಮಾಡುತ್ತಿದ್ದಾರೆ. ಅದೇ ಗೊಬ್ಬರವನ್ನು ಮೊದಲಿನಿಂದಲೂ ಕೊಡುವಾಗ ರೈತರ "ಅ" ಖಾತೆಯನ್ನು ಇಟ್ಟುಕೊಂಡು ಗೊಬ್ಬರವನ್ನು ಕೊಟ್ಟಿದ್ದರೆ ಬಹುಶಃ ಈ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ ಎನ್ನುವ ಭಾವನೆಯನ್ನು ಕೂಡ ತಮ್ಮ ಮುಂದೆ ವ್ಯಕ್ತಪಡಿಸುತ್ತೇನೆ. ಏಕೆಂದರೆ ಕ್ಯೂನಲ್ಲಿ ಯಾರು ಬರುತ್ತಾರೆ ಅವರಿಗೆ ಒಂದು ಚೀಲ ಗೊಬ್ಬರ ಕೊಡುತ್ತಾರೆ. ಅವನು ಕಳ್ಳನೋ, ಸುಳ್ಳನೋ, ರೈತನೋ, ಕೂಲಿನೋ, ಹಮಾಲಿ ಇದ್ದಾನೋ ಯಾವುದನ್ನು ಲೆಕ್ಕಿಸದೆ ಇವತ್ತು ಬಂದು ಕ್ಯೂನಲ್ಲಿ ನಿಂತವರಿಗೆಲ್ಲ ಒಂದು ಚೀಲ ಗೊಬ್ಬರ ಕೊಟ್ಟಿದ್ದಲ್ಲದೆ, ಇವತ್ತು ಕೃಷಿ ಇಲಾಖೆ ಮತ್ತು ಸರ್ಕಾರ ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇರುವುದರಿಂದ ಇವತ್ತು ಈ ಗೋಲಿಬಾರನಂತಹ ಪ್ರಕರಣವಾಗಿದ್ದು, ಇವತ್ತು ಕರ್ನಾಟಕದಲ್ಲಿ ರೈತರು ಏನು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಅದಕ್ಕೆ ಸರ್ಕಾರದ ಬೇಜವಾಬ್ದಾರಿ ಕಾರಣ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಾ, ಇವತ್ತು ತಾವು ನನಗೆ ನಾಲ್ಕು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಓಲೇಕಾರ್ ನೆಹರೂ ಚನ್ನಬಸಪ್ಪ (ಹಾವೇರಿ) :– ಸನ್ಮಾನ್ಯ ಅಧ್ಯಕ್ಷರೆ, ನಾನು ನಿಯಮ 69ರ ಅಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿದ ತಮಗೆ ವಂದಿಸುತ್ತಾ, ಇಂದಿನ ಅಧಿವೇಶನದಲ್ಲಿ ವಿಶೇಷವಾಗಿ ಹಾವೇರಿ ಗೋಲಿಬಾರ್ ವಿಷಯವಾಗಿ ಅನೇಕ ಹಿರಿಯರು ಹಾಗೂ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಹಾವೇರಿಯಲ್ಲಿ ಗೋಲಿಬಾರ್ ಪ್ರಕರಣ ನಡೆಯುವುದಕ್ಕೆ ಕಾರಣ ಏನು? ಯಾವ ಕಾರಣದಿಂದ ಗೋಲಿಬಾರ್ ನಡೆಯಿತು? ಎಂಬುದನ್ನು ಭೇದಿಸುವಂಥಾದ್ದು ಬಹಳ ಪ್ರಮುಖವಾದ ವಿಚಾರವೆಂದು ನಾನು ಭಾವಿಸಿದ್ದೇನೆ. ಇವತ್ತು ಕೇಂದ್ರ ಸರ್ಕಾರಕ್ಕೆ ಅದಕ್ಕೆ ಸೀಮಿತವಾಗಿರುವಂಥಾ ಜವಾಬ್ದಾರಿ, ರಾಜ್ಯ ಸರ್ಕಾರಕ್ಕೆ ಅದಕ್ಕೆ ಸೀಮಿತವಾಗಿರುವಂಥಾ ಜವಾಬ್ದಾರಿಗಳನ್ನು ಕೊಡಲಾಗಿದೆ. ಈ ಸರ್ಕಾರಗಳಿಗೆ ಕೊಟ್ಟಿರುವಂಥ ಜವಾಬ್ದಾರಿಗಳನ್ನು ಸರಿಯಾದ ರೀತಿಯಲ್ಲಿ ಆಯಾ ಸರ್ಕಾರಗಳು ನಿಭಾಯಿಸಿತೆಂದರೆ ನಿಜವಾಗಿಯೂ ಯಾವುದೇ ತೊಂದರೆಗಳು ರಾಜ್ಯದಲ್ಲಿಯಾಗಲಿ, ದೇಶದಲ್ಲಿಯಾಗಲಿ ಬರುವುದಕ್ಕೆ ಸಾಧ್ಯವಿಲ್ಲ. ಇವತ್ತು ರಸಗೊಬ್ಬರವನ್ನು

ಉತ್ಪಾದನೆ ಮಾಡುವುದಾಗಲಿ, ಅದನ್ನು ರಾಜ್ಯಗಳಿಗೆ ಕಳುಹಿಸಿಕೊಡುವಂಥಾ ವ್ಯವಸ್ಥೆ ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ. ಈ ಕೆಲಸ ಕೇಂದ್ರ ಸರ್ಕಾರಕ್ಕೆ ಇರುವಂಥ ಸಂದರ್ಭದಲ್ಲಿ ಇವತ್ತು ರಾಜ್ಯಕ್ಕೆ ಕಳುಹಿಸಬೇಕಾಗಿರುವಂಥಾ ಗೊಬ್ಬರವನ್ನು ಕೇಂದ್ರ ಸರ್ಕಾರ ಕಳುಹಿಸದೇ ಇರುವುದರಿಂದ ಇವತ್ತಿನ ದಿವಸ ರಾಜ್ಯದ ಅನೇಕ ಕಡೆಗಳಲ್ಲಿ ಗೊಂದಲವುಂಟಾಗಿದೆ. ರಾಜ್ಯದಲ್ಲಿ ಈ ಸರ್ಕಾರ ಬರುವ ಪೂರ್ವದಲ್ಲಿ ವಿರೋಧಪಕ್ಷದ ನಾಯಕರಾಗಲಿ, ಉಳಿದಿರುವಂಥ ಎಲ್ಲಾ ನಾಯಕರು ಇವತ್ತು ಒಪ್ಪಿಕೊಂಡಿದ್ದಾರೆ. ಸರ್ಕಾರ ಬರುವುದಕ್ಕಿಂತ ಪೂರ್ವದಲ್ಲಿಯೇ ಈ ರಾಜ್ಯದಲ್ಲಿ ಗಲಾಟೆಗಳು ನಡೆದಿದ್ದವು ಎಂದು. ಅದು ದಾವಣಗೆರೆ, ಧಾರವಾಡ ಜಿಲ್ಲೆಯಲ್ಲಿ ಅನೇಕ ಕಡೆಗಳಲ್ಲಿ ಗಲಾಟೆ ನಡೆದಿದೆ. ಈ ಗಲಾಟೆ ನಡೆಯುವಂಥಾ ಸಂದರ್ಭದಲ್ಲಿ ರಾಜ್ಯದಲ್ಲಿ ಸರ್ಕಾರವಿರಲಿಲ್ಲ. ಆಗ ರಾಜ್ಯಪಾಲರ ಆಳ್ವಿಕೆ ಇದ್ದು, ರಾಜ್ಯಪಾಲರನ್ನು ದೂಷಣೆ ಮಾಡಬೇಕಾಗಿತ್ತು. ಮಾನ್ಯ ರಾಜ್ಯಪಾಲರು ಗೊಬ್ಬರವನ್ನು ಸರಿಯಾದ ರೀತಿಯಲ್ಲಿ ಕಳುಹಿಸಬೇಕೆಂದು ಮೂರು ನಾಲ್ಕು ತಿಂಗಳುಗಳ ಹಿಂದೆಯೇ ಕೇಂದ್ರ ಸರ್ಕಾರಕ್ಕೆ ಎರಡು ಬಾರಿ ಪತ್ರವನ್ನು ಬರೆದಿದ್ದಾರೆ. ಮಾನ್ಯ ರಾಜ್ಯಪಾಲರು ಎರಡು ಬಾರಿ ಪತ್ರಗಳನ್ನು ಬರೆದರೂ ಸಹಿತ ಇವತ್ತು ಕೇಂದ್ರ ಸರ್ಕಾರ ತನ್ನ ಹೊಣೆಗಾರಿಕೆಯನ್ನು ಅರಿತು ಇವತ್ತು ಗೊಬ್ಬರವನ್ನು ಕಳುಹಿಸಿಕೊಡುತ್ತೇವೆನ್ನುವ ಮಾತನ್ನು ಹೇಳಲಿಲ್ಲ. ಮಾನ್ಯ ರಾಜ್ಯಪಾಲರು ಬರೆದ ಪತ್ರಕ್ಕೆ ಕವಡೆ ಕಿಮ್ಮತ್ತು ಇಲ್ಲದ ರೀತಿಯಲ್ಲಿ ಇವತ್ತು ಕೇಂದ್ರ ಸರ್ಕಾರ ವರ್ತನೆ ಮಾಡಿರುವುದನ್ನು ನೋಡಿದರೆ, ನಿಜವಾಗಿಯೂ ನಾವು ಕೇಂದ್ರ ಸರ್ಕಾರವನ್ನು ಖಂಡನೆ ಮಾಡಬೇಕಾಗುತ್ತದೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ಕೇಂದ್ರ ಸರ್ಕಾರ ಪ್ರತಿ ವರ್ಷ ರಾಜ್ಯಕ್ಕೆ ಎಷ್ಟು ರಸಗೊಬ್ಬರವನ್ನು ಕಳುಹಿಸುತ್ತಾ ಇತ್ತು. ಅಷ್ಟು ರಸಗೊಬ್ಬರವನ್ನು ನಿಗದಿತ ವೇಳೆಯಲ್ಲಿ ಕಳುಹಿಸಿ ಕೊಟ್ಟಿದ್ದರೆ, ಈ ರಾಜ್ಯದಲ್ಲಿ ಸಮಸ್ಯೆ ಉದ್ಭವವಾಗುವುದಕ್ಕೆ ಸಾಧ್ಯವಿರಲಿಲ್ಲ. ಇವತ್ತು ಕೇಂದ್ರ ಸರ್ಕಾರ ನೇರವಾಗಿ ಈ ಹೊಣೆಯನ್ನು ಹೊರಬೇಕಾಗುತ್ತದೆ. ಕೇಂದ್ರ ಸರ್ಕಾರ ರಸಗೊಬ್ಬರವನ್ನು ಪೂರೈಕೆ ಮಾಡುವುದರಲ್ಲಿ ಸಂಪೂರ್ಣ ವಿಫಲವಾಗಿರುವುದರಿಂದ ಅದು ಈ ಹೊಣೆಯನ್ನು ಹೊರಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿ ಇಂತಹ ಘಟನೆಗಳು ನಡೆದಿರುವಂಥಾ ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಸ್ಥಳಕ್ಕೆ ಭೇಟಿ ನೀಟಿ, ಆ ಕುಟುಂಬಕ್ಕೆ ಪರಿಹಾರವನ್ನು ಕೊಡುವುದರ ಜೊತೆಗೆ ಅವರ ಧರ್ಮಪತ್ನಿಗೆ ನೌಕರಿಯನ್ನು ಕೊಡುವಂಥಾ ಕೆಲಸವನ್ನು ಮಾಡಿರುವುದನ್ನು ನಾವು ಕಂಡಿದ್ದೇವೆ. ಕೇಂದ್ರ ಸರ್ಕಾರ ಮಾಡಬೇಕಾಗಿರುವಂಥಾ ಕೆಲಸವನ್ನು ಇವತ್ತು ರಾಜ್ಯ ಸರ್ಕಾರ ತನ್ನ

ಪಾಲುಗಾರಿಕೆ ಇಲ್ಲದಿದ್ದರೂ ಸಹಿತ ಇವತ್ತು ಆ ಜವಾಬ್ದಾರಿಯನ್ನು ಹೊತ್ತು ನಿಭಾಯಿಸುತ್ತಿರುವುದನ್ನು ನೋಡಿದರೆ ಕೇಂದ್ರ ಸರ್ಕಾರ ಈ ಕುಟುಂಬಕ್ಕೆ ಏಕೆ ಪರಿಹಾರವನ್ನು ಒದಗಿಸಬಾರದು? ಗಾಯಾಳುಗಳಿಗೆ, ತೊಂದರೆಗೆ ಒಳಗಾದವರಿಗೆ ನೆರವನ್ನು ಏಕೆ ಕೊಡಬಾರದೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಕೇಳಬಯಸುತ್ತೇನೆ. ಇವತ್ತು ಹವೇರಿ ಜಿಲ್ಲೆಯಲ್ಲಿ 10ನೇ ತಾರೀಖಿನಂದು ನಾವು ಭಾರತೀಯ ಜನತಾ ಪಕ್ಷದ ವತಿಯಿಂದ ಕೇಂದ್ರ ಸರ್ಕಾರವು ಪೆಟ್ರೋಲಿಯಂ ಉತ್ಪಾದನೆಗಳ ಬೆಲೆ ಏರಿಕೆ ಮಾಡಿರುವಂಥಾದ್ದನ್ನು ಹಾಗು ರಸಗೊಬ್ಬರವನ್ನು ರಾಜ್ಯಕ್ಕೆ ಪೂರೈಕೆ ಮಾಡಿಲ್ಲವೆನ್ನುವ ವಿಚಾರಗಳ ಬಗ್ಗೆ ನಾವು ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು ನಿಜ. ನಾವು ಪ್ರತಿಭಟನೆಯನ್ನು ಶಾಂತಿಗಾಗಿ ಮುಗಿಸಿ, ಅಂದೇ ನಮ್ಮ ಸಂಪೂರ್ಣ ಕೆಲಸವನ್ನು ಮುಗಿಸಿದ್ದೆವು. ಅದು ಆದ ನಂತರ ಈ ಘಟನೆ ಪುನಃ ಕೆಲವು ಗೊಬ್ಬರ ಸಿಗದೇ ಕುಪಿತಗೊಂಡವರು ಅವರು ರಸ್ತೆಗೆ ಬರುವಂಥಾ ಕೆಲಸವನ್ನು ಮಾಡಿದರು. ಅವರು ರಸ್ತೆಗೆ ಬಂದಾಗ ಅದರಲ್ಲಿದ್ದಂತಹ ಅನೇಕ ಜನರು ಮದ್ಯಪಾನ ಸೇವನೆ ಮಾಡಿರುವವರು ಇದ್ದರು. ಈ ಕೆಲವು ಜನರು ಬಸ್ಸುಗಳಿಗೆ ಕಲ್ಲು ಹೊಡೆಯುವಂಥಾ ಕೆಲವನ್ನು ಮಾಡುತ್ತಿದ್ದರು. ಈ ರೀತಿ ಮಾಡುತ್ತಿರುವಾಗ ಪೋಲೀಸ್ ವ್ಯಾನ್‌ಗಳು ಅಲ್ಲಿಗೆ ಬಂದಂಥಾ ಸಂದರ್ಭದಲ್ಲಿ, ಆ ಪೋಲೀಸ್ ವ್ಯಾನ್‌ಗಳನ್ನು ಸಹ ಬೆನ್ನತ್ತಿ ಅದಕ್ಕೂ ಕಲ್ಲುಗಳನ್ನು ಹೊಡೆದಂಥಾದ್ದನ್ನು ನಾವು ವಿಡಿಯೋ ಚಿತ್ರೀಕರಣದಲ್ಲಿ ನೋಡಬಹುದು. ಅಗ ಪತ್ರಕರ್ತರು ಸ್ಥಳದಲ್ಲಿ ಇದ್ದರು. ಅದರ ಜೊತೆಗೆ ಅನೇಕ ಶಾಂತ ನಾಗರೀಕರು ಸಹ ವಿಡಿಯೋ ಕ್ಯಾಮರವನ್ನು ಮಾಡಿಕೊಂಡಿದ್ದಾರೆ. ಪೋಲೀಸ್‌ನವರು ಸಹ ವಿಡಿಯೋ ಕ್ಯಾಮರವನ್ನು ಮಾಡಿಕೊಂಡಿದ್ದಾರೆ. ನಾನು ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ಹಾವೇರಿ ಜಿಲ್ಲೆಯಲ್ಲಿ ಏನು ಘಟನೆ ನಡೆದಿದೆ. ಅದರ ಸಂಪೂರ್ಣ ವಿಡಿಯೊ ಚಿತ್ರೀಕರಣವಿದೆ. ನಾವು ಆ ವಿಡಿಯೊ ಚಿತ್ರಿಕರಣವನ್ನು ಪೋಲೀಸ್‌ನವರಿಂದ ತೆಗೆದುಕೊಂಡು ಅದನ್ನು ಈ ರಾಜ್ಯದ ಜನತೆಗೆ ಬಿತ್ತರಿಸುವಂಥಾ ಕೆಲಸವನ್ನು ಮಾಡಬೇಕೆಂದು ನಾನು ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತೇನೆ. ಆ ಚಿತ್ರಣವನ್ನು ಎಲ್ಲಾ ಜನತೆಯು ನೋಡಿದರೆ ವಾಸ್ತವಾಂಶ ಏನೆಂದರೆ ರಾಜ್ಯದ ಜನರಿಗೆ ನಿಜವಾಗಿಯೂ ಅರ್ಥವಾಗುತ್ತದೆ. ಈ ನಾಯಕರುಗಳಿಗೂ ಸಹ ಅರ್ಥವಾಗುತ್ತದೆ. ಆ ಕಾರಣದಿಂದ ಸನ್ಮಾನ್ಯ ಅಧ್ಯಕ್ಷರು ಸರ್ಕಾರದ ಮೂಲಕ ಆ ಕೆಲಸವನ್ನು ಮಾಡಿಸಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅವತ್ತು ನಡೆದಿರುವಂಥಾ ಎಲ್ಲಾ ಘಟನೆಗಳು ಸಹ ಚಿತ್ರೀಕರಣಗೊಂಡಿವೆ. ಆ ವಿಡಿಯೋ ಕ್ಯಾಸೆಟ್‌ಗಳನ್ನು ಬಿಡುಗಡೆ ಮಾಡಿಸಬೇಕು. ಅದರ

ಜೊತೆಗೆ ಇವತ್ತು ಅನೇಕ ಜನರು ಸಮಸ್ಯೆಯ ಸುಳಿಯಲ್ಲಿ ಸಿಲುಕಿದ್ದಾರೆ. ಇದು ಸತ್ಯ, ಇವತ್ತು ಪೊಲೀಸರ ಏಟಿನಿಂದ ಕೆಲವು ಜನರಿಗೆ ಗಾಯವಾಗಿದೆ, ತೊಂದರೆಯಾಗಿದೆ. ಅದರ ಜೊತೆಗೆ ಪುಟ್ಟಪ್ಪ ಹೊನ್ನತ್ತಿ ಎನ್ನುವವರು ಬೆಂಗಳೂರಿನ ಅಸ್ಪತ್ರೆಯಲ್ಲಿ ನರಳುತ್ತಿದ್ದಾರೆ. ಅವರು ತುಂಬಾ ಸಮಸ್ಯೆಯಲ್ಲಿದ್ದಾರೆ. ಆ ರೀತಿ ಸಮಸ್ಯೆಯಲ್ಲಿ ಇರುವವರಿಗೆ ಇನ್ನು ಹೆಚ್ಚಿನ ಪರಿಹಾರವನ್ನು ಸರ್ಕಾರ ಕೊಡಬೇಕೆಂದು ನಾನು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ಬಿ.ಸಿ.ಪಾಟೀಲ್ ರವರು ಮಾತನಾಡುವಂಥಾ ಸಂದರ್ಭದಲ್ಲಿ ನೇರವಾಗಿ ಶಾಸಕರು ಇದ್ದಂಥ ಸಂದರ್ಭದಲ್ಲಿ ಬಸ್ಸಿನ ಟೈರ್‌ಗೆ ಬೆಂಕಿಯನ್ನು ಹಚ್ಚಿ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದರೆಂಬ ಮಾತನ್ನು ಹೇಳುತ್ತಿದ್ದರು. ಇದು ಸತ್ಯಕ್ಕೆ ದೂರವಾಗಿರುವಂಥಾ ಮಾತು, ಸುಳ್ಳನ್ನು ಸತ್ಯದ ರೂಪದಲ್ಲಿ ಪರಿವರ್ತನೆ ಮಾಡುವಂಥಾ ಕಲೆಯನ್ನು ಬಿ.ಸಿ.ಪಾಟೀಲ್ ರವರು ಪಡೆದಿದ್ದಾರೆಂದು ನಾನು ಭಾವಿಸಿದ್ದೇನೆ.

ಶ್ರೀ ಬಿ.ಸಿ. ಪಾಟೀಲ್: Photograph ಇದೆ. ಅಲ್ಲಿ ಟೈರ್ ಗೆ ಬೆಂಕಿ ಹಚ್ಚಿದ್ದು ಅದರಲ್ಲಿ ಇದೆ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ: Photo copyಗಳು ಇವೆ. ನಾವು ಏನು ಪ್ರತಿಭಟನೆ ಮಾಡುವುದಕ್ಕೆ ಅಲ್ಲಿಗೆ ಹೋಗಿದ್ದೆವು. ಅಲ್ಲಿ ಏನು ಘಟನೆ ನಡೆಯುತ್ತಿತ್ತು, ಟೈರ್ ಗೆ ಬೆಂಕಿ ಹಚ್ಚುವಂಥಾ ಸಂದರ್ಭದಲ್ಲಿ ಅಲ್ಲಿ ಓಡುತ್ತಿರುವಂಥಾ ಸಂದರ್ಭದಲ್ಲಿ ತೆಗೆದಿರುವಂಥ Photo copyಗಳು ಆಗಿವೆ. ನಮ್ಮ ಸರ್ಕಾರ ಈಗಾಗಲೇ ನ್ಯಾಯಂಗ ತನಿಖೆಗೆ ಇವತ್ತು ಆದೇಶವನ್ನು ಹೊರಡಿಸಿದೆ. ನ್ಯಾಯಾಂಗ ತನಿಖೆ ಮಾಡಿದಾಗ ವಾಸ್ತವಾಂಶ ಏನೆಂಬುದು ಗೊತ್ತಾಗುತ್ತದೆ. ಆ ಸಂದರ್ಭದಲ್ಲಿ ಮಾಡಿರುವಂಥಾ ಅನೇಕ ವಿಚ್ಛಿದ್ರಕಾರಕ ಶಕ್ತಿಗಳು ಇಲ್ಲವೆಂದು ನಾನು ಹೇಳುವುದಿಲ್ಲ. ಅನೇಕ ಜನ ಕಿಡಿಗೇಡಿಗಳು ಮದ್ಯಪಾನವನ್ನು ಮಾಡಿ, ಅವತ್ತು ಪೊಲೀಸ್ ವ್ಯಾನ್ ಮೇಲೆ ಕಲ್ಲನ್ನು ಎಸೆಯುವುದನ್ನು ಹಾಗೂ ಎಸೆಯುವುದನ್ನು ಹಾಗೂ ಪೊಲೀಸರ ಬಂದೂಕನ್ನು ಕಸಿದುಕೊಂಡಿದ್ದನ್ನು ಸಹ ಆ ವಿಡಿಯೋ ಕ್ಯಾಮೆರಾದಲ್ಲಿ ಸೆರೆ ಹಿಡಿಯಲಾಗಿದೆ. ಪೊಲೀಸರನ್ನು ಬೆನ್ನಟ್ಟಿಸಿಕೊಂಡು ಹೋಗಿ ಆ ಪೊಲೀಸರಿಂದ ಬಂದೂಕನ್ನು ಕಸಿದುಕೊಂಡು, ಆ ಬಂದೂಕಿನೊಂದಿಗೆ ಪೊಲೀಸರನ್ನೇ ಬೆನ್ನಟ್ಟಿರುವಂಥಾದ್ದನ್ನು ಸಹ ವಿಡಿಯೋದಲ್ಲಿ ಸೆರೆ ಹಿಡಿದಿದ್ದಾರೆ. ಆ ಕಾರಣದಿಂದ ಈ ಒಂದು ಘಟನೆ ಏನು ನಡೆದಿದೆ. ಅದರ ವಾಸ್ತವಾಂಶ ಏನೆಂಬುದನ್ನು ಬಯಲಿಗೆಳೆಯಬೇಕೆಂದರೆ, ನಾವು ಆ ವಿಡಿಯೋ ಚಿತ್ರೀಕರಣವನ್ನು ರಾಜ್ಯದ ಜನತೆಗೆ

ತೋರಿಸಬೇಕೆಂದು ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ವ್ಯಾನ್ ನಲ್ಲಿ 22 ಜನ ರಿಸರ್ವ್ ಪೊಲೀಸ್ ಇದ್ದರು. ಆ 22 ಜನ ರಿಸರ್ವ್ ಪೊಲೀಸ್ ವ್ಯಾನ್ ಒಳಗೆ ಇದ್ದಂಥ ಸಂದರ್ಭದಲ್ಲಿ ಅವರ ಗಾಡಿಗೆ ಕಲ್ಲನ್ನು ಹೊಡೆಯುವುದರ ಜೊತೆಗೆ ಅವರು ಹೊರಗಡೆಗೆ ಬರದ ಹಾಗೆ ಆ ಗಾಡಿಯ ಚಿಲಕವನ್ನು ಹಾಕಿ, ಅದಕ್ಕೆ ಕಟ್ಟಿಗೆಯನ್ನು ಬಡಿಯುವಂಥಾ ಕೆಲಸವನ್ನು ಮಾಡಿದರು. ಅವರು ಕಟ್ಟಿಗೆಯನ್ನು ಬಡಿದ ನಂತರ, ಡೀಸೆಲ್‌ಅನ್ನು ತಂದು ಬೆಂಕಿಯನ್ನು ಹಚ್ಚುವಂಥ ಪ್ರಯತ್ನವನ್ನು ಮಾಡಿದಾಗ ಆ ಪೊಲೀಸರ ರೋಧನ ಕೇಳಬೇಕಾಗಿತ್ತು. ಅಲ್ಲಿದ್ದಂತಹ ಜನರು ಹೇಳುತ್ತಿದ್ದರು, ಆ ಪೊಲೀಸರು ನಮ್ಮನ್ನು ಹೊಡೆಯಬೇಡಿ. ನಾವು ನಿಮ್ಮ ಅಣ್ಣ ತಮ್ಮಂದಿರಾಗಿ ಇರುತ್ತೇವೆ. ನಿಮ್ಮ ಮಕ್ಕಳ ರೀತಿಯಲ್ಲಿರುತ್ತೇವೆ. ನಮ್ಮ ಹೆಂಡತಿ, ಮಕ್ಕಳು ಸಾಯುತ್ತಿದ್ದಾರೆನ್ನುವಂಥಾ ಕೂಗನ್ನು ಹಾಕುತ್ತಿದ್ದಾರೆಂಬ ವಿಚಾರವನ್ನು ಪ್ರತ್ಯೇಕದರ್ಶಿಗಳು ಇವತ್ತಿನ ದಿವಸ ಹೇಳುತ್ತಿದ್ದಾರೆ. ಅದು ತನಿಖೆಯಿಂದ ಬಯಲಿಗೆ ಬರುತ್ತದೆ. ಇದು ಬಯಲಿಗೆ ಬಂದ ನಂತರ ಬಿ.ಸಿ. ಪಾಟೀಲ್‌ರವರು ಏನು ಹೇಳುತ್ತಾರೆಂಬುದನ್ನು ಕಾದು ನೋಡೋಣ. ಇವತ್ತು ಅವರು ಏನು ಮಾತನಾಡುತ್ತಿದ್ದಾರೆ. ಅದು ಸೂಚ್ಯವಾದುದಲ್ಲವೆಂಬ ಮಾತನ್ನು ಇನ್ನೊಮ್ಮೆ ಸಭೆಯ ಗಮನಕ್ಕೆ ತರಬಯಸುತ್ತಾ, ಇವತ್ತು ಹಾವೇರಿ ಜಿಲ್ಲೆಯಲ್ಲಿ ಏನು ಘಟನೆಯಾಗಿದೆ. ಅದು ಆಗಬಾರದಾಗಿತ್ತು, ಈ ಆಗಬಾರದಂಥ ಘಟನೆಗೆ ಕೆಲವು ವಿಚ್ಛಿದ್ರಕಾರಿ ಶಕ್ತಿಗಳೇ ಕಾರಣವೆಂದು ನಾನು ಮತ್ತೊಮ್ಮೆ ಪುನರುಚ್ಚರಿಸುತ್ತೇನೆ. ಆ ಕಾರಣದಿಂದ ಇವತ್ತು ಆ ವಿಡಿಯೋ ಕ್ಯಾಸೆಟ್‌ನ ಮೂಲಕ ಇವತ್ತು ಏನು ವಿಚ್ಛಿದ್ರಕಾರಿಯಾದ ಕೆಲಸವನ್ನು ಮಾಡಿದ್ದಾರೆ, ಬೆಂಕಿಯನ್ನು ಹಚ್ಚುವಂಥಾ ಕೆಲಸವನ್ನು ಏನು ಮಾಡಿದ್ದಾರೆ, ಪೊಲೀಸರ ಬಂದೂಕನ್ನು ಕಸಿದುಕೊಳ್ಳುವಂಥಾ ಕೆಲಸವನ್ನು ಏನು ಮಾಡಿದ್ದಾರೆ. ಪೊಲೀಸರಿಗೆ ಬೆಂಕಿಯನ್ನು ಹಚ್ಚುವಂಥಾ ಕೆಲಸವನ್ನು ಏನು ಮಾಡುತ್ತಿದ್ದರೋ, ಅಂಥವರನ್ನು ಪೊಲೀಸರು arrest ಮಾಡುತ್ತಿಲ್ಲ ಆದರೆ ಅಮಾಯಕರನ್ನು arrest ಮಾಡುತ್ತಿದ್ದಾರೆ. ಅದರ ಗಲಾಟೆಯಲ್ಲಿ ಕೆಲವು ಜನ ಅಮಾಯಕರು ಸಹ ಸಿಕ್ಕಿದ್ದಾರೆ. ಸಿಕ್ಕಿರುವಂಥ ಅಮಾಯಕರ ಬಗ್ಗೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ನಾವು ಈಗಾಗಲೇ ಗೃಹ ಮಂತ್ರಿಗಳಿಗೆ ವಿನಂತಿಯನ್ನು ಮಾಡಿಕೊಂಡಿದ್ದೇವೆ. ಅಂಥ ಅಮಾಯಕರನ್ನು ಕೂಡಲೇ ಬಿಡುಗಡೆ ಮಾಡುವಂಥ ಕೆಲಸವನ್ನು ಮಾಡಿಸಬೇಕೆಂದು ನಾನು ವಿನಂತಿ ಮಾಡಿಕೊಂಡಿದ್ದೇನೆ.

ಮಾಜಿ ಮುಖ್ಯಮಂತ್ರಿಗಳಾಗಿರುವಂಥ ಕುಮಾರಸ್ವಾಮಿಯವರು ಗ್ರಾಮ ವಾಸ್ತವ್ಯದ ಬಗ್ಗೆ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಹಿಂದೆ ಅವರು ಆ ರೀತಿ ಗ್ರಾಮ ವಾಸ್ತವ್ಯವನ್ನು ಮಾಡುವಂಥ ಸಂದರ್ಭದಲ್ಲಿ ಹಿಂದಿನ ಬ್ಯಾಡಗಿ ಕ್ಷೇತ್ರದ ಕಾಕೋಳು

ಗ್ರಾಮದಲ್ಲಿ ಸಹ ಗ್ರಾಮ ವಾಸ್ತವ್ಯವನ್ನು ಮಾಡಿದ್ದರು. ಆ ಗ್ರಾಮಕ್ಕೆ ಅವರು ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಅಲ್ಲಿನ ಸಮಸ್ಯೆಗಳಿಗೆ ಸ್ಪಂದನ ಮಾಡುತ್ತೇನೆ ಎನ್ನುವ ಮಾತುಗಳನ್ನು ಹೇಳಿದಾಗ, ಅಂದು ಬ್ಯಾಡಗಿ ಕ್ಷೇತ್ರದ ಶಾಸಕನಾಗಿದ್ದಂಥ ನಾನು ಅವತ್ತು ಎರಡೇ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ನಾವು ಹೆಚ್ಚು ಬೇಡಿಕೆಗಳನ್ನಿಟ್ಟು ಅವುಗಳ್ಯಾವುವೂ ಈಡೇರಲಿಲ್ಲ ಎನ್ನುವಂಥಾದ್ದು ಬೇಡ, ಈ ಗ್ರಾಮಕ್ಕೆ ಬೇಕಾಗಿರುವ ಎಡರು ಬೇಡಿಕೆಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆಂದು ನನ್ನ ಅಂದಿನ ಭಾಷಣದಲ್ಲಿ ಹೇಳಿದ್ದೆ. ಮೊದಲನೆಯದು, ಆ ಗ್ರಾಮ ಅತ್ಯಂತ ದೊಡ್ಡ ಗ್ರಾಮವಾಗಿದ್ದು, ಬಡ ಜನತೆ ಇರುವ ಆ ಗ್ರಾಮಕ್ಕೆ ಒಂದು ಆಸ್ಪತ್ರೆಯ ಅವಶ್ಯಕತೆ ಇದೆ, ಈ ಗ್ರಾಮದಲ್ಲಿ ಅತ್ಯಂತ ಹಿಂದುಳಿದಂಥ ಮಕ್ಕಳಿದ್ದಾರೆ. ಅವಿದ್ಯಾವಂತರಿದ್ದಾರೆ,

(ಶ್ರೀ ಎನ್.ಯೋಗೀಶ್ ಭಟ್‌ರವರು ಅಧ್ಯಕ್ಷ ಪೀಠದಲ್ಲಿದ್ದರು)

ಚೇರ್ಮನ್ (ಶ್ರೀ ಎನ್.ಯೋಗೀಶ್ ಭಟ್):- ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಪ್ರಸ್ತಾಪ ಮಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಸನ್ಮಾನ್ಯ ಅಧ್ಯಕ್ಷರೇ, ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುತ್ತಿರುವಾಗ ವಿಚಾರ ಎಲ್ಲಿಗೋ ಹೋಗುತ್ತಿದೆ. ಇವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳಲಿ.

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿನಗರ):- ಅವರು ಮಾತನಾಡುತ್ತಿರುವಾಗ ನೀವೇಕೆ ಮಧ್ಯದಲ್ಲಿ ಮಾತನಾಡುತ್ತೀರಿ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ನಾನು ಅಧ್ಯಕ್ಷರನ್ನು ಕೇಳುತ್ತಿದ್ದೇನೆ. ಇದೇನು ರಾಜ್ಯಪಾಲರ ಭಾಷಣದ ಮೇಲೆ ಭಾಷಣವೋ ಅಥವಾ ರಸಗೊಬ್ಬರದ ಮೇಲೆ ಭಾಷಣವೋ?

(ಗೊಂದಲ)

ಚೇರ್ಮನ್:- ತಾವು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಂ.ಶ್ರೀನಿವಾಸ್ (ರಾಜರಾಜೇಶ್ವರಿನಗರ):- ನಂತರ ಅವರು ಮಾತನಾಡಲಿ, ಇವರದು ಮುಗಿದ ಮೇಲೆ ಅವರಿಗೂ ತಾವು ಅವಕಾಶ ಕೊಡಿ.

(ಗೊಂದಲ)

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ಬಿ.ಸಿ.ಪಾಟೀಲರು ಮಾತನಾಡಿದಾಗ ನಾವು ಸುಮ್ಮನಿರಲಿಲ್ಲವೇ?

(ಗೊಂದಲ)

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ತಾವು ಕುಳಿತುಕೊಳ್ಳಿ. ಬೇರೆಯವರು ಮಾತನಾಡಿದರೆ ಚಪ್ಪಾಳೆ ತಟ್ಟುತ್ತೀರಿ, ನಾವು ಮಾತನಾಡಿದರೆ ಅಡ್ಡಿಪಡಿಸುತ್ತೀರಿ. ಈಗ ನಾವು ಸುಮ್ಮನೆ ಕುಳಿತುಕೊಳ್ಳಿ. ನೀವು ಆಮೇಲೆ ಮಾತನಾಡುವಿರಂತೆ.

(ಗೊಂದಲ)

ಚೇರ್ಮನ್:– ಓಲೇಕಾರ್‌ರವರೇ ತಾವು ಅಧ್ಯಕ್ಷರನ್ನು ಕುರಿತು ಮಾಡನಾಡಿ. ಚೇರ್‌ಅನ್ನು ಕುರಿತು ಮಾತನಾಡಿ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:– ನಾವು ಇಲ್ಲಿಗೆ ಸುಮ್ಮನೆ ಬಂದು ಕುಳಿತಿಲ್ಲ. 1983ರಿಂದ ನಾವೂ ಇಲ್ಲಿ ಕುಳಿತಿದ್ದೇವೆ. ಸದನದಲ್ಲಿ ಏನು ಮಾತನಾಡಬೇಕು ಎನ್ನುವುದು ನಮಗೆ ಗೊತ್ತಿದೆ. ಆದರೆ...

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:–ಅವರು ಕಾಂಗ್ರೆಸ್ ಪಕ್ಷದ ಶಾಸಕರಾಗಿದ್ದರೋ, ಬಿ.ಜೆ.ಪಿ. ಶಾಸಕರಾಗಿದ್ದಾರೋ ಎನ್ನುವುದು ದಯಮಾಡಿ ನಮಗೆ ಅರ್ಥಮಾಡಿಕೊಡಬೇಕು.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:– ಅವರು ಮಾತನಾಡುವಾಗ ನಾವು ಅಡ್ಡ ಬರುತ್ತಿಲ್ಲ. ಅವರ ಕ್ಷೇತ್ರದಲ್ಲಿ ಏನು ನಡೆಯುತ್ತಿದೆ ಅದನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ನೀವು ಅರ್ಥಮಾಡಿಕೊಳ್ಳಿ, ಅಧ್ಯಕ್ಷರನ್ನು ಕೇಲಿ ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ:– ಹಿಂದಿನ ಶಾಸನಸಭೆಯಲ್ಲಿ ನೀವು ಕಾಂಗ್ರೆಸ್ ಶಾಸಕರಾಗಿದ್ದಿರೋ ಅಥವಾ ಬಿ.ಜೆ.ಪಿ. ಶಾಸಕರಾಗಿದ್ದಿರೋ ಎನ್ನುವುದು ನಮಗೆ

ಗೊತ್ತಾಗಬೇಕು.

ಶ್ರೀ ಓಲೇಕಾರ್ ನೆಹರೂ ಚನ್ನಬಸಪ್ಪ:- ನಾನು ಬಿ.ಜೆ.ಪಿ. ಶಾಸಕ.

ಶ್ರೀ ಹೆಚ್.ಸಿ.ಬಾಲಕೃಷ್ಣ:-ಆಗ ಉಪಮುಖ್ಯಮಂತ್ರಿಗಳು ನಿಮ್ಮವರೇ ಇದ್ದರು, ಆರೋಗ್ಯ ಖಾತೆಯನ್ನು ನೀವೇ ಇಟ್ಟುಕೊಂಡಿದ್ದಿರಿ, ಆಸ್ಪತ್ರೆಗಳನ್ನೆಲ್ಲ ನೀವೇ ಹಂಚಿದ್ದೀರಿ.

(ಗೊಂದಲ)

ಚೇರ್ಮನ್:- ಪರಸ್ಪರ ಚರ್ಚೆಗೆ ಅವಕಾಶವಿಲ್ಲ. ತಾವು ಕುಳಿತುಕೊಳ್ಳಿ. ಬಾಲಕೃಷ್ಣರವರೇ, ತಾವು ಕುಳಿತುಕೊಳ್ಳಿ. ಓಲೇಕಾರ್‌ರವರೇ ಸಾಕಷ್ಟು ಸಮಯವಾಯಿತು. ನೀವು ಸಬ್ಜೆಕ್ಟ್‌ಗೆ ಸಂಬಂಧಪಟ್ಟದ್ದನ್ನು ಮಾತ್ರ ಚರ್ಚೆ ಮಾಡಿ. ಎರಡು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಓಲೇಕಾರ್ ನೆಹರೂ ಚನ್ನಬಸಪ್ಪ:- ಮಾನ್ಯ ಅಧ್ಯಕ್ಷರೇ, ಮಾಜಿ ಮುಖ್ಯಮಂತ್ರಿಗಳು ಕಾಕೋಳು ಗ್ರಾಮಕ್ಕೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ನಾನು ಕೇವಲ ಎರಡು ಬೇಡಿಕೆಗಳನ್ನು ಇಟ್ಟಿದ್ದೆ. ನಾವು ಹೆಚ್ಚು ಬೇಡಿಕೆಗಳನ್ನು ಇಡಲಿಕ್ಕೆ ತಯಾರಿಲ್ಲ. ಕೇವಲ ಎರಡು ಬೇಡಿಕೆಗಳನ್ನು ಇಟ್ಟಿದ್ದೇವೆ, ಅದರಲ್ಲಿ ಒಂದು, ಈ ಗ್ರಾಮಕ್ಕೆ ಒಂದು ಆಸ್ಪತ್ರೆಯನ್ನು ಕೊಡಿ. ಈ ಗ್ರಾಮದ ಜನ ಬಹಳ ಹಿಂದುಳಿದಂಥ ಜನರಾಗಿದ್ದು, ಬಡವರಾಗಿದ್ದಾರೆ. ಇಲ್ಲಿ ಬಹಳ ಹಿಂದುಳಿದಂಥ ವಿದ್ಯಾರ್ಥಿಗಳಿದ್ದಾರೆ, ಅವರಿಗೆ ಕಾಲೇಜಿಗೆ ಹೋಗಲಿಕ್ಕೆ ಬಹಳ ದೂರವಾಗುತ್ತಿದೆ. ಆದ್ದರಿಂದ ಒಂದು ಕಾಲೇಜನ್ನು ಕೊಡಿ. ಇವೆರಡನ್ನು ಮಾತ್ರ ಕೊಡಿ ಎಂದು ಕೇಳಿದಾಗ ಆಗಿನ ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ಹುರುಪಿನಿಂದ ಒಪ್ಪಿಕೊಂಡರು, ನೀವು ಕೇವಲ ಎರಡೇ ಎರಡು ಬೇಡಿಕೆಯನ್ನು ಸಲ್ಲಿಸಿಸದ್ದೀರಿ, ಇದ್ಯಾವ ಮಹಾ ದೊಡ್ಡದು, ಕೂಡಲೇ ಈಡೇರಿಸುತ್ತೇವೆ ಬಿಡಿ ಎಂದು ಒಪ್ಪಿಕೊಂಡರು. ನಾವು ಹತ್ತಾರು ಬಾರಿ ಅವರ ಕಛೇರಿಗೆ ಅಲೆದೆವು, ಮನೆಗಳಿಗೆ ಅಲೆದವು. ಹೀಗೆ ಅಲೆದರೂ ಸಹ ಯಾವುದೇ ರೀತಿಯಲ್ಲಿ ಅವುಗಳನ್ನು ಮಂಜೂರಾತಿ ಮಾಡಿ ಕೊಡಲಿಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಹಿಂದಿನ ಸರ್ಕಾರದಲ್ಲಿ ಆರೋಗ್ಯ ಮಂತ್ರಿಗಳು ಯಾರಾಗಿದ್ದರು ಎಂದು ದಯಮಾಡಿ ಅವರು ಹೇಳಬೇಕು. ಆರೋಗ್ಯ ಮಂತ್ರಿ ಯಾರಾಗಿದ್ದರು ಎಂದು ಶಾಸಕರು ಹೇಳಬೇಕು. ಎಲ್ಲೆಲ್ಲೋ ಅಲೆದಿರಿ. ನಿಮ್ಮ ಮಂತ್ರಿಗಳೇ ನಿಮಗೆ ಮಾಡಿಕೊಡದಿದ್ದರೆ ಇನ್ಯಾರು ಮಾಡಿಕೊಡುತ್ತಾರೆ ಸ್ವಾಮಿ?

ಚೇರ್ಮನ್:-ಬಾಲಕೃಷ್ಣರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಓಲೇಕಾರ್ ನೆಹರೂ ಚೆನ್ನಬಸಪ್ಪ:- ನೀವು ಆಮೇಲೆ ಮಾತನಾಡುವಿರಂತೆ. ನೀವು ಆ ಕಡೆ ಇದ್ದೀರಿ, ನಿಮಗೆ ಅವಕಾಶ ಸಿಗುತ್ತದೆ.

ಶ್ರೀ ಎಂ.ಪಿ.ರೇಣುಕಾಚಾರ್ಯ:- ಸಮ್ಮಿಶ್ರ ಸರ್ಕಾರದಲ್ಲಿ ಆರೋಗ್ಯ ಸಚಿವರಿರಬಹುದು ಅಥವಾ ಬೇರೆ ಯಾವುದೇ ಸಚಿವರಿರಬಹುದು. ಅವರ ಖಾತೆಯಲ್ಲಿ ಹಸ್ತಕ್ಷೇಪ ಮಾಡಿ Direction ಕೊಟ್ಟಂಥವರು ನಿಮ್ಮವರೇ.

ಚೇರ್ಮನ್:- ತಾವು ದಯವಿಟ್ಟು ಕುಳಿತುಕೊಳ್ಳಿ, ಅವರು ಮಾತನಾಡುತ್ತಿದ್ದಾರೆ.

ಶ್ರೀ ಓಲೇಕಾರ್ ನೆಹರೂ ಚನ್ನಬಸಪ್ಪ:- ನಾವು ಹೇಳುವುದನ್ನು ಕುಳಿತುಕೊಂಡು ಕೇಳಿ. ಆಮೇಲೆ ನೀವು ಮಾತನಾಡುವಿರಂತೆ. ಸನ್ಮಾನ್ಯ ಅಧ್ಯಕ್ಷರೇ, ಅದರ ಜೊತೆಗೆ ನಾನು ಇನ್ನೊಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ತಮ್ಮ ಅವಧಿಯಲ್ಲಿ ತಾವು ಎಷ್ಟು ಗ್ರಾಮ ವಾಸ್ತವ್ಯವನ್ನು ಮಾಡಿದ್ದೀರಿ? ಆ ರೀತಿ ಗ್ರಾಮ ವಾಸ್ತವ್ಯವನ್ನು ಮಾಡಿದಂಥ ಸಂದರ್ಭದಲ್ಲಿ ನಿಮಗೆ ಎಷ್ಟು ಅರ್ಜಿಗಳು ಬಂದಿವೆ, ಹಾಗೆ ಬಂದಿರುವಂಥ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳಿಗೆ ನೀವು ಪೂರಕವಾಗಿ ಕೆಲಸವನ್ನು ಮಾಡಿಕೊಟ್ಟಿದ್ದೀರಿ? ಎನ್ನೂ ಎಷ್ಟು ಅರ್ಜಿಗಳು ಬಾಕಿ ಇವೆ ಎನ್ನುವುದನ್ನು ತಿಳಿಸಬೇಕು. ಸನ್ಮಾನ್ಯ ಅಧ್ಯಕ್ಷರೇ, ಬಹಳ ಮಹತ್ವವಾದ ವಿಷಯವಿದು. ಇವರು ಗ್ರಾಮ ವಾಸ್ತವ್ಯವನ್ನು ಮಾಡಿ, ಲಕ್ಷಾಂತರ ಅರ್ಜಿಗಳನ್ನು ಪಡೆದು....

(ಗೊಂದಲ)

ಚೇರ್ಮನ್:- ಓಲೇಕಾರ್‌ರವರೇ, ಇನ್ನೊಂದು ಸಲ ಗ್ರಾಮ ವಾಸ್ತವ್ಯವದ ಬಗ್ಗೆಯೇ ಚರ್ಚೆಯನ್ನು ಮಾಡೋಣ. ಈಗ ತಾವು ಕುಳಿತುಕೊಳ್ಳಿ. ಗ್ರಾಮ ವಾಸ್ತವ್ಯದ ಬಗ್ಗೆ ವಿಶೇಷ ಚರ್ಚೆಯನ್ನು ಇಡೋಣ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:--ಮಾನ್ಯ ಅಧ್ಯಕ್ಷರೇ, ಇದೇನೆಂದು ನಮಗೆ ಅರ್ಥವಾಗುತ್ತಿಲ್ಲ. ಇವರು ಏನು ಮಾಡುತ್ತಿದ್ದಾರೆ, ಎಲ್ಲಿಗೆ ಹೋಗುತ್ತಿದ್ದಾರೆ ಒಂದೂ ಗೊತ್ತಾಗುತ್ತಿಲ್ಲ.

(ಗೊಂದಲ)

ಚೇರ್ಮನ್:- ಓಲೆಕಾರ್‌ರವರೇ, ತಾವು ಕುಳಿತುಕೊಳ್ಳಿ

(ಗೊಂಧಲ)

ಚೇರ್ಮನ್:-ಈಗ ಹೆಚ್.ಡಿ.ರೇವಣ್ಣನವರು

(ಗೊಂದಲ)

ಶ್ರೀ ಎಂ.ಶ್ರೀನಿವಾಸ್;- ಮಾನ್ಯ ಮುಖ್ಯಮಂತ್ರಿಗಳಿಗೆ ಇವರು ಅರ್ಧ ಗಂಟೆ ಮಾತನಾಡಿದರು. ಆಗ ನಾವು ಸುಮ್ಮನೆ ಕುಳಿತುಕೊಳ್ಳಲಿಲ್ಲವೇ?

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:- ಶ್ರೀನಿವಾಸ್ ಸಾಹೇಬರೇ, ಆಗ ಅವರದೇ ಸರ್ಕಾರವಿದ್ದುದು. ತೆಗೆಸಿ ನೋಡಿ, ಏನಾಗಿದೆ ಎಂದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:-ಅವರ ವಿಧಾನಸಭಾ ಕ್ಷೇತ್ರದ ಬಗ್ಗೆ ಅವರು ಮಾತನಾಡುತ್ತಿದ್ದಾರೆ.

(ಗೊಂದಲ)

ಚೇರ್ಮನ್:- ತಾವು ಕುಳಿತುಕೊಳ್ಳಿ. ಈಗ ಹೆಚ್.ಡಿ.ರೇವಣ್ಣನವರು. ನಾನು ರೇವಣ್ಣನವರನ್ನು ಕರೆದಿದ್ದೇನೆ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:- ನಡೆದಂಥ ಘಟನೆಯ ಬಗ್ಗೆ ನಾನು ಮಾಹಿತಿಯನ್ನು ಸದನದಲ್ಲಿ ಕೇಳಬೇಕೆಂದರೆ, ಇವರು ಮಧ್ಯದಲ್ಲಿ ಎದ್ದೆದ್ದು ಮಾತನಾಡುತ್ತಿದ್ದಾರೆ.

ಚೇರ್ಮನ್:- ಓಲೆಕಾರ್‌ರವರೇ ತಾವು conclude ಮಾಡಿ ಕುಳಿತುಕೊಳ್ಳಿ. ನಾನು ರೇವಣ್ಣನವರ ಹೆಸರನ್ನು ಕರೆದಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:- ನಾನು ಯೀಲ್ಡ್ ಆಗಿಲ್ಲ ಸ್ವಾಮಿ. ಇದು ನನ್ನ ಕ್ಷೇತ್ರದ ಸಮಸ್ಯೆ. ನನ್ನ ಜಿಲ್ಲೆಯ ಸಮಸ್ಯೆ ಇದು. ನನ್ನ ಜಿಲ್ಲೆಯ ಸಮಸ್ಯೆಯನ್ನು ನಾನು ಹೇಳಬೇಕು ಎಂದರೆ ಅಡ್ಡಿಪಡಿಸುತ್ತಿದ್ದಾರೆ. ಅವರು ಮಾತನಾಡುವಂಥ ಸಂದರ್ಭದಲ್ಲಿ

ನಾವು ಗಪ್‌ಚಿಪ್‌ಆಗಿ ಕುಳಿತಿದ್ದೆವು. ನಾವು ಯಾವುದೇ ಚಕಾರವನ್ನು ಎತ್ತಿಲ್ಲ.

(ಗೊಂದಲ)

ಚೇರ್ಮನ್:- ಓಲೆಕಾರ್‌ರವರೇ, ತಮ್ಮ ಸಮಯವಾಯಿತು, ತಾವು ಕುಳಿತುಕೊಳ್ಳಿ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:- ಇದ್ದ ವಿಚಾರವನ್ನು ಮಾತನಾಡಿದರೆ ಅವರಿಗೆ ಸಿಟ್ಟು ಬಂದಿದೆ.

ಚೇರ್ಮನ್:-ತಮ್ಮ ಸಮಯವಾಯಿತು, ತಾವು ಕುಳಿತುಕೊಳ್ಳಿ. ರೇವಣ್ಣನವರೇ ತಾವು ಪ್ರಾರಂಭ ಮಾಡಿ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:-ನಾವು ಮಾಹಿತಿಯನ್ನು ಕೇಳಿದೆವು ಎಂದ ಕೂಡಲೇ ಅವರು ಅಷ್ಟೊಂದು ಕೋಪಕ್ಕೆ ಏಕೆ ಬರಬೇಕು?

ಚೇರ್ಮನ್:- ಓಲೆಕಾರ್‌ರವರೇ, ಇನ್ನೂ ಚರ್ಚೆ ಮಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ. ಓಲೆಕಾರ್‌ರವರೇ ತಾವು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:- ಅವರು ಮಾತನಾಡುವಾಗ ನಾವು ಇದೇ ರೀತಿ ಮಾಡುತ್ತೇವೆ.

(ಗೊಂದಲ)

ಚೇರ್ಮನ್: ತಾವು ಮುಗಿಸಿ

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:-ಅವರು ಮಾತನಾಡುವಾಗ ನಾವೂ ಹೀಗೆ ಗಲಾಟೆ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:-ಮುಖ್ಯಮಂತ್ರಿಗಳು ಹೆಣದ ಮೇಲೆ ಹಾರ ಹಾಕುವುದನ್ನು ಪ್ರಸ್ತಾಪ ಮಾಡಿದರು. ಮುಖ್ಯಮಂತ್ರಿಗಳು ಎಡಗೈನಲ್ಲಿ ಹಾರ ಹಾಕಿದರು ಎಂದು

ಮಾತನಾಡಿದರು. ಈಗ ಇವರು ತಮ್ಮ ಕ್ಷೇತ್ರದ ಬಗ್ಗೆ ಹೇಳುತ್ತಿದ್ದಾರೆ. ಅವರಿಗೆ ಅವಕಾಶ ಮಾಡಿಕೊಡಿ.

ಒಬ್ಬ ಮಾನ್ಯ ಸದಸ್ಯರು:- ನಿಯಮ 69ರ ಕೆಳಗೆ ಮಾತನಾಡುತ್ತಿರುವಂಥ ಸಂದರ್ಭದಲ್ಲಿ, ಗ್ರಾಮ ವಾಸ್ತವ್ಯದ ಬಗ್ಗೆ ಅವರು ಏಕೆ ಮಾತನಾಡಬೇಕಿತ್ತು?

(ಗೊಂದಲ)

ಚೇರ್ಮನ್:-ರೇವಣ್ಣನವರೇ, ಅವರು ಎರಡು ನಿಮಿಷದಲ್ಲಿ conclude ಮಾಡುತ್ತಾರೆ, ನಂತರ ತಾವು ಪ್ರಾರಂಭ ಮಾಡಿ. ಓಲೆಕಾರ್‌ರವರೇ ತಾವು ಎರಡು ನಿಮಿಷದಲ್ಲಿ conclude ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೇ, ನೆಹರೂ ಓಲೆಕಾರ್‌ರವರು ಹಾವೇರಿಯವರು. ಇದು ಅವರ ಕ್ಷೇತ್ರದಲ್ಲಿ, ಅವರ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಘಟನೆ. ಅವರು ತಮ್ಮ ಭಾವನೆಗಳನ್ನು, ವಸ್ತುಸ್ಥಿತಿಗಳನ್ನು ಹೇಳುತ್ತಿದ್ದಾರೆ. ಉಳಿದವರೆಲ್ಲ ಚರ್ಚೆ ಮಾಡಿದ ಆಧಾರದ ಮೇಲೆ ಅವರು ಒಳ್ಳೆಯ ರೀತಿಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ:-ಆ ವಿಷಯ ಚರ್ಚೆ ಮಾಡಲಿಕ್ಕೆ ರಾಜ್ಯಪಾಲರ ಭಾಷಣ ಇದೆ. ಅದರ ಮೇಲೆ ಚರ್ಚೆ ಮಾಡುವಾಗ ಅವರು ಈ ವಿಷಯವನ್ನು ಚರ್ಚೆ ಮಾಡಲಿ. ಈಗ ಏಕೆ ಚರ್ಚೆ ಮಾಡುತ್ತಿದ್ದಾರೆಂದು ನಗೆ ಗೊತ್ತಾಗುತ್ತಿಲ್ಲ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಬಂದಾಗ, ಚರ್ಚೆ ಮಾಡಿ ಅವರು ಕೇಳಲಿ. ಅವರಿಗೆ ಮಾಹಿತಿ ಬೇಕಾದರೆ, ನಾವು ಅಲ್ಲಿಗೆ ಹೋದಾಗ ಆ ಮಾಹಿತಿಗಳನ್ನು ಕೊಡುತ್ತೇವೆ.

ಚೇರ್ಮನ್:- ಬಾಲಕೃಷ್ಣರವರೇ, ಈಗ ಯಾವುದೇ ಚರ್ಚೆಗೆ ಹೋಗುವುದು ಬೇಡ. ಓಲೆಕಾರ್‌ರವರೇ ತಮಗೆ ಅವಕಾಶ ಕೊಡುತ್ತೇವೆ. ಎರಡು ನಿಮಿಷದಲ್ಲಿ conclude ಮಾಡಿ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:- ಮಾನ್ಯ ಅಧ್ಯಕ್ಷರೆ, ದಯವಿಟ್ಟು ಐದು ನಿಮಿಷ ಕೊಡಿ, conclude ಮಾಡುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೇ, ಇನ್ನೂ ನಾನೇ ಮುಖ್ಯಮಂತ್ರಿ

ಎಂದು ಅವರು ತಿಳಿದುಕೊಂಡಿದ್ದಾರೇನೋ ಗೊತ್ತಿಲ್ಲ. ನಿಮ್ಮವರೇ ಮುಖ್ಯಮಂತ್ರಿಗಳಿದ್ದಾರೆ. ನಿಮಗೆ ಏನು ಮಾಹಿತಿ ಬೇಕೋ ಅವರ ಹತ್ತಿರ ತಿರಿಸಕೊಳ್ಳಿ. ಎಷ್ಟು ಕೆಲಸ ಮಾಡಿದ್ದೇನೆ, ಎಷ್ಟು ಮಾಡಿಲಲ್ಲ, ಯಾವ ಯಾವ ಇಲಾಖೆಯಲ್ಲಿ...

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:- ನಾನು ಸರ್ಕಾರಕ್ಕೆ ಹೇಳುತ್ತಿರುವುದು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಅವರಿಗೆ ಕೇಳಿದರೆ ಸರಿ. ನನಗೆ ಹೇಳಿದ್ದಕ್ಕೇ ನಾನು ಮಾತನಾಡುತ್ತಿರುವುದು.

(ಗೊಂದಲ)

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:-ಮಾಹಿತಿ ಕೊಡಿ ಎಂದು ಸರ್ಕಾರಕ್ಕೆ ಹೇಳುತ್ತಿದ್ದೇನೆ. ನಾನು ನಿಮಗೆ ಹೇಳುತ್ತಿಲ್ಲ. ಮಾಹಿತಿಯನ್ನು ಸರ್ಕಾರ ಒದಗಿಸಲಿ ಎಂದೇ ಹೇಳುತ್ತಿದ್ದೇನೆ. ನನ್ನಲ್ಲಿ ಮಾಹಿತಿ ಇಲ್ಲ ಎಂದು ನೀವು ಹೇಳುತ್ತಿದ್ದೀರಲ್ಲ. ನಾನು ಇಲ್ಲಿಗೆ ಎರಡನೇ ಬಾರಿಗೆ ಆಯ್ಕೆಯಾಗಿ ಬಂದಿದ್ದೇನೆ.

ಚೇರ್ಮನ್:- ಓಲೆಕಾರ್‌ರವರೇ ನಿಮ್ಮ ಭಾವನೆಗಳನ್ನು ಎರಡೇ ನಿಮಿಷದಲ್ಲಿ conclude ಮಾಡಿ. ಇನ್ನು ಹೆಚ್ಚು ಅವಕಾಶ ಕೊಡುವುದಿಲ್ಲ. ಸಮಯವಾಯಿತು, ಎರಡು ನಿಮಿಷದಲ್ಲಿ ಹೇಳಿ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:- ಬೇರೆಯವರ ವಿಚಾರಗಳನ್ನು ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ಅವರಿಗೆ ಬಹಳ ಖುಷಿಯಾಗುತ್ತದೆ. ಆದರೆ ನಾವು ಅವರ ವಿಚಾರಗಳನ್ನು ಪ್ರಸ್ತಾಪ ಮಾಡಬೇಕು ಎಂದು ಅಂದ ಕೂಡಲೇ ಅವರಿಗೆ ಬಹಳ ಕಸಿವಿಸಿಯಾಗುತ್ತದೆ, ಮುಜುಗರವಾಗುತ್ತದೆ. ನಮ್ಮ ಮುಖ್ಯಮಂತ್ರಿಗಳ ಬಗ್ಗೆ ಇವತ್ತಿನ ದಿವಸ ಅವರು ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಆಗ ನಾವು ಚಕಾರ ಎತ್ತಲಿಲ್ಲ. ನಿಮ್ಮ ಕಾಲದಲ್ಲಿಯೇ ಬಹಳ ಸಲ ಗೋಲಿಬಾರ್ ಆಗಿದೆ. ಬಹಳ ಜನ ರೈತರು ನಿಮ್ಮ ಆಡಳಿತದ ಕಾಲದಲ್ಲಿ ಸತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಸತ್ತಿದ್ದಾರೆ. ಆ ಲಿಸ್ಟ್ ಎಲ್ಲ ಇದೆ. ಯಾರ್ಯಾರ ಕಾಲದಲ್ಲಿ ಏನೇನಾಗಿದೆ ಎನ್ನುವ ಸಂಪೂರ್ಣ ಮಾಹಿತಿ ಇದೆ. ಆ ಮಾಹಿತಿಯಲ್ಲಿರುವುದನ್ನು ಬಯಲಿಗೆ ಎಳೆಯಬೇಕಾಗಿದೆ.

ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಛೇರ್ಮನ್‌ರವರೆ, ಅವರಲ್ಲಿ ಮಾಹಿತಿ ಇದ್ದರೆ

ಅದನ್ನು ತಮ್ಮ ಮುಂದೆ ಇಡುವುದಕ್ಕೆ ಹೇಳಿ. ಮಾತನಾಡಬೇಕಾದರೆ ಏನಾದರೂ ಸ್ವಲ್ಪ ಮಾಹಿತಿ ಇಟ್ಟುಕೊಂಡು ಮಾತನಾಡಿ. ಅಂಥದೇನಾದರೂ ಮಾಹಿತಿ ಇದ್ದರೆ ಸದನದ ಮುಂದೆ ಇಡಿ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:- ನಾನೂ ಒಬ್ಬನೇ ಮಾತನಾಡುತ್ತಿದ್ದೇನೆ. ನಾನು ಮಾತನಾಡಿ ಮುಗಿಸುವವರೆಗೆ ಸುಮ್ಮನೆ ಕುಳಿತುಕೊಳ್ಳಿ ಎಂದು ನಿಮ್ಮ ಕಡೆಯವರಿಗೆ ಹೇಳಿ.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್:- ಮಾನ್ಯ ಛೇರ್ಮನ್‌ರವರೆ, ಗೋಲಿಬಾರ್ ಬಗ್ಗೆ ಬಹಳ ಮಹತ್ವದ ಚರ್ಚೆ ನಡೆಯುತ್ತಿದೆ.(ಗೊಂದಲ) ನೇರವಾಗಿ ಗೋಲಿಬಾರ್ ಬಗ್ಗೆ ಮಾತನಾಡಲಿ.

ಶ್ರೀ ನೆಹರೂ ಓಲೆಕಾರ್ ಚನ್ನಬಸಪ್ಪ:- ನಾವೂ ಗೋಲಿಬಾರ್ ಬಗ್ಗೆ ಮಾತನಾಡಬೇಕು. ಹೆಲಿಕಾಪ್ಟರ್‌ನಲ್ಲಿ ಹತ್ತಾರು ಬಾರಿ ಅಡ್ಡಾಡಿದ್ದರ ಬಗ್ಗೆ ಅವರು ಮಾತನಾಡಿದರು. ಮುಖ್ಯಮಂತ್ರಿಗಳು ಹಾಗೆ ಹೇಳಿದ್ದಾರೆ, ಹೀಗೆ ಹೇಳಿದ್ದಾರೆ ಎನ್ನುವಂಥದ್ದನ್ನು ಅವರು ಹೇಳಿದರು. ನೀವು ಏನೇನು ಹೇಳುತ್ತೀರಿ, portfolio ಅವಶ್ಯಕತೆ ಇಲ್ಲ ಸ್ವಾಮಿ. ನಾನು ವಾಸ್ತವಾಂಶ ಹೇಳಿದರೆ ನಿಮಗೇಕೆ ಕಸಿವಿಸಿಯಾಗುತ್ತದೆ? ದಯವಿಟ್ಟು ಶಾಂತ ರೀತಿಯಿಂದ ಕುಳಿತು ಕೇಳಿ. ಏನು ನಡೆದಿದೆ, ಏನಾಗುತ್ತಿದೆ ಎನ್ನುವುದನ್ನು ತಾವೂ ಸಹ ಅರ್ಥಮಾಡಿಕೊಳ್ಳಿ. ಏನು ಮಾಡುತ್ತಿದ್ದಾರೆಂದು ನಿಮ್ಮನ್ನು ರಾಜ್ಯದ ಜನತೆ ನೋಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್:- ಕಳೆದ 23 ದಿವಸಗಳಲ್ಲಿ ಏನೇನು ನಡೆದಿದೆ, ಆಗಿದೆ ಎಂದು ಜನ ನೋಡಿಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶಂಪೂರ್:- ಕಳೆದ 22 ದಿವಸಗಳಲ್ಲಿ ರಾಜ್ಯದ ಜನತೆ ಎಲ್ಲವನ್ನೂ ನೋಡುತ್ತಿದ್ದಾರೆ. ಅದನ್ನೂ ಮರೆಯಬೇಡಿ.

(ಗೊಂದಲ)

ಶ್ರೀ ನೆಹರೂ ಓಲೆಕಾರ್ ಚನ್ನಬಸಪ್ಪ:- ಕಳೆದ 20 ತಿಂಗಳಲ್ಲಿ ಏನು ಮಾಡಿದ್ದೀರೆಂದು ನಿಮ್ಮದೂ ಸಹ ಈ ರಾಜ್ಯದ ಜನತೆಗೆ ಗೊತ್ತಿದೆ. ಹೇಗೆ ಕೈಕೊಟ್ಟಿರಿ, ಏನು ಮಾಡಿದ್ದೀರೆಂದು ಗೊತ್ತಿಲ್ಲವೇ?

(ಗೊಂದಲ)

ಛೇರ್ಮನ್:- ಓಲೇಕಾರ್‌ರವರೆ, ಬೇಗ conclude ಮಾಡಿ.

ಶ್ರೀ ಆರ್. ಧ್ರುವನಾರಾಯಣ್:- ಮಾನ್ಯ ಛೇರ್ಮನ್‌ರವರೆ, ಕಳೆದ 22 ದಿವಸಗಳಲ್ಲಿ 12 ರೈತರ ಆತ್ಮಹತ್ಯೆ ಆಗಿದೆ. ದಾಖಲೆ ಇದೆ. ಇದನ್ನು ದಾಖಲೆ ಮಾಡಬೇಕು. ಗೋಲಿಬಾರ್ ನಡೆದಿದೆ. ಇದು ದಾಖಲೆ (ಗೊಂದಲ) ಈ ದಾಖಲೆಯನ್ನು ಯಾರೂ ಕೂಡ ಮರೆಯುವುದಕ್ಕೆ ಆಗುವುದಿಲ್ಲ.

(ಗೊಂದಲ)

ಛೇರ್ಮನ್:- ಧ್ರುವನಾರಾಯಣ್‌ರವರೆ, ತಮಗೆ ಅವಕಾಶ ಕೊಟ್ಟಾಗ ಮಾತನಾಡಿ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:-ಸನ್ಮಾನ್ಯ ಛೇರ್ಮನ್‌ರವರೆ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾಜಿ ಮುಖ್ಯಮಂತ್ರಿಗಳು ಗ್ರಾಮ ವಾಸ್ತವ್ಯವನ್ನು ಮಾಡುವಂಥ ಸಂದರ್ಭದಲ್ಲಿ...

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್:- ಮಾನ್ಯ ಛೇರ್ಮನ್‌ರವರೆ, ಇಲ್ಲಿ ಗೋಲಿಬಾರ್ ವಿಚಾರವಾಗಿ ಚರ್ಚೆ ನಡೆಯುತ್ತಿರುವುದು. ಇಲ್ಲಿ ಗ್ರಾಮ ವಾಸ್ತವ್ಯದ ಬಗ್ಗೆ ಚರ್ಚೆ ನಡೆಯುತ್ತಿಲ್ಲ. ಬಹಳ ಮಹತ್ವವಾದ ವಿಚಾರ ಇದೆ.

(ಗೊಂದಲ)

ಛೇರ್ಮನ್:- ಮಾನ್ಯ ಸದಸ್ಯರುಗಳು ದಯಮಾಡಿ ಕುಳಿತುಕೊಳ್ಳಿ. (ಗೊಂದಲ) ಓಲೇಕಾರ್‌ರವರೆ, ತಾವು conclude ಮಾಡಿ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:- ರೈತ ಸಮುದಾಯ ಅರ್ಜಿ ಕೊಟ್ಟಿದೆ.

ರೈತ ಸಮುದಾಯ ಅರ್ಜಿ ಕೊಟ್ಟಿದ್ದನ್ನು ಏನಾಯಿತು ಎಂದು ಕೇಳುವ ಹಕ್ಕು ನನಗೂ ಇದೆ. ನಾನೂ ಒಬ್ಬ ಪ್ರತಿನಿಧಿ. ಅದನ್ನು ಮೊಟಕುಗೊಳಿಸುವಂಥ ಹಕ್ಕ ನಿಮಗಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ನಮ್ಮ ಮುಖ್ಯಮಂತ್ರಿಗಳು ಮಾಡದಿರುವುದನ್ನು ಅವರ ಮುಖ್ಯಮಂತ್ರಿಗಳು ಎಲ್ಲ ಮಾಡಿಕೊಡಲಿ ಸ್ವಾಮಿ. ಅದಕ್ಕೆ ನಮ್ಮದೇನೂ ತಕರಾರೂ ಇಲ್ಲ.

(ಗೊಂದಲ)

ಛೇರ್ಮನ್:- ಬಾಲಕೃಷ್ಣರವರೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಛೇರ್ಮನ್:- ಎಲ್ಲರೂ ಕುಳಿತುಕೊಳ್ಳಿ. ಓಲೇಕಾರ್‌ರವರೆ, ಸಮಯ ಆಯಿತು. conclude ಮಾಡಿ. ಇಲ್ಲದಿದ್ದರೆ bell ಹಾಕುತ್ತೇನೆ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:- ಈ ರಾಜ್ಯದಲ್ಲಿರುವಂಥ ಲಕ್ಷಾಂತರ ರೈತರು ಹಿಂದಿನ ಮುಖ್ಯಮಂತ್ರಿಗಳು ಗ್ರಾಮ ವಾಸ್ತವ್ಯ ಮಾಡಿದ ಸಂದರ್ಭದಲ್ಲಿ (ಗೊಂದಲ)...

ಶ್ರೀ ಬಿ.ಸಿ.ಪಾಟೀಲ್:- ಮಾನ್ಯ ಛೇರ್ಮನ್‌ರವರೆ, ದಯಮಾಡಿ ಗೋಲಿಬಾರ್ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆ ಹೊರತು ಬೇರೆ ವಿಷಯಕ್ಕೆ ಅವಕಾಶ ಕೊಡಬೇಡಿ.

(ಗೊಂದಲ)

ಛೇರ್ಮನ್:- ಎಲ್ಲರೂ ಕುಳಿತುಕೊಳ್ಳಿ. ಅವರಿಗೆ ಮಾತನಾಡುವ ಹಕ್ಕಿದೆ. (ಗೊಂದಲ) ತಾವೆಲ್ಲ ಕುಳಿತುಕೊಳ್ಳಿ. (ಗೊಂದಲ) ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ. (ಗೊಂದಲ) ಇಲ್ಲಿ ಅವರಿಗೆ ಮಾತನಾಡುವ ಹಕ್ಕಿದೆ. ತಾವು ಕುಳಿತುಕೊಳ್ಳಿ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:- ನಾನು ನನ್ನ ಮಾತನ್ನು ಪೂರ್ಣಗೊಳಿಸುವುದಕ್ಕೆ ಅವಕಾಶ ಕೊಡುತ್ತಿಲ್ಲ. ನಮ್ಮ ಬೇಡಿಕೆ, ಹಕ್ಕನ್ನು ಮಂಡಿಸಬಾರದೇ? ನಮ್ಮ ಮುಖ್ಯಮಂತ್ರಿಗಳ ಬಗ್ಗೆ, ನಮ್ಮ ಸರ್ಕಾರದ ಮಂತ್ರಿಗಳ ಬಗ್ಗೆ ಅವರೆಷ್ಟು ಅವಹೇಳನಕಾರಿಯಾಗಿ ಮಾತನಾಡಿದರೂ ಸಹ ಸುಮ್ಮನೆ ಕೈಕಟ್ಟಿಕೊಂಡು ನೋಡುತ್ತಾ ಕುಳಿತಿದ್ದೆವು. ಇವತ್ತು ಅರ್ಜಿಗಳೆಷ್ಟು ಬಂದಿದ್ದವು? ಅವು ಏನೇನಾದವು? (ಗೊಂದಲ)

ನಾನು ಹೆಚ್ಚೇನೂ ಕೇಳುತ್ತಿಲ್ಲ, ಆಪೇಕ್ಷೆ ಮಾಡುತ್ತಿಲ್ಲ. ನಾನು ಕೇಳುತ್ತಿರುವ ವಿಷಯವೇನೆಂದರೆ, ಅವರು ಗ್ರಾಮ ವಾಸ್ತವ್ಯ ಮಾಡಿದ ಸಂದರ್ಭದಲ್ಲಿ (ಗೊಂದಲ)....

ಶ್ರೀ ವಿ.ಮುನಿಯಪ್ಪ:– ನಿಯಮ 69ರ ಅಡಿಯಲ್ಲಿ ನಿಶ್ಚಿತವಾದ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ನೀವು ಅನುವು ಮಾಡಿಕೊಟ್ಟಿದ್ದೀರಿ. ಅದಕ್ಕೆ ಸಂಬಂಧಪಟ್ಟಹಾಗೆ ಮಾತನಾಡಬೇಕು. ಸಂಬಂಧವಿಲ್ಲದ್ದನ್ನು ಮಾತನಾಡುವುದಕ್ಕೆ ಅವಕಾಶ ಕೊಡಬಾರದು.

(ಗೊಂದಲ)

ಛೇರ್ಮನ್:–ತಾವು ಕುಳಿತುಕೊಳ್ಳಿ. ಓಲೇಕಾರ್‌ರವರೆ, ಬೇಗ ಮುಗಿಸಿ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್:– ಗೌರವಾನ್ವಿತ ಸದಸ್ಯರು ಮಾತನಾಡುವಾಗ ಇವರು ಏಕೆ ತೊಂದರೆ ಕೊಡುತ್ತಾರೆ. ಅವರು ಮಾನಾಡಲಿ. ಅವರು ಮಾತನಾಡಿದ ಮೇಲೆ ಇವರೆಲ್ಲ ಏನು ಬೇಕೋ ಅದನ್ನು ಮಾತನಾಡಲಿ.

(ಗೊಂದಲ)

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:–ಆ ರೈತ ಸಮುದಾಯ ಕೊಟ್ಟ ಎಷ್ಟು ಅರ್ಜಿಗಳಿಗೆ ಮುಕ್ತಿ ದೊರಕಿದೆ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಎಷ್ಟೋ ಜನರು ಅರ್ಜಿಗಳನ್ನ ಕೊಟ್ಟು ಅಲೆದೂ ಅಲೆದೂ ಸುಸ್ತಾಗಿ ಯಾವುದೇ ಪರಿಹಾರವನ್ನು ಕಾಣದೇ ಅವರು ತಮ್ಮ ತಮ್ಮ ಹಳ್ಳಿಯಲ್ಲಿ ಸುಸ್ತಾಗಿ ಕುಳಿತಿದ್ದಾರೆ. ಇಂಥ ಪರಿಸ್ಥಿತಿಯನ್ನು ನೋಡಿದರೆ ಪುನಃ ವಾಸ್ತವ್ಯಕ್ಕೆ ಮುಖ್ಯಮಂತ್ರಿಗಳು ಬರುತ್ತಾರೆಂದರೆ, ಇವತ್ತು ಜನರಿಗೇನಾಗಿದೆಯೆಂದರೆ, ಮುಖ್ಯಮಂತ್ರಿಗಳು ವಾಸ್ತವ್ಯ ಮಾಡುತ್ತಾರೆಂದರೆ, ನಾವು ಅರ್ಜಿ ಕೊಟ್ಟು ಬಂದರೆ ಅದರ ಹಿಂದೆ ಅಲೆದಾಡಬೇಕಾಗುತ್ತದೆಯೇ ಹೊರತು ಕೆಲಸವೇನೂ ಅಗುವುದಿಲ್ಲವೆಂಬ ಭ್ರಮೆ ಇವತ್ತು ಮೂಡುವಂತಾಗಿದೆ. ಅದಕ್ಕೆ ಇಂಥ ಪರಿಸ್ಥಿತಿ ಹಿಂದಿನ ಸರ್ಕಾರದಲ್ಲಿ ಬಂದಿರುವುದರಿಂದ ಅಂಥ ಪರಿಸ್ಥಿತಿ ಮುಂದಿನ ದಿನಗಳಲ್ಲಾಗಬಾರದೆನ್ನುವಂಥ ಚಿಂತನೆ ನಮ್ಮದು. ಇದನ್ನು ಮಾನ್ಯ ಛೇರ್ಮನ್‌ರವರ ಗಮನಕ್ಕೆ ತರುತ್ತಿದ್ದೇನೆಯೇ ಹೊರತು ಬೇರೇನಿಲ್ಲ. ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶ ಮಾಡಿದೆ. ತಾವು ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡಿಸಿ. ಯಾರು ತಪ್ಪತಸ್ಥರಿದ್ದಾರೆ, ಬಿ.ಸಿ. ಪಾಟೀಲ್‌ರವರು ಸುಳ್ಳು ಹೇಳುತ್ತಾರಲ್ಲ ಅಂಥವರನ್ನು ಬಿಟ್ಟು...

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್:- ಫೋಟೋ ಇದೆ. ನೀವು ಪುನಃ ಪುನಃ ಹೇಳುವುದಕ್ಕೆ ಬರಬೇಡಿ.

(ಗೊಂದಲ)

ಛೇರ್ಮನ್:-ಯಾವುದೇ ವೈಯಕ್ತಿಕ ಆಪಾದನೆಗಳನ್ನು ಮಾಡುವ ಹಾಗಿಲ್ಲ. (ಗೊಂದಲ) ಆ ರೀತಿ ಇನ್ಯಾವುದೇ ವೈಯಕ್ತಿಕ ಆಪಾದನೆಗಳು ಬಂದರೆ ಅದನ್ನು ಕಡತದಿಂದ ತೆಗೆಯುವುದಕ್ಕೆ ಹೇಳುತ್ತೇನೆ.

(ಗೊಂದಲ)

ಶ್ರೀ ದಿನೇಶ್ ಗೂಂಡುರಾವ್:- ಆ ವೈಯಕ್ತಿಕ ಹೇಳಿಕೆಯನ್ನು ಕಡತದಿಂದ ತೆಗೆಯಬೇಕಾಗುತ್ತದೆ.

ಛೇರ್ಮನ್:- ಈ ಆಪಾದನೆಗೆ ಸಂಬಂಧಪಟ್ಟಂತೆ ನಾನು ಯೋಚನೆ ಮಾಡುತ್ತೇನೆ, ತಾವು ಕುಳಿತುಕೊಳ್ಳಿ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:- ಮಧ್ಯೆ ಮಧ್ಯೆ ಮಾತನಾಡುವುದಕ್ಕೆ ಹೋಗಬೇಡಿ. ಇದು ಸದನ. ನೀವು ಮಾತನಾಡುವಾಗ ನಾವು ಸುಮ್ಮನೆ ಕುಳಿತಿದ್ದೆವು. ಆದ್ದರಿಂದ, ನೀವು ಮಧ್ಯೆ ಮಧ್ಯೆ ಎದ್ದು ತಕರಾರು ಮಾಡಬೇಡಿ. ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ನಿಷ್ಪಕ್ಷಪಾತವಾದ ತನಿಖೆ ಮಾಡಿಸಿ. ತಪ್ಪಿತಸ್ಥರು ಯಾರೇ ಇರಲಿ ಅವರಿಗೆ ಈ ರಾಜ್ಯದಲ್ಲಿ ಶಿಕ್ಷೆಯಾಗುವಂಥದ್ದಾಗಬೇಕು. ಇನ್ನು ಮುಂದೆ ಯಾರೂ ತಪ್ಪನ್ನೆಸಗದಂಥ ಕೆಲಸವಾಗಲಿ. ತಮ್ಮ ಘನ ಅಧ್ಯಕ್ಷತೆಯಲ್ಲಿ, ಈ ಸರ್ಕಾರದಿಂದಾಗಲಿ ಎನ್ನುವ ಚಿಂತನೆ ಇದೆ, ನಮ್ಮ ಸರ್ಕಾರದ ಚಿಂತನೆಯೂ ಅದೇ ಇದೆ. ಅದಕ್ಕಾಗಿ ಇವತ್ತಿನ ದಿವಸ ನಾನು ಗೌರವಪೂರ್ವಕವಾಗಿ ಕಳಕಳಿಯ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಿಷ್ಪಕ್ಷತವಾಗಿರುವ ತನಿಖೆಯನ್ನು ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ಕೆಲಸ ಮಾಡಿಸಬೇಕು. ನನಗೊಂದು ಸಂಶಯ ಬರುತ್ತದೆ. ಆ ಕ್ಷೇತ್ರದಲ್ಲಿ ಗಲಾಟೆಯೇನಾಗಿದೆ, ಆ ಗಲಾಟೆಯ ಬಗ್ಗೆ ಈ ಸದನದಲ್ಲಿ ಮಾತನಾಡುವುದಕ್ಕೂ ಕೂಡ ಇವರು ಬಿಡುತ್ತಿಲ್ಲವಲ್ಲ. ಇದರ ಹಿನ್ನೆಲೆಯಲ್ಲಿ ಯಾರದೋ ಕೈವಾಡವಿದೆ ಎಂದು ನನಗನಿಸುತ್ತದೆ. ನಮ್ಮ ಬಣ್ಣ

ಬಯಲಾಗುತ್ತದೆನ್ನುವ ಚಿಂತನೆಯಿಂದ ಇವತ್ತಿನ ದಿವಸ ನನ್ನ ಮಾತನ್ನು ಮೊಟಕುಗೊಳಿಸಲಿಕ್ಕೆ ನೋಡುತ್ತಿದ್ದಾರೆ. ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಇದು ಗಂಭೀರವಾದ ವಿಚಾರ. ನನಗೆ ಮಾತನಾಡಲಿಕ್ಕೇ ಅವಕಾಶ ಕೊಡದಿರುವಂಥ ಜನರು ಪಕ್ಕದ ಕ್ಷೇತ್ರದಲ್ಲಿರುವ ಬಿ.ಸಿ. ಪಾಟೀಲರು ಬಂದು ಏಕೆ ಇದನ್ನು ಪರಿಶೀಲಿಸಬಾರದು ಎಂದು ಕೇಳುತ್ತೇನೆ.

ಶ್ರೀ ಬಿ.ಸಿ.ಪಾಟೀಲ್:- ತನಿಖೆ ಮಾಡಿಸಿ. ತನಿಖೆ ಮಾಡುವವರೂ ನೀವೇ ಇದ್ದೀರಿ. ಸತ್ಯಾಂಶ ಬೆಳಕಿಗೆ ಬರಲಿ. ಸತ್ಯಾಂಶ ಬೆಳಕಿಗೆ ಬಂದಾಗ ಗೊತ್ತಾಗುತ್ತದೆ. ನಿಮ್ಮ ಮೇಲಿರುವ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಇನ್ನೊಬ್ಬರ ಮೇಲೆ ಆಪಾದನೆ ಮಾಡುವುದು ಬಹಳ ಗುರುತರವಾದ ಆಪಾದನೆಯಾಗುತ್ತದೆ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:- ಅವರು ಮಾತನಾಡುವ ಸಂದರ್ಭದಲ್ಲಿ ನಾನು ಗೌರವವನ್ನು ಕೊಟ್ಟು ಸುಮ್ಮನೆ ಕುಳಿತಿದ್ದೆ. ನಾನು ಮಾತನಾಡುವ ಸಂದರ್ಭದಲ್ಲಿ ಅವರು ಮಾತು ಮಾತಿಗೂ ಸಹ ಅವರು ಎದ್ದು ನನ್ನ ಮಾತನ್ನು ಸ್ಥಗಿತಗೊಳಿಸುವಂಥ, ಚುಚ್ಚುವಂಥ ಪ್ರಯತ್ನವನ್ನೇಕೆ ಮಾಡುತ್ತಿದ್ದಾರೆನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇವತ್ತು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):- ಮಾನ್ಯ ಛೇರ್ಮನ್‌ರವರೇ, ದಿನಾಂಕ 10-06-2008ರಂದು ಹಾವೇರಿಯಲ್ಲಿ ರಸಗೊಬ್ಬರ ಪೂರೈಕೆ ಮತ್ತು ವಿತರಣೆ ಸರಿಯಾಗಿ ಅಗುತ್ತಿಲ್ಲವೆಂಬ ಗಂಭೀರ ಸಮಸ್ಯೆ ಬಗ್ಗೆ ಸರ್ಕಾರದ ಗಮನ ಸೆಳೆಯಲು ಶಾಂತಿಯುತ ಹೋರಾಟದಲ್ಲಿ ನಿರತರಾಗಿದ್ದ ರೈತರ ಮೇಲೆ ಅನಾವಶ್ಯಕವಾಗಿ ವಿನಾಕಾರಣ ಏಕಾಏಕಿ ಗೋಲಿಬಾರ್ ಮತ್ತು ಸ್ಥಳದಲ್ಲಿ ರೈತರು ಮೃತಪಟ್ಟಿದ್ದು, 3 ಜನ ಚಿಂತಾಜನಕ ಸ್ಥಿತಿಯಲ್ಲಿದ್ದಾರೆ, 19 ಜನರಿಗೆ ಗಾಯವಾಗಿದ್ದು, ಇವೆಲ್ಲ ನಿಯಂತ್ರಣ ಮಾಡುವುದರಲ್ಲಿ ಸರ್ಕಾರ ವಿಫಲವಾಗಿದೆ ಎನ್ನುವುದರ ಬಗ್ಗೆ ನಿಲುವಳಿ ಸೂಚನೆಯನ್ನು ನಾವು ಬೆಳಿಗ್ಗೆ ತಂದಿದ್ದೆವು. ಅದನ್ನು ಸಭಾಧ್ಯಕ್ಷರು ನಾವೇನು ನಿಯಮ 60ರ ಅಡಿಯಲ್ಲಿ ತಂದಿದ್ದೆವು ಅದನ್ನು ನಿಯಮ 69ಕ್ಕೆ convert ಮಾಡಿದ್ದಾರೆ. ಏಕೆಂದರೆ, ಹಿಂದೆ ನಿಯಮ 60ರ ಅಡಿಯಲ್ಲಿ ಹಿಂದಿನ ಸಭಾಧ್ಯಕ್ಷರು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇವತ್ತಿನ ದಇವಸ ಗೋಲಿಬಾರ್ ಆಗಿದೆ. ಕಳೆದ 30ನೇ ತಾರೀಖು ಸನ್ಮಾನ್ಯ ಮುಖ್ಯಮಂತ್ರಿಗಳು ರೈತರ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕರಿಸಿದರು. ಅದೂ ಹಸಿರು ಶಾಲು ಹಾಕಿಕೊಂಡು ರೈತರ ಒಂದು ಸಂಕೇತವನ್ನು ರಾಜ್ಯದ ರೈತಾಪಿ ಜನರಿಗೆ

ತೋರಿಸಿದ್ದಾರೆಂದರೆ ತಪ್ಪಾಗಲಾರದು. ಆದರೆ, ಇವತ್ತಿನ ದಿವಸ ನಾನು ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕಾಗುತ್ತದೆ. ಏಕೆಂದರೆ, 30ನೇ ತಾರೀಖು ಮಂತ್ರಿಮಂಡಲ ರಚನೆಯಾದಂದಿನಿಂದ ಪ್ರಾರಂಭವಾಗಿದ್ದು ದಾವಣಗೆರೆ ಗಲಾಟೆಯಿರಬಹುದು, ಆನೇಕಲ್ ಗಲಾಟೆಯಿರಬಹುದು, ಮೈಸೂರಿನಲ್ಲಿ ಆದ ಗಲಾಟೆಯಿರಬಹುದು, ಬೆಂಗಳೂರಿನಲ್ಲಿ, ಎಲ್ಲಾ ಕಡೆ ಬಸ್ಸು ಸುಡುವುದರಿಂದ ಹಿಡಿದು ಜನ ಸಾಮಾನ್ಯರ ಆಸ್ತಿ ಎಷ್ಟು ನಷ್ಟವಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಏಕೆಂದರೆ, ಆ ಜನ ಸಾಮಾನ್ಯರ ಮೇಲೆ ನಡೆದ ಗಲಾಟೆ ಮತ್ತೆ ಸಾರ್ವಜನಿಕರ ಆಸ್ತಿಯನ್ನು ನಷ್ಟ ಮಾಡಿದ್ದರಿಂದ ಯಾರ್‍ಯಾ ಮೇಲೆ ಇಲ್ಲಿಯವರೆಗೆ ಎಷ್ಟೆಷ್ಟು ಕೇಸ್ ಹಾಕಿದ್ದಾರೆ? ಧಾರವಾಡದಲ್ಲಿ ಬಸ್ಸು ಸುಟ್ಟು ಹಾಕಿರುವುದು ಇರಬಹುದು, ಆನೇಕಲ್‌ನಲ್ಲಿ ಬಸ್ಸು ಸುಟ್ಟು ಹಾಕಿರುವುದು ಇರಬಹುದು, ಬೆಂಗಳೂರಿನಲ್ಲಿ ಬಸ್ಸು ಸುಟ್ಟು ಹಾಕಿರುವುದು ಇರಬಹುದು, ಮೈಸೂರಿನಲ್ಲಿ ಇರಬಹುದು, ಈ ವಿಷಯದಲ್ಲಿ ಎಷ್ಟು ಕೇಸ್ ಆಗಿದೆ ಎನ್ನುವುದನ್ನು ದಯಮಾಡಿ ಸನ್ಮಾನ್ಯ ಗೃಹ ಸಚಿವರು ಅಥವಾ ಸನ್ಮಾನ್ಯ ಮುಖ್ಯಮಂತ್ರಿಗಳು ಸದನದ ಮುಂದೆ ತಿಳಿಸಬೇಕೆಂದು ನಾನು ಛೇರ್ಮನ್‌ರವರಿಗೆ ಮನವಿ ಮಾಡುತ್ತಿದ್ದೇನೆ. ಸುಮಾರು 20 ಲಕ್ಷ ಟನ್ ಗೊಬ್ಬರ ನಮ್ಮ ಹಾಸನ ಜಿಲ್ಲೆಗೆ ಬೇಕಾಗಿತ್ತು. ನಮ್ಮಲ್ಲೀಗ ಸುಮಾರು 35–45 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗಡ್ಡೆ ಬೆಳೆಯುತ್ತಿದ್ದಾರೆ. ಅಂದು ವಿಶ್ವಾಸಮತ ಕೋರುವ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತಂದಿದ್ದೆ. ಅದನ್ನು 2–3 ದಿನಗಳಲ್ಲಿ ಸರಿಪಡಿಸುತ್ತೇವೆಂದು ಹೇಳಿದ್ದರು. ಇದಾದ ಮೇಲೆ, ಸನ್ಮಾನ್ಯ ಮುಖ್ಯಮಂತ್ರಿಗಳೇ ದೆಹಲಿಗೆ ಹೋಗಿದ್ದರು. ಅದಾದ ಮೇಲೆ ಹಿಂದೂ ಪತ್ರಿಕೆಯಲ್ಲಿ ನೋಡಿದ್ದೇವೆ. ಅದರಲ್ಲಿ, ಈ ರಾಜ್ಯದ ಯಾವುದೇ ಗೊಬ್ಬರದ scarcity ಇಲ್ಲ, ಈ ರಾಜ್ಯದಲ್ಲಿ ಅಂಥ ಪ್ರಮೇಯವಿಲ್ಲ ಎಂಬ ಭಾವನೆಯನ್ನು ಸಹ ಪತ್ರಿಕೆಯ ಮೂಲಕ ರಾಜ್ಯದ ಜನತೆಗೆ ತಿಳಿಸಿದ್ದಾರೆ. ನಮ್ಮ ಕೃಷಿ ಸಚಿವರೂ ಸಹ, ದಾವಣಗೆರೆಯಲ್ಲಿ, ಕೆಲವು ಗೊಬ್ಬರದ ಸಮಸ್ಯೆ ಇದೆ, ಅದನ್ನು 2–3 ದಿವಸಗಳಲ್ಲಿ ಸರಿಪಡಿಸುತ್ತೇವೆಂದು ಹೇಳಿದ್ದಾರೆ. ದಾವಣಗೆರೆಯಲ್ಲಿ ಗೊಬ್ಬರದ ಸಲುವಾಗಿ ಎಷ್ಟು ಗಲಾಟೆಯಾಗಿದೆಯೆನ್ನುವುದು ಸನ್ಮಾನ್ಯ ಕೃಷಿ ಸಚಿವರಿಗೆ ಗೊತ್ತಿದೆ. ಇದಲ್ಲದೆ, ಹಾವೇರಿ ಗೋಲಿಬಾರ್ ಬಗ್ಗೆ ಇಂದು ಬೆಳಿಗ್ಗೆ ಸನ್ಮಾನ್ಯ ಹಿರಿಯ ಸದಸ್ಯರಾದ ಬಿ.ಸಿ.ಪಾಟೀಲ್‌ರವರು ಸದನದ ಗಮನಕ್ಕೆ ತಂದಿದ್ದಾರೆ. ನಮ್ಮ ಹಾವೇರಿ ಶಾಸಕರೂ ಸಹ ಇದರ ಬಗ್ಗೆ ಹೇಳಿದ್ದಾರೆ. Electronic media ದವರು ಪೂರ್ಣವಾಗಿ ಏನು ಚಿತ್ರೀಕರಣ ಮಾಡಿದ್ದಾರೆ ಅದನ್ನೆಲ್ಲ ತರಿಸಿ enquiry ಮಾಡಿ ಎಂದು ಬಿ.ಸಿ. ಪಾಟೀಲ್‌ರವರು ಹೇಳಿರುವುದು. ವಿರೋಧ

ಪಕ್ಷದ ಸದಸ್ಯರು ಹೇಳುವುದು ತಪ್ಪಾಗುತ್ತದೆ. ಟಿವಿ9 ಇರಬಹುದು, ಉದಯ ಟಿವಿ, ಈಟಿವಿ ಇರಬಹುದು, ಎಲ್ಲ ಚಿತ್ರೀಕರಣವನ್ನು ತೋರಿಸಿದ್ದಾರೆ. ಏಕೆಂದರೆ, ನಮ್ಮ ಶಾಸಕರು ಹೇಳಿದ ಮೇಲೆ ಪಾಪ ಅವರಿಗೆ ಗೌರವ ಕೊಡಬೇಕಾಗುತ್ತದೆ. 2 ಬಾರಿ ಗೆದ್ದು ಈ ಸದನಕ್ಕೆ ಬಂದಿರುವ ಹಿರಿಯ ಶಾಸಕರವರು. ಅವರು ಹೇಳಿದ ಹಾಗೆ ಯಾವುದೇ ಕಾರಣದಿಂದ ವಿರೋಧ ಪಕ್ಷದವರಾದ ನಾವಂತೂ ಅದಕ್ಕೆ ಚಕಾರವೆತ್ತಲ್ಲ. ಅಷ್ಟೂ Video Cassette ಅನ್ನು ನ್ಯಾಯಾಂಗ ತನಿಖೆಯೊಳಗೆ ಪೂರ್ತಿ ಎಲ್ಲ ಸೀಜ್ ಮಾಡಬೇಕು. ಏಕೆಂದರೆ, ಬಿ.ಸಿ. ಪಾಟೀಲ್‌ರವರು ಫೋಟೋವನ್ನು ಸೆಪರೇಟ್ ಆಗಿ ಏನಾದರೂ ಮಾಡಿಸಿಕೊಂಡು ಬಂದಿದ್ದಾರೆಂದು ಹೇಳಿದರೂ ಹೇಳಬಹುದು. ಅದಾಗುವುದು ಬೇಡ. ಏಕೆಂದರೆ, ಹೊಡೆಯುತ್ತಿರುವುದನ್ನು ಕೆಲವು ಪತ್ರಿಕೆಗಳಲ್ಲಿ ನೀವೇ ನೋಡಿದ್ದೀರಿ. ಯಾವ ರೀತಿಯಲ್ಲಿ ಹೊಡಯುತ್ತಿದ್ದಾರೆನ್ನುವುದನ್ನು ಎಲ್ಲ ತೋರಿಸಿದ್ದಾರೆ. ಏಕೆಂದರೆ, ಬಿ.ಸಿ.ಪಾಟೀಲರು ಚಿತ್ರೀಕರಣ ತೋರಿಸಿದರು, ಅವರು ಬೇಕೆಂದು ದುರುದ್ದೇಶದಿಂದ ಮಾಡಿದರೆನ್ನುವುದು ಬರುವುದು ಬೇಡ. ಇದು ಒಂದು ಭಾಗ. ಅಂದು ಬೆಳಿಗ್ಗೆ 10 ಗಂಟೆಗೆ ಯಾರು ಮೆರವಣಿಗೆಯ ನೇತೃತ್ವವನ್ನು ವಹಿಸಿದ್ದರು? ಗೋಲಿಬಾರ್ ಎಷ್ಟು ಹೊತ್ತಿಗಾಯಿತು? ಆ ನೇತೃತ್ವ ವಹಿಸಿ ಸಿದ್ದಪ್ಪ ಸರ್ಕಲ್‌ಗೆ ಬಂದಾಗ ಯಾವ ವಿಷಯವಾಗಿ ಅಂದು ನಡೆದಿದ್ದು? 10ನೇ ತಾರೀಖು ಹಾವೇರಿಯಲ್ಲಿ ಮಾನ್ಯ ಶಾಸಕರೇ ನಾನೇ ಮೆರವಣಿಗೆಯ ನೇತೃತ್ವ ವಹಿಸಿದ್ದೇ ಎಂದು ಅವರೇ ಸದನದ ಮುಂದೆ ಒಪ್ಪಿಕೊಂಡಿದ್ದಾರೆ. ಸುಮಾರು 10 ಗಂಟೆಗೆ ಸಿದ್ದಪ್ಪ ಸರ್ಕಲ್‌ಗೆ ಬಂದಂಥ ಸಂದರ್ಭದಲ್ಲಿ ಅಲ್ಲಿ ಆ ಕಡೆ ಗೊಬ್ಬರದ ಸಲುವಾಗಿ ಜನ ಕ್ಯೂ ನಿಂತಿದ್ದರು. ಆ ಗೊಬ್ಬರಕ್ಕೆ ಕ್ಯೂ ನಿಂತಿದ್ದವರಾರು? ಪೆಟ್ರೋಲ್ ಬಗ್ಗೆ ಕೇಳುತ್ತಿದ್ದೀರಲ್ಲ, ನಮ್ಮ ರೈತರು ಇವತ್ತು ಗೊಬ್ಬರದ ವಿತರಣೆಗೆ ಚಕಾರವೆತ್ತುತ್ತಿಲ್ಲ ಎಂದು ಶಾಸಕರು ಕೇಳಿದಾಗ ಅದರಲ್ಲಿ ಏನು ಘಟನೆಯಾಗಿದೆ ಎನ್ನುವುದನ್ನು ನಾನಲ್ಲ ಸ್ಥಳೀಯವಾಗಿ ಅಲ್ಲಿ ಏನು ನಡೆದಿದೆ ಎನ್ನುವುದನ್ನು ಸದನಕ್ಕೆ ತರಿಸಿಕೊಳ್ಳಬೇಕು. ಪೊಲೀಸ್ ಇಲಾಖೆ ಇದೆ, ಗುಪ್ತಚರ ದಳ ಇದೆ, ಎಲ್ಲಾ ಕಡೆಯಿಂದ ನೀವು ಮಾಹಿತಿ ತರಿಸಿಕೊಳ್ಳಬೇಕು. ಆದರೆ, ಹಾವೇರಿಯಲ್ಲಿ ಏನು ಗೊಬ್ಬರ ವಿತರಣೆ ಮಾಡುತ್ತಿದ್ದಾರೆ ಅದರಲ್ಲಿ ಯಾರಿದ್ದಾರೆ? ಯಾರ್ಯಾರು ವಿತರಣೆಕಾರರು ಇದ್ದಾರೆ, ಯಾರ್ಯಾರಿಗೆ ಆ ಗೊಬ್ಬರವನ್ನು ವಿತರಣೆ ಮಾಡುವುದಕ್ಕೆ ಎಷ್ಟೆಷ್ಟು ವಿತರಣೆಕಾರರಿಗೆ ಕೊಟ್ಟಿದ್ದಾರೆ, ಅವರು ಯಾರು? ಅವರೇನು ಖಾಸಗಿಯವರೋ ಸೊಸೈಟಿ ಕಡೆಯಿಂದ ಕೊಟ್ಟಿದ್ದಾರೋ? ಈ ಬಗ್ಗೆ ಮಾಹಿತಿಯನ್ನು ಉತ್ತರ ಕೊಡುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು

ಕೊಡಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಕಳೆದ ಆರು ತಿಂಗಳಲ್ಲಿ ರಾಜ್ಯಕ್ಕೆ ಎಷ್ಟು ಗೊಬ್ಬರ ಬಂತು? ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಗೊಬ್ಬರ ಕೊಟ್ಟಿದ್ದೀರಿ? ಗೊಬ್ಬರವನ್ನು VSSN ಮೂಲಕ ಕೊಟ್ಟಿದ್ದೀರೋ? ಸಹಕಾರಿ ಸಂಸ್ಥೆಯ ಕಡೆಯಿಂದ ಕೊಟ್ಟಿದ್ದೀರೋ? ಖಾಸಗಿಯವರ ಕಡೆಯಿಂದ ಕೊಡುತ್ತಿದ್ದೀರೋ? ಖಾಸಗಿಯವರಿಂದ ಕೊಡುವಂಥ ಸಂದರ್ಭದಲ್ಲಿ ಕಳ್ಳ ಮಾರಾಟ ಏನಾದರೂ ಆಗುತ್ತದೆಯೋ? ಇದರ ಬಗ್ಗೆ ಏನು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರ ಗೊಬ್ಬರ ಕೊಡಿಸಲಿಲ್ಲ, ಒಂದು ಕಡೆ ಸಾಕಷ್ಟು ಗೊಬ್ಬರ ಇದೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳೇ ಹೇಳುತ್ತಾರೆ, ಇನ್ನೊಂದು ಕಡೆ ಗೊಬ್ಬರ ಇಲ್ಲ ಎನ್ನುವ ಮಾತನ್ನು ಕೂಡ ಹೇಳುತ್ತಾರೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಹೇಳುವಂಥದ್ದು. ಏಕೆಂದರೆ, ಒಂದು ಕಡೆ ಪೋಸ್ಟ್‌ಮಾಸ್ಟರ್ ಕೆಲಸ, ಇನ್ನೊಂದು ಕಡೆ ಸನ್ಮಾನ್ಯ ಮುಖ್ಯಮಂತ್ರಿಗಳೇ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಹೇಳಿದ್ದಾರೆ. ರಾಜ್ಯಕ್ಕೆ ಅಗತ್ಯ ಪ್ರಮಾಣದ ರಸ ಗೊಬ್ಬರ ಪೂರೈಸದಿದ್ದರೆ ಕೇಂದ್ರ ಸರ್ಕಾರದ ವಿರುದ್ಧ ಬೀದಿಗಿಳಿದು ಹೋರಾಟ ಮಾರಾಟ ಮಾಡುವುದಾಗಿ ಮುಖ್ಯಮಂತ್ರಿಯಾದ ಯಡಿಯೂರಪ್ಪನವರು ಗುಡುಗಿದರು ಎಂದು ಬಂದಿದೆ. ಅಂದರೆ ನಾನೇ ಬೀದಿಗೆ ಇಳಿಯುತ್ತೇನೆಂದು ಹೇಳಿದ್ದಾರೆ. ಇವತ್ತು ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ, ಈ ರಾಜ್ಯದಲ್ಲಿ ಈ ಸರ್ಕಾರ ಬಂದು ಕೇವಲ 23 ದಿವಸಗಳಾಗಿವೆ. 23 ದಿವಸಗಳಲ್ಲಿ ಎಷ್ಟು ಘಟನೆಗಳಾಗಿವೆ? ವಿರೋಧ ಪಕ್ಷದವರು ಗೊಬ್ಬರದಲ್ಲಿ ರಾಜಕೀಯ ಮಾಡುತ್ತಿದ್ದಾರೆ, ನಾವು ಹಾಸನದಲ್ಲಿ ಇಂಥ ಕೆಲಸ ಮಾಡಿದ್ದೇವೆಯೆ? ಎಲ್ಲಿ ಬಿಜೆಪಿಗೆ ಇವತ್ತು ಜನ ಮತ ಕೊಟ್ಟಿದ್ದಾರೆ ಅಲ್ಲಿ ಗಲಾಟೆಯಾಗುತ್ತಿರುವುದು, ಎನಾದರೂ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಮತ ಕೊಟ್ಟಿರುವಂಥ ಕಡೆ ಗಲಾಟೆಯಾಗುತ್ತಿಲ್ಲ. ನನ್ನನ್ನು ಮತ್ತು ಬಿ.ಸಿ.ಪಾಟೀಲ್‌ರನ್ನು ಸೇರಿಸಿಕೊಂಡು ತನಿಖೆ ಮಾಡಿ ಎಂದು ಆ ಭಾಗದ ಶಾಸಕರೆ ಹೇಳಿದರು. ಹಾಗಾದರೆ ತನಿಖೆ ಮಾಡಿ ಸದನದಲ್ಲಿ ಹೇಳಲಿ. ಬಿಸಿ ಪಾಟೀಲ್‌ರನ್ನು ಸೇರಿಸಿಕೊಳ್ಳಲಿ ಮತ್ತು ಹಾವೇರಿ ಶಾಸಕರನ್ನು ಸೇರಿಸಿಕೊಳ್ಳಲಿ, ಇಬ್ಬರನ್ನು ಸೇರಿಸಿ ನ್ಯಾಯಾಂಗ ತನಿಖೆಗೆ ಆದೇಶ ಮಾಡಿರಿ. ಏಕೆ ಅವರ ಮೇಲೆ ಗೂಬೆ ಕೂರಿಸಬೇಕೆಂದು ಹೇಳುವುದು. ಅವರು ಪಾಪ ಎರಡನೇ ಸಲ ಶಾಸಕರಾಗಿದ್ದಾರೆ. ಗೂಬೆ ಕೂರಿಸಬೇಕೆನ್ನುವುದನ್ನು ಬಿ.ಸಿ ಪಾಟೀಲ್‌ರವರು ಮಾಡುತ್ತಾರೆನ್ನುವುದು ಬರುವುದು ಬೇಡ. ಎರಡನ್ನು ಸೇರಿಸಿ ತನಿಖೆಯಯನ್ನು ಮಾಡಲಿ. ನಮ್ಮದೇನೂ ಅಭ್ಯಂತರವಿಲ್ಲ. ಅದಕ್ಕೆ ನಾವು ರೆಡಿ ಇದ್ದೇವೆ. ಏಕೆಂದರೆ, ಆ ದಿವಸ ಘಟನೆ ಏನು ಆಯಿತು, 10 ಗಂಟೆಗೆ

ಕೇಂದ್ರ ಸರ್ಕಾರದ ವಿರುದ್ಧ ಪೆಟ್ರೋಲಿಯಂ ಬಗ್ಗೆ ಮೆರವಣಿಗೆ ಬಂದರು. 12 ಗಂಟೆಗೆ ಗೋಲಿಬಾರ್ ಆಯಿತು. ಗೋಲಿಬಾರ್ 12 ಅಥವಾ 12-15ಕ್ಕೆ ಆಗಿರಬಹುದು. ಹಾಗಾದರೆ ಎಷ್ಟು ಹೊತ್ತಿಗೆ ಆಗಿರಬಹುದು ಸ್ವಾಮಿ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರೇವಣ್ಣನವರ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಘಟನೆ ನಡೆದಿದ್ದು 3-45ರ ನಂತರ. ಹೀಗಿರುವಾಗ ನ್ಯಾಯಾಂಗ ತನಿಖೆಯಾಗಬೇಕಾಗಿದೆ. ಇದು ಆಗಬೇಕಾದಾಗ ಏನೇನು ಘಟನೆ ನಡೆದಿದೆ ಅದು ಎಲ್ಲಾ ಸಂಪೂರ್ಣವಾಗಿ ವಿವರವಾಗಿ ಚರ್ಚೆಯಾಗುತ್ತದೆ. ಇಲ್ಲಿ ವೈಯಕ್ತಿಕವಾಗಿ ಯಾರ ಮೇಲೆ ಆರೋಪ ಮಾಡುವುದು ಚೆನ್ನಾಗಿರುವುದಿಲ್ಲ. ಇವರು ಕ್ಷೇತ್ರ ಬದಲಾಯಿಸಿದರೂ ಶಾಸಕರಾಗಿ ಆಯ್ಕೆಯಾಗಿದ್ದಾರೆ, ಅವರು ಪಕ್ಷ ಬದಲಿಸಿದರೂ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇಬ್ಬರನ್ನು ಸೇರಿಸಿ ಮಾಡಬೇಕೆನ್ನುವ ಬೇಡಿಕೆಯನ್ನು ಮಾನ್ಯ ರೇವಣ್ಣನವರು ಇಡುತ್ತಿದ್ದಾರೆ. ನ್ಯಾಯಾಂಗ ತನಿಖೆಗೆ ನಾವು ಕೊಟ್ಟಿರುವಾಗ, ಅಲ್ಲಿಂದ ಸತ್ಯ ಹೊರಗೆ ಬರುತ್ತದೆ ವಿನಃ ವೈಯಕ್ತಿಕವಾಗಿ ನಾವು ಇಲ್ಲಿ ಮಾತನಾಡುವುದು ಬೇಡ. ಹೆಸರುಗಳನ್ನು ಹೇಳುವುದು ಎಷ್ಟರ ಮಟ್ಟಿಗೆ ಸಮಂಜಸವೆಂದು ದಯವಿಟ್ಟು ಗಮನಿಸಬೇಕಾಗಿದೆ. ನಾವು ಇದ್ದಾಗ 1-45ರವರೆಗೆ ಸಭೆಯಲ್ಲಿ ಎಲ್ಲಾ ವಿಷಯದ ಬಗ್ಗೆ ಚರ್ಚೆಯಾಯಿತು. ರೈತರ ಜೊತೆಗೆ ಚರ್ಚೆಯಾದ ಮೇಲೆ ನಾನು ಅಲ್ಲಿಂದ ಹೋಗಿದ್ದೇನೆ. ನಾನಿದ್ದರೂ ಘಟನೆಯಾಗಿದೆ ಎಂದು ಪತ್ರಿಕೆಯಲ್ಲಿ ಬರೆದಿದ್ದಾರೆ. ನಾನು ಇದ್ದಾಗ ಘಟನೆಯಾಗಿದೆ ಎಂದು ಪತ್ರಿಕೆಯಲ್ಲಿ ಬರೆದಿದ್ದಾರೆ, ನಾನು ಇದ್ದಾಗ ಘಟನೆಯಾಗಿಲ್ಲ. ಇವೆಲ್ಲವೂ ಗೊತ್ತಿದ್ದರೂ ಸಹಿತ ಪತ್ರಿಕೆಯಲ್ಲಿ ಬರೆದಿರುವ ಎಲ್ಲರನ್ನೂ ಸಹಿತ ಸಂಪೂರ್ಣ ಸತ್ಯವೆಂದು ನಾವು ತಿಳಿದುಕೊಂಡು ಮಾತನಾಡುವುದು ಎಷ್ಟರ ಮಟ್ಟಿಗೆ ಸಮಂಜಸ ಎಂದು ಇಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ವೈಯಕ್ತಿಕವಾಗಿ ವ್ಯಕ್ತಿಗತವಾಗಿ ಆರೋಪ ಪ್ರತ್ಯಾರೋಪ ಮಾಡುವುದು ಸಮಂಜಸವಾಗುವುದಿಲ್ಲ. ನ್ಯಾಯಾಧೀಶರನ್ನು ನಾವು ನೇಮಿಸಿದ್ದೇವೆ. ಅವರಿಂದ ವಿಚಾರಣೆಯಾದ ಮೇಲೆ ಸತ್ಯ ಹೊರಗೆ ಬರುತ್ತದೆ. ಇದರಲ್ಲಿ ಯಾರು ಇದ್ದಾರೆ, ಆರೋಪಿಗಳು ಯಾರು? ಇದಕ್ಕೆ ಯಾರು ಕಾರಣ? ಅದೆಲ್ಲಾ ಬಯಲಿಗೆ ಬರುತ್ತದೆ ಎಂದು ಅತ್ಯಂತ ವಿನಯಪೂರ್ವಕವಾಗಿ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಉದಾಸಿಯವರು ಹಿರಿಯ ಸದಸ್ಯರು. ತನಿಖೆ

ಮಾಡಿ ಎಂದು ನಾನು ಕೇಳುತ್ತಿಲ್ಲ. ನಮ್ಮ ಹಾವೇರಿ ಶಾಸಕರೇ ಈ ತನಿಖೆಗೆ ಸೇರಿಸಿ ಎಂದು ಕೇಳುತ್ತಿದ್ದಾರೆ. ನಾನು ವೈಯಕ್ತಿಕವಾಗಿ ಅವರನ್ನು ಗುರಿ ಮಾಡಿ ಹೇಳುತ್ತಿಲ್ಲ. ಮಾನ್ಯ ಉದಾಸಿಯವರು ತಾವು ಮೊದಲು ಇರಲಿಲ್ಲ. ಅರ್ಧಗಂಟೆಗಳ ಕಾಲ ಅವರು ಈಗ ಮಾತನಾಡಿದರು ಮಾನ್ಯ ಸಭಾಧ್ಯಕ್ಷರು ಕುಳಿತುಕೊಳ್ಳಿ ಎಂದರೂ ಅವರು ಕೇಳಲಿಲ್ಲ. ತನಿಖೆಗೆ ನನ್ನನ್ನು ಸೇರಿಸಬೇಕು ಎಂದು ಹೇಳಿದರು. ನಾನು ಹೇಳಲಿಲ್ಲ.

ಶ್ರೀ ನೆಹರೂ ಓಲೇಕಾರ್ ಚೆನ್ನಬಸಪ್ಪ: ತನಿಖೆ ಮಾಡಿ ಎಂದು ಹೇಳಿದೆ ತನಿಖೆಗೆ ಸೇರಿಸಿ ಎಂದು ಹೆಳಿಲ್ಲ. ಈಗ ನೀವು ಮಾತನಾಡುತ್ತಿದ್ದೀರಿ ಎಂದರೆ ನಿಮ್ಮನ್ನು ಸೇರಿಸಿ ಎಂದರ್ಥವಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ನನ್ನನ್ನು ಸೇರಿಸಿ ಎಂದು ಅವರು ಹೇಳುತ್ತಿರುವುದರಿಂದ ನಾನು ಬೇಡ ಎಂದು ಏಕೆ ಹೇಳಲಿ? ಮಾನ್ಯ ಸದಸ್ಯರು ಹೇಳಿದ್ದಾರೆ ಬೇಕಾದರೆ ಕಡತದಲ್ಲಿ ಇದೆ ತೆಗೆಸಿ ನೋಡಿ.

ಶ್ರೀ ನೆಹರೂ ಓಲೇಕಾರ್ ಚೆನ್ನಬಸಪ್ಪ: ಮಾತನಾಡಿದವರೆಲ್ಲರನ್ನೂ ತನಿಖೆಗೆ ಸೇರಿಸಿ ಎಂದರ್ಥವಲ್ಲ, ಹಾಗಾದರೆ ನೀವು ಈಗ ಮಾತನಾಡಿದರೆ ನಿಮ್ಮನ್ನು ಸೇರಿಸಿ ಎಂದರ್ಥವಲ್ಲ.

ಶ್ರೀ ಸಿ.ಎಂ. ಉದಾಸಿ: ತನಿಖೆಗೊಳಗಾಗಬೇಕಾದ ವ್ಯಕ್ತಿಗಳಿದ್ದರೆ ಯಾರನ್ನು ಕೈ ಬಿಡುವುದಕ್ಕೆ ಬರುವುದಿಲ್ಲ. ಅದನ್ನು ಮಾಡೇ ಮಾಡುತ್ತಾರೆ. ಹೀಗಾಗಿ ನಾವೇ ಮೊದಲು ತೀರ್ಮಾನ ತೆಗೆದುಕೊಳ್ಳುವುದು ಬೇಡ.

ಶ್ರೀ ಹೆಚ್.ಡಿ. ರೇವಣ್ಣ: ಸ್ವಲ್ಪ ತಾಳ್ಮೆಯಿಂದ ಇದ್ದರೆ ನಾನು ಹೇಳುತ್ತೇನೆ. ಅವರು ಕೇಳುತ್ತಿರುವುದು ನಾವು ಕೇಳುತ್ತಿಲ್ಲ. ಬಿ.ಸಿ. ಪಾಟೀಲ್‌ರವರು ಸುಳ್ಳು ಫೋಟೋ ತಂದಿದ್ದಾರೆ. ಎಲೆಕ್ಟ್ರಾನಿಕ್ ಮೀಡಿಯಾದಲ್ಲಿದೆ. ತಾವು ಬೇಕಾದರೆ ಆ ಕಡತ ತರಿಸಿ ಸನ್ಮಾನ್ಯ ಸಭಾಧ್ಯಕ್ಷರು ಸಭೆಯ ಗಮನಕ್ಕೆ ತರಲಿ. ಅವರು ಹೇಳುವುದು ಎಲೆಕ್ಟ್ರಾನಿಕ್ ಮೀಡಿಯಾದಲ್ಲಿದೆ, ಅದರಲ್ಲಿ ಎಲ್ಲಾ ಸತ್ಯವಿದೆ, ನಾನೇನು ಸಪರೇಟಾಗಿ ಹೇಳುತ್ತಿಲ್ಲ.. ಎರಡು ನಿಮಿಷ, ದಯಮಾಡಿ ತಾವು ಕುಳಿತುಕೊಳ್ಳಿ. ನೀವು ವಕಾಲತ್ತು ಹಾಕಬೇಡಿ.

ಶ್ರೀ ಸಿ.ಎಂ. ಉದಾಸಿ: ಇದೆಲ್ಲಾ ನ್ಯಾಯಾಧೀಶರ ವ್ಯಾಪ್ತಿಯಲ್ಲಿ ಬಂದೇ ಬರುತ್ತದೆ, ನಂತರ ಸತ್ಯ ಹೊರಗೆ ಬರುತ್ತದೆ ಎನ್ನುವ ದೃಷ್ಟಿಯಿಂದಲೇ ನಾನು ಹೇಳುತ್ತಿರುವುದು.

ಮೀಡಿಯಾದವರು ಮಾಡಿರುವಂಥ ವೀಡಿಯೋ ಆಗಿರಲಿ, ಪೋಲಿಸ್ ಡಿಪಾರ್ಟ್‌ಮೆಂಟ್‌ನವರು ಮಾಡಿರುವಂಥ ವೀಡಿಯೋ ರೆಕಾರ್ಡ್ ಆಗಿರಲಿ, ಎಲ್ಲವೂ ಚರ್ಚೆಯಾಗಲಿ, ಈ ಎಲ್ಲ ವಿಚಾರಣೆ ಮಾಡುವ ಅಧಿಕಾರಿಗಳ ವ್ಯಾಪ್ತಿಯಲ್ಲಿ ಬರುತ್ತದೆ. ಅದು ಬಂದ ಮೇಲೆ ತೀರ್ಮಾನವಾಗುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಹೆಚ್.ಡಿ. ರೇವಣ್ಣ: ತನಿಖೆ ಬೇಡ ಎನ್ನುವುದು ಮಾನ್ಯ ಉದಾಸಿ ಸಾಹೇಬರದ್ದು ಇದ್ದರೆ ಅದನ್ನು ಬೇಡ, ಏಕೆಂದರೆ...

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ತನಿಖೆ ಮಾಡಿ ಎಂದು ಹೇಳಿರುವುದು ಬೇಡವೆಂದು ಎಲ್ಲಿ ಹೇಳಿರುವುದಿಲ್ಲ. ತಾವು ಬೇಕಾದರೆ ಬೇಡವೆಂದು ಹೇಳಿ...

ಶ್ರೀ ಹೆಚ್.ಡಿ. ರೇವಣ್ಣ: ಹಾಸನದಲ್ಲಿ ಗೋಲಿಬಾರ್ ಮಾಡಿಸಿದಿರಿ ಏನಕ್ಕೆ... (ಗೊಂದಲ)

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ನ್ಯಾಯಸಮ್ಮತವಾಗಿ ತನಿಖೆಯಾಗಲಿ ಎಂದು ನಾವು ಹೇಳಿರುವುದು. ಬೇಡವೆಂದು ಹೇಳಿಲ್ಲವಲ್ಲ. ನೀವು ಬೇಕಾದರೆ ಹೇಳಿ.

(ಇ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್.ಡಿ. ರೇವಣ್ಣ: ಅವರು ಮಾತನಾಡುವಾಗ ನಾವು ಸುಮ್ಮನೆ ಕುಳಿತಿದ್ದೆವು ಸ್ವಾಮಿ. ಅವರು ಹೇಳಿದ್ದೆಲ್ಲವನ್ನು ಕೇಳಿದ್ದೇವೆ. ಅವರು ತನಿಖೆ ಮಾಡಿ ಎಂದು ಹೇಳಿದ್ದಾರೆ. ಮಾಡುವುದಾದರೆ ಮಾಡಿ, ಒಬ್ಬ ಆಡಳಿತ ಪಕ್ಷದ ಸದಸ್ಯ ಹೇಳುವಾಗ ಏಕೆ ಹಿಂಜರಿಯುತ್ತೀರಿ. ಉದಾಸಿ ಸಾಹೇಬರು ಏಕೆ ಅಂಜುತ್ತಿದ್ದಾರೆ? ಏಕೆಂದರೆ ಒಬ್ಬ ಆಡಳಿತ ಪಕ್ಷದ ಸದಸ್ಯರು, ಆ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವಂಥ ಒಬ್ಬ ಶಾಸಕರು, ಹೇಳುವಾಗ ಏಕೆ ಉದಾಸಿ ಸಾಹೇಬರು ಹಿಂಜರಿಯುತ್ತಾರೆ. ಇದು ನನಗೆ ಗೊತ್ತಿಲ್ಲ.

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ರೀ ಸ್ವಾಮಿ ಅವರು ತನಿಖೆಯಾಗಲಿ ಎಂದು ಹೇಳಿದರು. ನಾವೂ ತನಿಖೆಯಾಗಲಿ ಎಂದು ಹೇಳಿರುವುದು. ಹೊಸ ಸೃಷ್ಟಿ ಏನು ಎನ್ನುವುದು ನಿಮ್ಮದು ಸ್ಪಷ್ಟವಾಗಿ ಹೇಳಿ. ಬೇಕಾದರೆ ನೀವು ಬೇಡವೆಂದು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಒಂದು ನಿಮಿಷ ಆಯಿತು ಬಿಡಿ. 12.05 ನಿಮಿಷಕ್ಕೆ ಕೆಲವೊಬ್ಬರು ಹೇಳುತ್ತಾರೆ. 3.30 ಗಂಟೆಗೆ ಎಂದು ಮಾನ್ಯ ಉದಾಸಿ ಸಾಹೇಬರು

ಹೇಳುತ್ತಾರೆ. 1.45ಕ್ಕೆ ಬಿಟ್ಟಿದ್ದೇನೆ. ಅಲ್ಲಿಂದ ಎಂದು ಮಾನ್ಯ ಉದಾಸಿ ಸಾಹೇಬರು ಹೇಳುತ್ತಾರೆ. ತಾವು ಈಗ ಹೇಳಿದಿರಲ್ಲಾ ಸರ್. ಒಂದೆರಡು ನಿಮಿಷ ದಯಮಾಡಿ ತಡೆಯಿರಿ. 1.45 ಕ್ಕೆ ತಾವು ಬಿಟ್ಟಿರಿ, 3.30 ಕ್ಕೆ ಗೋಲಿಬಾರ್ ಆಯಿತು. ಈಗ ರಾಜ್ಯದಲ್ಲಿ 6.30 ಮತ್ತು 7.30 ರ ನ್ಯೂಸ್‌ನಲ್ಲಿ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು ಏನು ಹೇಳಿದರೆ ಮಾನ್ಯ ನಮ್ಮ ಬಿ.ಸಿ. ಪಾಟೀಲ್ ಸಾಹೇಬರು ಹೇಳಿದರಲ್ಲಾ ನಮ್ಮ ರಾಜ್ಯ ಪೊಲೀಸ್ ಹಿರಿಯ ಅಧಿಕಾರಿಗಳು ಗೋಲಿಬಾರ್‌ನಲ್ಲಿ ಮೃತಪಟ್ಟಿರುವ ಬಗ್ಗೆ ಇನ್ನು ರುಜುವಾತು ಪಡಿಸುವುದಕ್ಕೆ ಆಗಿಲ್ಲವೆಂದು ಹೇಳಿ. 6.00 ಗಂಟೆಯಾದರು ಹೇಳುವುದಕ್ಕೆ ಆಗಿಲ್ಲವಲ್ಲ, ಜಿಲ್ಲಾ ಮಂತ್ರಿಗಳಿಗೆ ಈ ವಿಷಯ ಗೊತ್ತಾಗದೇ ಹೋದರೆ ಏನು ಈ ಸರ್ಕಾರ ಸತ್ತು ಹೋಗಿದೆಯೋ, ಇದೆಯೋ ಗೊತ್ತಾಗಲಿಲ್ಲವಲ್ಲಾ. ಏಕೆಂದರೆ 3.30 ಗಂಟೆಗೆ ಘಟನೆ ನಡೆದಿದೆ ಎಂದ ಮೇಲೆ ಸಾಯಂಕಾಲ 7.00 ಗಂಟೆಯಲ್ಲಿ ನಿಮ್ಮ ADGP ಯವರು ಈ ರೀತಿ statement ಮಾಡುತ್ತಾರೆಂದ ಮೇಲೆ ಈ ರಾಜ್ಯದಲ್ಲಿ ಸರ್ಕಾರ ಏನಾಗಿದೆ. ತಾವು ಬೇಕಾದರೆ ಒಪ್ಪಿಕೊಂಡು ಬಿಡಿ. ತಾವು ಒಬ್ಬ ಜಿಲ್ಲಾ ಮಂತ್ರಿಗಳು, ಜವಾಬ್ದಾರಿಯುತವಾದವರು, ಬೇರೆಯವರು ಅಲ್ಲ. ಜಿಲ್ಲಾ ಮಂತ್ರಿಗಳು ತಾವು ವಿಮಾನದಲ್ಲಿ ಬಂದಿರಿ, ಸಾಯಂಕಾಲ 5.00 ಗಂಟೆಯಲ್ಲಿ ನೀವು ಪ್ರೆಸ್‌ನಲ್ಲಿ ಪತ್ರಿಕೆಯವರ ಮುಂದೆ ಹೇಳಿದಿರಿ. ಅವರು 7.00 ಗಂಟೆಯಲ್ಲಿ ಇಲ್ಲವೆಂದು ಹೇಳಿದ ಮೇಲೆ ಅವರನ್ನು ನೀವು ಸಸ್ಪೆಂಡ್ ಮಾಡಿ. ನೀವು ಈ ತರಹ ಹೇಳುವುದಕ್ಕೆ ಹೋಗಬಾರದು. ಏಕೆಂದರೆ, ಆಡಳಿತದಲ್ಲಿ ಒಂದು ಕಡೆ DGP ಯವರು ಹೇಳುತ್ತಾರೆ. ಪ್ರಾಣ ರಕ್ಷಣೆಗೋಸ್ಕರ ಗುಂಡು ಹಾರಿಸಿದರು ಎಂದು. ಎನ್ನೊಂದು ಸಾರಿ ಅಲ್ಲಿ ಎಸ್.ಪಿ.ಯವರು ಏನು ಹೇಳುತ್ತಾರೆ. ಗೊತ್ತೆ? ಸ್ವಲ್ಪ ದಯಮಾಡಿ ಹೇಳುತ್ತೇನೆ. ತಾಳ್ಮೆಯಿಂದ ಇರಬೇಕು ನೀವು ಜಿಲ್ಲಾ ಮಂತ್ರಿಗಳು ಇಲ್ಲದಿದ್ದರೆ ನಾನು ಕುಳಿತುಕೊಂಡು ಬಿಡುತ್ತೇನೆ. ಎಸ್.ಪಿ.ಯವರು ಏನು ಹೇಳುತ್ತಾರೆ. ನನ್ನ ರಕ್ಷಣೆಗೋಸ್ಕರ ಯಾರೋ ಗುಂಡು ಹಾರಿಸಿದರು. ಎಂದು ಹೇಳುತ್ತಾರೆ. DGP ಸಾಹೇಬರು ಏನು ಹೇಳುತ್ತಾರೆ. ಪ್ರಾಣರಕ್ಷಣೆಗೋಸ್ಕರ ಗುಂಡು ಹಾರಿಸಿದ್ದಾರೆಂದು ಹೇಳುತ್ತಾರೆ. ನಾವು DGP ಯವರನ್ನು ನಂಬಲೇಬೇಕ್ರೀ SP ಯವರನ್ನು ನಂಬಲೇಬೇಕೇ ಯಾರನ್ನು ನಂಬಬೇಕು ಹೇಳಿ. ಮಾನ್ಯ ಮಂತ್ರಿಗಳು 3.15 ಕ್ಕೆ ಎಂದು ಹೇಳುತ್ತಾರೆ. ಈಗ ಒಬ್ಬೊಬ್ಬರು ಒಂದೊಂದು ಹೇಳಿಕೆಯನ್ನು ಈ ತರಹ ಕೊಟ್ಟಾಗ ಏನು ಹೇಳಬೇಕಾಗಿರುತ್ತದೆ. ದಯಮಾಡಿ ತಾವು ಈ ಸಭೆಗೆ ಹೇಳಿ. ಇದು ಒಂದು ಭಾಗ, ಉದಾಸಿ ಸಾಹೇಬರು ಹಿರಿಯರು ಇದ್ದಾರೆ. ನಾನು ನಿಮ್ಮ ಬಗ್ಗೆ ಏನು ಹೇಳುವುದಿಲ್ಲ. ನೀವು ದೇವರ ಸಮಾನ ಇದ್ದಂತೆ. ಏಕೆಂದರೆ ಸಿದ್ದಲಿಂಗಪ್ಪನ

ಮಕ್ಕಳಿಗೆ ವಿದ್ಯಾಭ್ಯಾಸ. ನೌಕರಿ ಎಲ್ಲವನ್ನು ಕೊಡಿಸಿದಿರಲ್ಲಾ ಅವರ ಹೆಂಡತಿಗೆ ನೀವೆ ಆದೇಶವನ್ನು ಕೊಟ್ಟು ಬಂದಿರುತ್ತೀರಿ. ಈ ಪುಟ್ಟಪ್ಪನ ಮನೆಯವರಿಗೆ ಏನಾಗಿತ್ತು ಸ್ವಾಮಿ. ಏಕೆಂದರೆ ಅವನು ಬಿ.ಜೆ.ಪಿ.ಯ ಕಾರ್ಯಕರ್ತನಲ್ಲವಾ? ಅವರು ಬಿ.ಜೆ.ಪಿ.ಯ ಪ್ರೆಸಿಡೆಂಟ್ ಅದಕ್ಕೆ ಅವರಿಗೆ ವಿದ್ಯಾಭ್ಯಾಸವನ್ನು ಕೊಟ್ಟಿರುತ್ತೀರಿ. ಏಕೆಂದರೆ ಸಿದ್ದಲಿಂಗಪ್ಪನವರ ಹೆಂಡತಿಗೆ ಕೆಲಸವನ್ನು ಕೊಟ್ಟಿರುತ್ತೀರಿ. ಮಕ್ಕಳಿಗೆ ವಿದ್ಯಾಭ್ಯಾಸ ಕೊಡುತ್ತೀರಿ. ಆದರೆ ಈ ಪುಟ್ಟಪ್ಪನ ಕಡೆ ಮೂರು ದಿವಸವಾದರೂ ಯಾರು ತಿರುಗಿ ನೋಡುವುದಿಲ್ಲವಲ್ಲಾ ಸರ್. ಉದಾಸಿ ಸಾಹೇಬರೆ, ಗೂಟಿದ ಕಾರು ಎಲ್ಲಾ ವ್ಯವಸ್ಥೆ ಇರುವಾಗ ನೀವು ಏನು ಮಾಡುತ್ತಿದ್ದೀರಿ. ನಾನಲ್ಲಾ ಮಾನ್ಯ ಯಡಿಯೂರಪ್ಪ ಸಾಹೇಬರು ಹೇಳಿದ್ದು, ಗೂಟದ ಕಾರು, ವಿಮಾನ ಎಲ್ಲಾ ವ್ಯವಸ್ಥೆ ಇರುವಾಗ ಜಿಲ್ಲಾಮಂತ್ರಿಗಳು ಏನು ಮಾಡುತ್ತಾರೆಂದು ಕೇಳಿದ್ದಾರೆ. ಅದು ಮಾನ್ಯ ಜೆ.ಹೆಚ್. ಪಟೇಲ್‌ರ ಕಾಲದಲ್ಲಿ ನಾನು ಹೇಳುವುದು. ಈ ಪುಟ್ಟಪ್ಪನ ಮನೆಗೆ ಯಾರಾದರೂ ಹೋಗಿದ್ದೀರಾ? ಜಿಲ್ಲಾಧಿಕಾರಿಗಳು ಹೋಗಿದ್ದರಾ? ಪೊಲೀಸ್ ಹಿರಿಯ ಅಧಿಕಾರಿಗಳು ಹೋಗಿದ್ದರಾ? ಪುಟ್ಟಪ್ಪನನ್ನು ಯಾರು ನೋಡಿಲ್ಲಾ. ಅವನ ಮೂರು ಮಕ್ಕಳಿಗೆ ಏನಾದರೂ ಕೊಟ್ಟಿದ್ದೀರಾ?

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ನಾವು ಎರಡು ಮೂರು ಬಾರಿ ಹೋಗಿ ಬಂದಿದ್ದೇವೆ ಸ್ವಾಮಿ. ನಿಮ್ಮಲ್ಲಿ ಮಾಹಿತಿ ಇಲ್ಲವಲ್ಲಾ ಅದಕ್ಕೆ ನಾವು ಮಾಹಿತಿಯನ್ನು ಕೊಟ್ಟೆವು. ಯಾರು ಭೇಟಿ ಕೊಟ್ಟಿಲ್ಲವೆಂದು ಹೇಳಿದರು. ನಾವು ಹಾಗೂ ಜಿಲ್ಲಾ ಮಂತ್ರಿಗಳು ಭೇಟಿ ಕೊಟ್ಟು ಬಂದಿದ್ದೇವೆಂದು ಹೇಳಿದೆವು. ನೀವು ಸುಳ್ಳು ಹೇಳಿದರೆ ನಾವು ಸುಮ್ಮನೆ ಕುಳಿತುಕೊಳ್ಳೋಣವೇ? 3,4 ಬಾರಿ ಹೋಗಿ ಬಂದಿರುವ ಬಗೆ ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತಂದಿರುತ್ತೇವೆ. ಅಧಿಕಾರಿಗಳು ಹೋಗಿದ್ದಾರೆ ಎನ್ನುವಂಥ ಮಾತನ್ನು ಹೇಳಿದೆವು.

ಶ್ರೀ ಹೆಚ್.ಡಿ. ರೇವಣ್ಣ: ನೀವು ಎರಡನೇ ಬಾರಿ ಶಾಸಕರು ಆಗಿರುವುದು. ಮಾನ್ಯ ಉದಾಸಿ ಸಾಹೇಬರು 6ನೇ ಸಲ ಸದಸ್ಯರಾಗಿರುವುದು. ಅವರಿಗೆ ಅಷ್ಟೊಂದು ಹೇಳುವುದಕ್ಕೆ ಏಕೆ ಹೋಗುತ್ತೀರಿ. ಅವರು ಜಿಲ್ಲಾ ಮಂತ್ರಿಗಳು ಅವರಿಗೆ ಉತ್ತರ ಕೊಡುವ ಶಕ್ತಿ ಇದೆ. ದಯಮಾಡಿ ನೀವು interfere ಆಗಬೇಡಿ. ಏಕೆಂದರೆ ಪುಟ್ಟಪ್ಪ ಹಾಸ್ಪಿಟಲ್‌ನಲ್ಲಿ ಇದ್ದಾರೆ. ಕೊನೆಗೆ ಏನು ಮಾಡುತ್ತಾರೆಂದರೆ, ಮಾಜಿ ಪ್ರಧಾನ ಮಂತ್ರಿಗಳಾದ ದೇವೇಗೌಡರು ಟಿ.ವಿ. ನೋಡಿದ ಮೇಲೆ ಪುಟ್ಟಪ್ಪ ಇರುವ ಆಸ್ಪತ್ರೆಗೆ ಹೋಗುತ್ತಾರೆ. ಅವರ ಮನೆಯ ಪರಿಸ್ಥಿತಿ ಎಲ್ಲವನ್ನು ನೋಡಿದ ಮೇಲೆ, ಅದು ಆದ ಮೇಲೆ ಪುಟ್ಟಪ್ಪನನ್ನು ನೋಡುವುದಕ್ಕೆ

ಸಂಜಯಗಾಂಧಿ ಹಾಸ್ಪಿಟಲ್‌ಗೆ ಯಾರು ಹೋಗಿಲ್ಲ. ತಾಳ್ಮೆಯಿಂದ ಅಲ್ಲಿಯವರೆಗೆ ಇದ್ದರೆ ಹೇಳುತ್ತೇನೆ. ಆಮೇಲೆ ಮಾಜಿ ಪ್ರಧಾನ ಮಂತ್ರಿಗಳು ಹೋಗಿ, ಅಲ್ಲಿಂದ ಮಾರನೇ ಬೆಳಗ್ಗೆ ಹುಬ್ಬಳ್ಳಿಯ ಅವರ ಮನೆಗೆ ಹೋಗುತ್ತಾರೆ. ಅಲ್ಲಿ ಹೋಗಿ ದುಡ್ಡು ಕೊಟ್ಟ ಮೇಲೆ, ಮಾರನೇ ದಿವಸ ಮುಖ್ಯಮಂತ್ರಿಗಳು ಮತ್ತು ಉದಾಸಿ ಸಾಹೇಬರು ಅವರ ಮನೆಗೆ ಹೋಗಿದ್ದು. ಪುಟ್ಟಪ್ಪನ ಮನೆಗೆ ಎಷ್ಟು ರೂ.ಗಳನ್ನು ಕೊಟ್ಟರು. ಅವರ ಮಕ್ಕಳಿಗೆ ಏನಾದರೂ ದುಡ್ಡು ಕೊಟ್ಟಿದ್ದಾರಾ? ಅವನು ಹಾಸ್ಪಿಟಲ್‌ನಲ್ಲಿ ಇದ್ದಾನೆ. ಮಾನ್ಯ ದೇವೇಗೌಡರು ಹೋದಾಗ ಕೈ ಮುಗಿದು ಏನು ಮಾಡುತ್ತಾರೆಂದರೆ, ಸ್ವಾಮಿ ನಾನು ಸಾಯುತ್ತಿದ್ದೇನೆ. ಕೊನೆಗೆ ನನ್ನ ಹೆಂಡತಿ ಮಕ್ಕಳನ್ನು ತೋರಿಸಿ ಎಂದಾಗ ಏನು ಮಾಡಿದ್ದಾರೆ ನಿಮ್ಮ ಅಧಿಕಾರಿಗಳು ಎಂದರೆ, ಜನರಲ್ ಕ್ಲಾಸಿನ ಎರಡು ಟಿಕೇಟ್‌ಗಳನ್ನು ನಿಮ್ಮ Second Division Clerk ತೆಗೆದುಕೊಂಡು ಹೋಗಿ ಅವರ ಮನೆಗೆ ಎಸೆದು ಬಂದಿದ್ದಾರೆ. ನಿಜವೇ ಇಲ್ಲವೇ ಎನ್ನುವುದನ್ನು ತಾವು ದಯಮಾಡಿ ಹೇಳಿ. ಟಿಕೇಟ್ ಕೊಟ್ಟು ಅವರ ಹೆಂಡತಿಗೆ ಹೋಗಿ ಎಂದು ಹೇಳಿದ್ದಾರೆ. ಅಧಿಕಾರಿಗಳು ಯಾರಾದರೂ ಹೋಗಿ ಕರೆದುಕೊಂಡು ಬಂದು ಅವರ ಹೆಂಡತಿಗೆ ಗಂಡನನ್ನು ತೋರಿಸಿದ್ದಾರಾ? ನಾನು ಮಾನವೀಯತೆಯ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಹೋಗಲಿ ಅವನು ಈಗ ಉಳಿಯುತ್ತಾನಾ? ಆ ಪರಿಸ್ಥಿತಿ ಇದೆ. ಅದು ತಮಗೆ ಗೊತ್ತಿರುವಂಥ ವಿಷಯ. ಅವರು ಇವತ್ತು ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದಾನೆ. ಅವನ ಮಗನಿಗೆ ಕೆಲಸವನ್ನು ಕೊಡುತ್ತೇವೆಂದು ಹೇಳಿದ್ದೀರಾ? ಮಕ್ಕಳಿಗೆ ವಿಧ್ಯಾಭ್ಯಾಸ ಕೊಡುತ್ತೇವೆಂದು ಏನಾದರೂ ಹೇಳಿದ್ದೀರಾ? ಇದು ಒಂದು ಕಡೆ, ನಾನು ನಿಮ್ಮನ್ನು ಇಷ್ಟೆ ಕೇಳುವುದು. ಏಕೆಂದರೆ ನಾನು ವೈಯಕ್ತಿಕವಾಗಿ ಏನು ಬರೆಸುವುದಿಲ್ಲ. ಗೋಲಿಬಾರ್ ನಡೆದಿದೆ ಮತ್ತು ಇದರಲ್ಲಿ 5-6 ವಿಷಯಗಳು ಇವೆ. ಗೊಬ್ಬರ ಇವತ್ತು ಸರಿಯಾಗಿ ವಿತರಣೆಯಾಗುತ್ತಿದೆಯಾ? ಏನಾದರೂ ಖಾಸಗಿಯವರು ಮಾಡುತ್ತಿದ್ದಾರಾ? ಏಕೆಂದರೆ ಒಂದು ಭಾವನೆ ಇದೆ. ಪತ್ರಿಕೆಯರು ಉದಾಸಿ ಸಾಹೇಬರು ಇದ್ದರೆಂದು ಹೇಳಿದ್ದಾರೆ. ಈ ಪತ್ರಿಕೆಯವರು ಸುಳ್ಳು ಎಂದು ಹೇಳಿ ಬಿಡೋಣ ಬಿಡಿ. ನೀವು ಚುನಾವಣೆಯಲ್ಲಿ ಗೆಲ್ಲುವವರೆಗೆ ಪತ್ರಿಕೆಯವರೆಲ್ಲಾ ನಿಜವಾಗಿದ್ದರು. ಚುನಾವಣೆ ಗೆದ್ದು ಬಂದು 23 ದಿವಸವಾದ ಮೇಲೆ ಪತ್ರಿಕೆಯವರು ಕಳ್ಳರು ಎನ್ನುವ ಪರಿಸ್ಥಿತಿ ಬಂದು ಆಯಿತು. ಏಕೆಂದರೆ ನಾನು ಹೇಳುವುದು ಚುನಾವಣೆ ಕಳೆಯುವವರೆಗೂ ಪತ್ರಿಕೆಯವರು ಒಳ್ಳೆಯವರು. ಉದಾಸಿಯವರ ಮೇಲೆ ಅಥವಾ ಬಿ.ಜೆ.ಪಿ.ಯವರ ಮೇಲೆ ಏನೋ ಸಿಟ್ಟಾಗಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಾವು ಏನಾದರೂ ಬರೆಸಿದ್ದೇವೆಂದರೆ, ಇಲ್ಲಿ

ಯಾರಾದರೂ ಹೇಳಿ ಬರೆಸಿದ್ದಾರೆಂದರೆ ಅದು ಬೇರೆ. ಅದು ಹಾವೇರಿ ಪತ್ರಿಕೆಯಲ್ಲಿ ಬರೆದಿರುವುದು. ಉದಾಸಿಯವರ ಕಡೆಗೆ ಜಾಸ್ತಿ ಸಂಪರ್ಕ ಇರುವುದು. ಪತ್ರಿಕೆಯವರಿಗೆ ಮಾನ್ಯ ಉದಾಸಿಯವರನ್ನು ಕಂಡರೆ ಜಾಸ್ತಿ ಪ್ರೀತಿ. ನನ್ನನ್ನು ಹಾಗೂ ಮಾನ್ಯ ಬಿ.ಸಿ. ಪಾಟೀಲ್‌ರನ್ನು ಕಂಡರೆ ಪತ್ರಿಕೆಯವರು ಸ್ವಲ್ಪ ದೂರ ಇರುತ್ತಾರೆ. ಏಕೆಂದರೆ ಆ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ. ಉದಾಸಿ ಸಾಹೇಬರು ನಾನು ಗನ್ ಕೊಡಿಸಿದ್ದಾರೆಂದು ಹೇಳುತ್ತಿಲ್ಲ. ಈ ಘಟನೆಯಾದಾಗ ಎಸ್.ಪಿ.ಯವರು ಎಲ್ಲಿ ಇದ್ದರೆಂದು ಕೇಳಿ. ಹಾವೇರಿ ಪ್ರವಾಸಿ ಮಂದಿರದಲ್ಲಿ ಇದ್ದರೋ ಇಲ್ಲವೋ ಕೇಳಿ. ಡಿ.ಸಿ.ಯವರು ಎಲ್ಲಿ ಇದ್ದರು ಕೇಳಿ. ಹಾವೇರಿ ಪ್ರವಾಸಿ ಮಂದಿರದಲ್ಲಿ ಇದ್ದರೋ ಇಲ್ಲವೋ ಕೇಳಿ. ಆಯಿತು ಈ ಘಟನೆ ನಡೆದ ತಕ್ಷಣ ಯಾರ್‍ಯಾರು ಹೋಗಿದ್ದಾರೆ, ಮಾನವೀಯತೆಯ ದೃಷ್ಟಿಯ ಬಗ್ಗೆ ಮಾನ್ಯ ಶಾಸಕರು ಮಾತನಾಡುತ್ತಿದ್ದಾರಲ್ಲವೆ, 3.15 ನಲ್ಲಿ ಘಟನೆಯಾಯಿತು, ನೀವು ಫ್ಲೈಟ್‌ನಲ್ಲಿ ಬಂದಿರಿ. ಇಲ್ಲಿ ಪ್ರೆಸ್ ಕಾನ್‌ಫರೆನ್ಸ್ ಕರೆದಿರಿ. ನಿಮ್ಮ ಬಗ್ಗೆ ನಾನು ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಶಾಸಕರು ಎಸ್.ಪಿ.ಯವರ ಜೊತೆಯಲ್ಲಿ ಹೋಗಿ ಕರೆದುಕೊಂಡು ಅವರನ್ನು ತೋರಿಸಿದರಾ? ಆಯಿತು ಎಸ್.ಪಿ.ಯವರು ಈ ತರಹ ಹೇಳಿದರಲ್ಲಾ. ತಹಶೀಲ್ದಾರ್‌ವರಿಗೆ ಬರೆದುಕೊಡಿ ಎಂದು ಪ್ರೆಶರ್ ಮಾಡಿದರು. ಎಂದು ಹೇಳಿ. ಗೋಲಿಬಾರ್ ಮಾಡುವುದಕ್ಕೆ ಆರ್ಡರ್ ಮಾಡಿದೆವು ಎಂದಿರಲ್ಲಾ ಯಾವ ಅಧಿಕಾರಿ ಪ್ರೆಶರ್ ಮಾಡಿದರು ಅವರನ್ನು ಏಕೆ ಸಸ್ಪೆಂಡ್ ನೀವು ಮಾಡಲಿಲ್ಲ. ಬರೆದು ಕೊಡಿ ಎಂದು ಬೇರೆ ಅಧಿಕಾರಿಗಳ ಮೇಲೆ ಒತ್ತಡವನ್ನು ತಂದ ಅಧಿಕಾರಿಯನ್ನು ಇವತ್ತಿನವರೆಗೆ ಅವನ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ. ದಯಮಾಡಿ ಹೇಳಿ ಹೇಗೆ ನೀವು ನ್ಯಾಯಾಂಗ ತನಿಖೆಯನ್ನು ಮಾಡುತ್ತೀರಿ? ಈ ತನಿಖೆಯನ್ನು ಮಾಡಬೇಕಾದರೆ, ಎಸ್.ಪಿ.ಯವರನ್ನು ಅಲ್ಲಿಯೇ ಇಡುತ್ತೀರಿ, ಡಿ.ಸಿ.ಯವರನ್ನು ಅಲ್ಲಿಯೇ ಇಡುತ್ತೀರಿ. ಅಲ್ಲಿಂದ ಡಿ.ಸಿ.ಯವರನ್ನು ಚಿನ್ನದ ಗಣಿಗೆ ಕೊಟ್ಟಿರಬೇಕು ಗೊತ್ತಿಲ್ಲ. ನೀನು ಗೋಲಿಬಾರ್ ಮಾಡಿಸಿ ಬಂದಿದ್ದೀಯಾ ಅದಕ್ಕಾಗಿ ನಿನಗೆ ಚಿನ್ನದ ಗಣಿಯನ್ನು ಕೊಟ್ಟಿದ್ದೇವೆಂದು ಹೇಳಿ. ಅವರದು ವರ್ಗಾವಣೆ ಆಗಿರಬಹುದು. ಎಲ್ಲಿಗಾದರೂ ಕೊಡಲಿ ಬಿಡಿ, ವೈಯಕ್ತಿಕವಾಗಿ ನಾನು ಯಾರ ಬಗ್ಗೆ ಆರೋಪ ಮಾಡುವುದಕ್ಕೆ ಹೋಗುವುದಿಲ್ಲ. ಹೋಗಲಿ ಬಿಡಿ ಪಾಪ. ನನಗೆ ಇಷ್ಟೆ ಬೇಕಾಗಿರುವುದು, ನ್ಯಾಯಾಂಗ ತನಿಖೆ ಮಾಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬಯ್ಯುವುದನ್ನು ಬಿಟ್ಟು, ಹೋಗಲಿ ಬಿಡಿ ಪಾಪ,

ಹೋಗಲಿ ಬಿಡಿ ಪಾಪ ಎಂದು ಎಷ್ಟು ಸಲ ಅನ್ನುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ: ನಾವು ಇನ್ನು ಏನು ಮಾಡುವುದಕ್ಕಾಗುತ್ತದೆ ಸರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಂದರೆ ಏನು ಅರ್ಥ. ನೀವು ಅವರು ಇಬ್ಬರು ರಾಜಿಯಾಗಿದ್ದೀರೋ ಏನು ನಮಗೆ ಗೊತ್ತಾಗುತ್ತಿಲ್ಲ. ಏಕೆಂದರೆ ಪ್ರತಿಯೊಂದು ಮಾತಿಗೂ ಪಾಪ, ಪಾಪ ಎಂದರೆ ಪುಣ್ಯ ಯಾರು ಮಾಡಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಕೊನೆಗೆ ಸ್ವಲ್ಪ ಅದನ್ನು ಕನ್‌ಕ್ಲೂಡ್ ಮಾಡೋಣ ಬಿಡಿ ಸರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಅದಕ್ಕೆ ಬಂದಿರುವುದು.

ಅಧ್ಯಕ್ಷರು: ಇಲ್ಲಾ ಅವರು ಮಾತನಾಡುವ ಸ್ಟೈಲ್ ಹಾಗೆ ಇದೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಮನವಿ ಮಾಡುವುದು ಇಷ್ಟೆ. ನ್ಯಾಯಾಂಗ ತನಿಖೆಯನ್ನು ಮಾಡಬೇಕಾದರೆ, ಕೆಲವೊಂದು ರೂಲ್ಸ್‌ನ್ನು ನೋಡಬೇಕು. ಯಾರ್‍ಯಾರು ಇದರಲ್ಲಿ ವಿಫಲತೆಯಾಗಿದ್ದಾರೆ. ಎಸ್.ಪಿ.ಯವರು ಆಗಿದ್ದಾರೋ, ಡಿ.ಸಿ.ಯವರು ಆಗದ್ದರೋ, ಏಕೆಂದರೆ ನಮ್ಮ ಶಾಸಕರು ಪಾಪ ಅವರ ಮೇಲೆ ಆರೋಪ ಬರಬಾರದು. ಪ್ರಾಮಾಣಿಕವಾದ ಶಾಸಕರಿದ್ದಾರೆ. ಅದರಲ್ಲಿ ಅವರನ್ನು ಇನ್‌ಕ್ಲೂಡ್ ಮಾಡಬೇಕಾಗುತ್ತದೆ. ಏಕೆಂದರೆ ಅವರೆ ಹೇಳಿಬಿಟ್ಟಿದ್ದಾರೆ. ಬಿ.ಸಿ. ಪಾಟೀಲ್‌ರನ್ನು ಮಾಡಿ.

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ಧನ್ಯವಾದಗಳು, ಶಾಸಕರು ನೀವು ಪ್ರಾಮಾಣಿಕವಾಗಿದ್ದಾರೆಂದು ನೀವು ಹೇಳಿದಿರಿ, ನಿಮಗೂ ಗೊತ್ತಾಗಿ ಬಿಟ್ಟಿದೆ ನಮ್ಮ ವಿಚಾರ.

ಶ್ರೀ ಬಿ.ಸಿ. ಪಾಟೀಲ್: ನಾನು ಪಕ್ಕದ ಕ್ಷೇತ್ರದವನು. ಎಲ್ಲಾ ವಿರೋಧ ಪಕ್ಷದ ಶಾಸಕರನ್ನು ಇನ್‌ಕ್ಲೂಡ್ ಮಾಡಿಬಿಡಿ, ಒಬ್ಬರೇ ಏಕೆ?

ಶ್ರೀ ಹೆಚ್.ಡಿ. ರೇವಣ್ಣ: ಸರ್ ಅವರ ಕೇಳುತ್ತಿದ್ದಾರೆ, ಬಿ.ಸಿ. ಪಾಟೀಲ್‌ರನ್ನು ಸೇರಿಸಬೇಕೆಂದು.

ಶ್ರೀ ಬಿ.ಸಿ. ಪಾಟೀಲ್: ನ್ಯಾಯವನ್ನು ಕೇಳಿದ ತಕ್ಷಣ ಈ ತರಹ ಹೇಳಿದರೆ ಹೇಗೆ?

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ನಾವು ಮಾತನಾಡುವಾಗ ನೀವು ಎದ್ದೆದ್ದು ಮಾತನಾಡುತ್ತಿದ್ದೀರಿ. ಮಾನ್ಯ ರೇವಣ್ಣನವರು ಮಾತನಾಡುವಾಗ ಗಪ್ಪುಚುಪ್ಪ ಕುಳಿತಿದ್ದೀರಲ್ಲಾ ಏಕೆ? ಏನು ಎನ್ನುವುದನ್ನು ಈಗ ಹೇಳಿ.

ಶ್ರೀ ಬಿ.ಸಿ. ಪಾಟೀಲ್: ನಾವು ಈಗ ಸರ್ಕಾರದ ವಿರುದ್ಧ ಆಪಾದನೆಯನ್ನು ಮಾಡುತ್ತಿದ್ದೇವೆ. ನೀವು ಸಮರ್ಥಿಸಿಕೊಳ್ಳುತ್ತಿದ್ದೀರಿ ಅದಕ್ಕೆ.

ಶ್ರೀ ಹೆಚ್.ಡಿ. ರೇವಣ್ಣ: ಸ್ವಾಮಿ ಗೊಬ್ಬರದ ಬಗ್ಗೆ ಇಷ್ಟೆ. ಇವತ್ತು ರಾಜಕೀಯ ಮಾಡುವುದು ಬೇಡ. ರಾಜಕೀಯ ಬೇಕಾದರೆ ಹೊರಗಡೆ ಮಾಡುತ್ತೇವೆ. ಸ್ವಾಮಿ. ರಾಜಕೀಯ ಮಾಡುವುದಕ್ಕೆ ಈಗ ಚುನಾವಣೆ ಸಧ್ಯಕ್ಕೆ ಯಾವುದು ಇಲ್ಲ. ಸಧ್ಯಕ್ಕೆ ಪಾರ್ಲಿಮೆಂಟ್ ಚುನಾವಣೆ ಬಂದರೆ ಬರಬೇಕು. ಅಲ್ಲಿಯವರೆಗೆ ಯಾವುದೆ ಚುನಾವಣೆ ಇಲ್ಲ. ನಾನು ಒಂದನ್ನು ಹೇಳುವುದು, ಸನ್ಮಾನ್ಯ ಮುಖ್ಯಮಂತ್ರಿಗಳು ಮನವಿ ಮಾಡುವುದು. ಇವತ್ತು ಏನು ಗೋಲಿಬಾರ್ ಘಟನೆಯಾಗಿದೆ. ನ್ಯಾಯಾಂಗ ತನಿಖೆ ಮಾಡಬೇಕಾದರೆ, ಸುಮ್ಮನೆ ನ್ಯಾಯಾಂತ ತನಿಖೆ ಮಾಡುತ್ತೇವೆಂದರೆ ಸಮಂಜಸವಾಗಿ ಇರುವುದಿಲ್ಲ. ನ್ಯಾಯಾಂಗ ತನಿಖೆಯಲ್ಲಿ ಪೂರ್ತಿ ಏನೇನು ಒಳಪಡಿಸಬೇಕು ಎನ್ನುವುದರ ಬಗ್ಗೆ ಸದನದ ಮುಂದೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಹೇಳಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಹೇಳಿದ್ದಾರೆ. ಮಾನ್ಯ ಬಿ.ಸಿ. ಪಾಟೀಲ್‌ರು ಹೇಳಿದ್ದಾರೆ. ಈಗ ನ್ಯಾಯಂಗ ತನಿಖೆಯನ್ನು ಮಾಡಬೇಕಾದರೆ ಇದರಲ್ಲಿ ಯಾರ್‍ಯಾರು ಅಧಿಕಾರಿಗಳು ಇದ್ದಾರೆ. ಅವರನ್ನು ಮೊದಲು ಅಮಾನತ್ತು ಮಾಡಬೇಕಾಗುತ್ತದೆ. ರೆಕಾರ್ಡ್‌ನ್ನು ತಿದ್ದುವಂಥ ಸನ್ನಿವೇಶ ಇರುತ್ತದೆ. ಏಕೆಂದರೆ DGP ಸಾಹೇಬರೆ ಒಂದು ಹೇಳಿಕೆಯನ್ನು ಕೊಟ್ಟಾಗ, ಎಸ್.ಪಿ.ಯವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ. ಎಂದರೆ, ಗನ್ನನ್ನು ಕಿತ್ತುಕೊಂಡು ಹೋದರು. ಅದಕ್ಕೋಸ್ಕರ ದಯಮಾಡಿ ಇದನ್ನು ಮಾಡಬೇಕಾಗುತ್ತದೆ. ಅದರೊಂದಿಗೆ ಉದಾಸಿಯವರು ನಿಷ್ಪಕ್ಷಪಾತವಾಗಿ ತನಿಖೆಯು ನಡೆಯಲಿ. ನನ್ನ ಮೇಲೆ ಅನುಮಾನ ಬರುವುದು ಬೇಡ. ಪತ್ರಿಕೆಯವರು ನನ್ನ ಹೆಸರು ಬರೆದಿದ್ದಾರೆಂದು ಹೇಳುತ್ತಾರೆ. ಬೇಕಾದರೆ ಅವರು ರಾಜನಾಮೆ ಕೊಡುವುದಿದ್ದರೆ ಅವರು ಕೊಡಲಿ ನಮ್ಮದೇನೂ ಅಭ್ಯಂತರವಿಲ್ಲ. ನಾವು ಕೊಡಿ ಎಂದು ಒತ್ತಾಯ ಮಾಡುವುದಿಲ್ಲ. ಅವರು ವಿಷ್ಪಕ್ಷಪಾತವಾಗಿ ನಡೆಯಲಿ, ಏಕೆಂದರೆ ನಾಳೆ ಅವರು ಕೆಲಸ ಮಾಡದೇ ಹೋದರೆ ನಮ್ಮ ಕೆಲಸವೆಲ್ಲಾ ನಿಂತು ಹೋಗುತ್ತದೆ. ಆ ರೀತಿ ಆಗುವುದು ಬೇಡ. ಅವರೇನಾದರು ಪತ್ರಕೆಯವರ ಮೇಲೆ ಅನುಮಾನ ಬಂದು ಯಾರಾದರೂ

ಪತ್ರಿಕೆಯವರು ಅವರ ಮೇಲೆ ಸುಳ್ಳು ಬರೆದಿದ್ದಾರೆಂದರೆ ರಾಜೀನಾಮೆ ಕೊಡಲಿ. ಇಲ್ಲದೇ ಹೋದರೆ ಪತ್ರಿಕೆಯವರು ಸುಳ್ಳು ಬರೆದಿದ್ದಾರೆಂದರೆ ಬೇಡ. ನಾನು ಅವರಿಗೆ ಒತ್ತಾಯ ಮಾಡಲಿಕ್ಕೆ ಹೋಗುವುದಿಲ್ಲ. ಇಷ್ಟು ಹೇಳಿ ಬಿಡುತ್ತೇನೆ. ತಿರುಚುವುದು ಬೇಡ. ಶಾಸಕರೇ ಇವತ್ತು ನನ್ನನ್ನು ಸೇರಿಸಿ ಮಾಡಿ ಎಂದು ಹೇಳಿದ್ದಾರೆ. ದಯಮಾಡಿ ಎಲ್ಲವನ್ನು ಸೇರಿಸಿ ಎರಡು ಜಂಟಿ ಸದನ ಸಮಿತಿ ಮಾಡಿ ಏಕೆಂದರೆ ಗೊಬ್ಬರದಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆಯೆಂದು ಹೇಳುತ್ತಿದ್ದಾರೆ. ಅದಕ್ಕೆ ಯಾರ್‍ಯಾರು ಅಧಿಕಾರಿಗಳು ಕಾರಣಕರ್ತರು ಇದ್ದಾರೋ ಅದಕ್ಕೋಸ್ಕರ ಸದನ ಸಮಿತಿಯನ್ನು ಮಾಡಲಿ ಜೊತೆಗೆ ಗೋಲಿಬಾರ್‌ನಲ್ಲಿ ಇವೆಲ್ಲಾ ಸೇರಿಸಿ ಸದನದ ಮುಂದೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಗೋಲಿಬಾರ್ ಬಗ್ಗೆ ಯಾವ ರೀತಿ ನ್ಯಾಯಾಂಗ ತನಿಖೆ ಮಾಡುತ್ತೀರಿ ಎಂಬುದರ ಬಗ್ಗೆ ಪೂರ್ತಿ ಒಂದು ಗೈಡ್‌ಲೈನ್ಸ್ ಕೊಟ್ಟು ಆಮೇಲೆ ಮಾಡಿದರೆ ಇದೊಂದು ನಿಷ್ಪಕ್ಷಪಾತವಾದ ನ್ಯಾಯಾಂಗ ತನಿಖೆಯಾಗುತ್ತದೆ ಅಲ್ಲದೆ ಹೋದರೆ ಕಾಟಾಚಾರ ನ್ಯಾಯಾಂಗ ತನಿಖೆಯಾಗುತ್ತದೆಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎಂ ಉದಾಸಿ (ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವರು):- ಪುಟ್ಟಪ್ಪ ಆಸ್ಪತ್ರೆಗೆ ದಾಖಲಾದಾಗ ಒಬ್ಬರು ಹೋಗಲಿಲ್ಲವೆಂದು ಹೇಳಿದರು. ಇದು ಸತ್ಯಕ್ಕೆ ದೂರವಾದುದುದೆಂದು ಇಲ್ಲಿ ಹೇಳಬಯಸುತ್ತೇನೆ. ನಾನು ಸ್ವತಃ ಹೋಗಿ ಭೇಟಿಯಾಗಿದ್ದೇನೆ. ನನ್ನ ಮಿತ್ರರಾದಂಥ ಬೊಮ್ಮಾಯಿಯವರು ಸಹ ಸ್ವತಃ ಹೋಗಿ ಭೇಟಿಯಾಗಿ ಅವರಿಗೆ ಹಣಕಾಸು ನೆರವು ಕೊಡುವುದರೊಂದಿಗೆ ಎರಡು ಸಲ ಆಸ್ಪತೆಗೆ ಹೋಗಿ ಭೇಟಿಯಾಗಿದ್ದೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿರುವಂಥ ಸಂದರ್ಭದಲ್ಲಿ ಅವರಿಗೆ ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇದೆ ಎಂದು ಗೊತ್ತಾದ ಮೇಲೆ ಬೆಂಗಳೂರಿಗೆ ಕರೆಸುವ ವ್ಯವಸ್ಥೆಯನ್ನು ನಾನು ಮಾಡಿ ಅವರೊಂದಿಗೆ ಒಬ್ಬ ಡಾಕ್ಟರ್ ಅನ್ನು ಕಳುಹಿಸಿ ಪ್ರತಿ ಗಂಟೆಗೊಮ್ಮೆಗೆ ಅವರ ಆರೋಗ್ಯದ ಬಗ್ಗೆ ವಿವರವನ್ನು ನಾನು ಪಡೆಯುತ್ತಿದ್ದ. ಆಸ್ಪತ್ರೆಗೆ ತಲುಪಿದ ಮರುದಿನ ಬೆಳಿಗ್ಗೆಯೇ ನಾನು ಹೋಗಿ ಆಸ್ಪತ್ರೆಯಲ್ಲಿ ಆತನನ್ನು ಭೇಟಿಯಾಗಿದ್ದೇನೆ. ಅವರೊಂದಿಗೆ ಸಮಾಲೋಚನೆ ಮಾಡಿ ಅವರಿಗೆ ಸಂಪೂರ್ಣವಾದ ವ್ಯವಸ್ಥೆ ಮಾಡುವಂಥ ಕಾರ್ಯಕ್ರಮವನ್ನು ಜರುಗಿಸಿದ್ದೇನೆ. ನಾನು ಮತ್ತು ಮುಖ್ಯಮಂತ್ರಿಗಳು ಹೋಗಿ ಅವರ ಭೇಟಿ ಮಾಡಿದಾಗ ಪುಟ್ಟಪ್ಪನ ಮೂರು ಮಕ್ಕಳ ಹೆಸರಿನಲ್ಲಿ ಒಂದೊಂದು ಲಕ್ಷ ರೂ.ಗಳ ಠೇವಣಿ ಇಡುತ್ತೇವೆಂಬ ಭರವಸೆಯನ್ನು ಸಹಿತ ಕೊಟ್ಟು ನಾವು ಬಂದಿದ್ದೇವೆ. ಆತನ

ಆರೋಗ್ಯದ ದೃಷ್ಟಿಯಿಂದ ಮಾಡಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡಲಿಕ್ಕೆ ಹೇಳಿದ್ದೇವೆ. ಅವರ ಮಕ್ಕಳು ಮತ್ತು ಹೆಂಡತಿ ಬರುವ ಸಲುವಾಗಿ ವಾಹನದ ವ್ಯವಸ್ಥೆಯನ್ನು ನಾವು ಮಾಡಿಯಾಗಿತ್ತು. ಅಷ್ಟರಲ್ಲಿಯೇ ಜೆ.ಡಿ.ಎಸ್.ನ ಮಿತ್ರರು ಅವರಿಗೆ ವಾಹನದ ವ್ಯವಸ್ಥೆಯನ್ನು ಮಾಡಿ ಕರೆದುಕೊಂಡು ಬರಲಿಕ್ಕೆ ಪ್ರಯತ್ನ ಪಟ್ಟಿದ್ದಾರೆ. ಇದನ್ನು ರಾಜಕಾರಣಕ್ಕೆ ಬೆರೆಸಬೇಕಾದಂಥ ಅವಶ್ಯಕತೆ ಇಲ್ಲ. ಇದರಲ್ಲಿ ಯಾವ ಪಕ್ಷದವರು ಏನು ಮಾಡಿದ್ದಾರೆ. ಯಾವ ದುಷ್ಕರ್ಮಿಗಳು ಏನು ಮಾಡಿದ್ದಾರೆ. ಯಾರು ಇದರ ದುರುಪಯೋಗ ಮಾಡಿಕೊಂಡಿದ್ದಾರೆಂಬುದೆಲ್ಲವೂ ಹೊರ ಬರಬೇಕಾದರೆ ದಾಖಲೆಗಳಿವೆ. ಅಧಿಕಾರಿಗಳು ತಪ್ಪು ಮಾಡಿದ್ದರೆ, ಪಕ್ಷದವರನ್ನು ಹೊರತಪಡಿಸಿ ಹೊರಗಿನವರು ಏನಾದರೂ ಮಾಡಿದ್ದಾರೆ ಯಾರು ಅಪರಾಧಿಗಳು ಎಂಬುದು ಹೊರಬರಬೇಕಾದರೆ ಎಲ್ಲಾ ವೀಡಿಯೋ ಚಿತ್ರೀಕರಣ ಇರುವುದರಿಂದ ಅದನ್ನು ನಾವು ತಪಾಸಣೆ ಮಾಡಿದ ಮೇಲೆ ಅವೆಲ್ಲಾ ಹೊರಗೆ ಬರುತ್ತದೆ. ಆದ್ದರಿಂದ ನಾವು ಅನಾವಶ್ಯಕವಾಗಿ ಯಾರದೇ ಹೆಸರುಗಳನ್ನು ಹೇಳುವುದಕ್ಕೆ ಬಯಸುವುದಿಲ್ಲ. ಇದೆಲ್ಲದರ ಜೊತೆಗೆ ಸನ್ಮಾನ್ಯ ರೇವಣ್ಣನವರು ಮಾತನಾಡುತ್ತಾ ನಾನು ಪತ್ರಕೆಯವರೆಲ್ಲರ ಮೇಲೆ ದೂಷಣೆ ಮಾಡಿದೆ ಎಂಬುದು ಸರಿಯಲ್ಲ. ಒಂದು ಪತ್ರಿಕೆಯವರ ನನ್ನ ಹೆಸರನ್ನು ಬರೆದರು, ಪಾಪ ಅವರಿಗೆ ಮಾಹಿತಿಯ ಕೊರತೆ ಇರಬಹುದು. ಈ ಮಾಹಿತಿಯ ಕೊರತೆಯಿಂದ ಬರೆದದ್ದನ್ನೇ ಬೇರೆಯವರು ಅದನ್ನು ಅನರ್ಥ ಮಾಡಿಕೊಂಡಿದ್ದಾರೆ. ಆ ಕಾರಣದಿಂದ ಅದರ ಬಗ್ಗೆ ಒಂದು ಪತ್ರಿಕೆಯವರು ಎಂದು ಇಷ್ಟು ಹೇಳಿದ್ದೇನೆ. ಅದೇನು ಎನ್ನುವುದನ್ನು ವಿಚಾರಣೆ ನಡೆದಾಗ ಎಲ್ಲವೂ ಬಯಲಿಗೆ ಬರುತ್ತದೆ. ದಯವಿಟ್ಟು ಗೊಬ್ಬರದ ವಿಷಯದಲ್ಲಿ ನಡೆದಿರುವ ಘಟನೆ ಏನು? ಅಥವಾ ಗೊಬ್ಬರದ ಹಿಂದೆ ರಾಜಕಾರಣ ಮಾಡಿದರು ಎಂಬ ವಿಷಯವೆ ಇರಲಿ ಅಥವಾ ದುಷ್ಕರ್ಮಿಗಳೂ ಏನಾದರೂ ಮಾಡಿದ್ದರೆ ಅದೆಲ್ಲವು ಬಯಲಿಗೆ ಬರುವಂಥ ದಿವಸ ಬಹಳ ದಿವಸಗಳು ಉಳಿದಿಲ್ಲ. ನ್ಯಾಯಾಂಗ ತನಿಖೆಯಾಗುತ್ತದೆಂದು ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ. ಅವರು ಕೇಳಿದಂಥ ಪುಟ್ಟಪ್ಪನವರ ವಿಷಯದಲ್ಲಿ, ಕಾರಿನ ವಿಷಯದಲ್ಲಿ ಪತ್ರಿಕೆಯ ವಿಷಯದಲ್ಲಿ, ಪುಟ್ಟಪ್ಪನ ಮೂರು ಮಕ್ಕಳಿಗೆ ನಾವು ಯಾವ ರೀತಿ ಸಹಾಯ ಮಾಡಬೇಕೆಂದು ಅವರ ಮನೆಗೆ ಹೋಗಿ ನಾನು ಭೇಟಿಯಾಗಿ ಬಂದುದು, ಸಾಧ್ಯವಾದ ಹಣಕಾಸು ನೆರವು ಕೊಟ್ಟಿದ್ದನ್ನು ಸಹ ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮೂರು ಲಕ್ಷ ರೂ.ಗಳ ನೆರವು ಕೊಟ್ಟಿದ್ದೇವೆಂದರು. ದೇವೇಗೌಡರು ಆಸ್ಪತ್ರೆಗೆ ಹೋಗಿ ನೋಡಿ, ಪುಟ್ಟಪ್ಪನನ್ನು ಅವರ ಹೆಂಡತಿಯನ್ನು ಹಾವೇರಿಯಲ್ಲಿ ಅವರ ಮನೆ ಪರಿಸ್ಥಿತಿಯನ್ನು ನೋಡಿ ಮೂರು ಲಕ್ಷ ರೂ.ಗಳನ್ನು ಕೊಟ್ಟ ಮೇಲೆ ಮಾರನೇ ದಿವಸ ಬೆಳಿಗ್ಗೆ ಇದನ್ನು ಮಾಡಿದ್ದಾರೆಂದು ಅವರ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ಸಿದ್ದಲಿಂಗಪ್ಪನಿಗೆ ನಿಮ್ಮ ಬಿ.ಜೆ.ಪಿ. ಅಧ್ಯಕ್ಷರು ತಮ್ಮ ವಿ.ಎಸ್.ಎಸ್.ಎಲ್. ಅಧ್ಯಕ್ಷರಿಗೆ ಕೊಟ್ಟಿರಲ್ಲ ನೀವು ಅವತ್ತೇ ಸರ್ಕಾರದಿಂದ ಮೂರು ಲಕ್ಷ ರೂ.ಗಳನ್ನು ಅನೌನ್ಸ್ ಮಾಡಿಬಿಟ್ಟಿದ್ದಿದ್ದರೆ ಉದಾಸಿ ಸಾಹೇಬರು ಮಾಡಿದ್ದಾರೆಂದು ಹೇಳುತ್ತಿದ್ದೆ. ಆದರೆ ದೇವೇಗೌಡರು ಮೂರು ಲಕ್ಷ ರೂ.ಗಳನ್ನು ಕೊಟ್ಟ ಬಂದ ಮೇಲೆ ತಾವು ಮಾರನೇ ದಿವಸ ಸಂಜಯಗಾಂಧಿ ಆಸ್ಪತ್ರೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ತಾವು ಹೋಗಿ ಸಹಾಯ ಮಾಡಿಸುವುದು ಎಂದು ಸಭೆಯ ಗಮನಕ್ಕೆ ತರಬಯಸುತ್ತೇನೆ. ಪತ್ರಿಕೆ ಸುಳ್ಳು ಹೇಳಬೇಕು. ಎಲೆಕ್ಟ್ರಾನಿಕ್ ಮೀಡಿಯಾದವರು ಸುಳ್ಳು ಹೇಳಬೇಕು. ತಾವು ನೋಡಿ.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ): ಹಾವೇರಿ ಗೋಲಿಬಾರ್ ಹಾಗೂ ರಾಸಾಯನಿಕ ಗೊಬ್ಬರಗಳ ವಿತರಣೆಯಲ್ಲಿ ಅವ್ಯವಸ್ಥೆಯಾಗಿರುವಂಥ ವಿಚಾರದ ಬಗ್ಗೆ ತಾವು ಇವತ್ತು ನಮಗೆ ಅನುಮತಿ ಕೊಟ್ಟಿದ್ದೀರಿ. ಬಹುಶಃ ಇವತ್ತು ರಾಜ್ಯದಲ್ಲಿ ಇಂಥ ಅತ್ಯಂತ ಗಂಭೀರವಾದಂಥ ವಿಚಾರ ಇನ್ನೊಂದಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ರಾಸಾಯನಿಕ ಗೊಬ್ಬರ ಯಾವ ಕಾಲಕ್ಕೆ ಯಾವಾಗ ಎಷ್ಟೆಷ್ಟು ಬೇಕು ಎನ್ನತಕ್ಕದ್ದು ಇಲಾಖೆಯವರ ಹತ್ತಿರ ಅಂಕಿ ಅಂಶಗಳ ಸಹಿತ ಅವರ ಹತ್ತಿರ ಮಾಹಿತಿ ಇರುತ್ತದೆ. ಬಹಶಃ ಸನ್ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂದ ತಕ್ಷಣ ಅವರ ಜೊತೆಯಲ್ಲೇ ಮಳೆಯು ಬಹಳ ಚೆನ್ನಾಗಿ ಬಂತು. ಇವರು ಬಂದಾಗ ಮಳೆ ಬಂತು ಎಂದು ಬಹಳ ಜನ ಸಂತೋಷ ಪಟ್ಟರು. ತಕ್ಷಣ ಅವರೇನು ಕಾರ್ಯಕ್ರಮ ಕೈಗೆತ್ತಿಕೊಳ್ಳಬೇಕಾಗಿತ್ತು ಎಂದರೆ ಮಳೆ ಬಂದ ತಕ್ಷಣ ರೈತರು ಬಿತ್ತನೆ ಬೀಜ ಮತ್ತು ಅದಕ್ಕೆ ಬೇಕಾದ ಗೊಬ್ಬರ ರೆಡಿ ಇಟ್ಟುಕೊಂಡಿರುತ್ತಾರೆ. ಆದರೆ ಮಳೆ ಅನಿರೀಕ್ಷಿತವಾಗಿ ಮುಂಚೆಯೇ ಬಂದದ್ದರಿಂದ ಈ ಗೊಬ್ಬರ ರೈತರಿಗೆ ಬೇಕಾಗಿ ಬಂತು. ಅದು ಕೇವಲ ಐದಾರು ಜಿಲ್ಲೆಗಳಲ್ಲಿ ಮಾತ್ರ ಮಳೆ ಬಂತು. ನಮ್ಮ ವಿರೋಧ ಪಕ್ಷದ ನಾಯಕರು ಕೊಟ್ಟ ಮಾಹಿತಿ ಪ್ರಕಾರ ಪ್ರತಿ ತಿಂಗಳು ಏನು requirement ಇತ್ತು. ಸ್ವಲ್ಪ ಹೆಚ್ಚು ಕಡಿಮೆ by and large ಅವರು supply ಕೊಟ್ಟಿದ್ದಾರೆ. ಕೊಟ್ಟಿರತಕ್ಕಂಥ ಸಪ್ಲೈ ಪ್ರತಿ ಜಿಲ್ಲೆಗೂ ವಿತರಣೆಯಾಗಿತ್ತು. ಎಲ್ಲಿ ಅವಶ್ಯಕತೆ ಇತ್ತೋ ಅಲ್ಲಿ

ತಕ್ಷಣ ಅವರು ಡೈವರ್ಟ್ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕಿತ್ತು. ಬಹುಶಃ ಅವರು ಸರಿಯಾದಂಥ ಪ್ಲಾನ್ ಮಾಡಲಿಲ್ಲ. ವಿತರಣೆ ವ್ಯವಸ್ಥೆ ಬಗ್ಗೆ ಎಷ್ಟು ಗಮನ ಕೊಡಬೇಕಾಗಿತ್ತೋ ಅಷ್ಟು ಗಮನ ಸರ್ಕಾರ ಕೊಡಲಿಲ್ಲ. ಬಿತ್ತನೆ ಕಾಲ ಪ್ರಾರಂಭವಾಗುತ್ತಿದೆ. ಮಳೆ ಬಂದಿದೆ ಎಂದರೆ ಅಂದಿನ ಬೆಳೆಗೆ ಬಿತ್ತನೆ ಬೀಜ, ಗೊಬ್ಬರ ಬೇಕು ಎಂಬುದು ಎಲ್ಲಾ ರೈತರಿಗೂ ಗೊತ್ತಿರುವಂಥ ವಿಚಾರ. ಅದಕ್ಕೆಷ್ಟು ಪ್ರಾಮುಖ್ಯತೆ ಕೊಡಬೇಕಾಗಿತ್ತೋ ಬಹುಶಃ ಅಷ್ಟು ಪ್ರಾಮುಖ್ಯತೆಯನ್ನು ಸರ್ಕಾರ ಕೊಡಲಿಲ್ಲ. ಆ ಇಲಾಖೆ ಸಂಪೂರ್ಣವಾಗಿ ವಿಫಲವಾಯಿತು. ಅದರ ಜೊತೆಗೆ ನಿಮಗೆ ಗೊತ್ತಿದೆ. ಇವತ್ತು fertilizer companies ಒಂದು ಕಡೆ ಇರಬಹುದು, petroleum products ಇರಬಹುದು. chemical products ಇರಬಹುದು. ಅದು international market ನಲ್ಲಿ ಜಾಸ್ತಿಯಾಗಿದೆ. ಅದರ ಪರಿಣಾಮ ಈಗ ಇಡೀ ಅಂತರಾಷ್ಟ್ರೀಯ ವ್ಯಾಪ್ತಿಯಲ್ಲಿ ಬೆಲೆಗಳು ಜಾಸ್ತಿಯಗುವಂಥ ಪರಿಸ್ಥಿತಿಯೂ ಇದೆ. ಅಂಥ ಸಂದರ್ಭದಲ್ಲಿ ಈ ಗೊಬ್ಬರದ ಕಾರ್ಖಾನೆಗಳು ಇವತ್ತು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿಲ್ಲ. Decontrol ಮಾಡಿದ್ದಾರೆ. ಅವು ಸ್ವತಂತ್ರವಾಗಿ ಉತ್ಪಾದನೆಯನ್ನು ಮಾಡುತ್ತಿವೆ. ಕೇಂದ್ರ ಸರ್ಕಾರಕ್ಕೇನಾದರೂ ಅಧಿಕಾರ ಇದ್ದರೆ ಆ ಬೆಲೆಗಳನ್ನು ನಿಯಂತ್ರಣ ಮಾಡತಕ್ಕಂಥ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ, ಸಬ್ಸಿಡಿ ಕೊಡುತ್ತಾರೆ. ಬೆಲೆ ನಿಗದಿ ಮಾಡಿ ನಿಯಂತ್ರಣ ಮಾಡುವಂಥ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ಇವತ್ತು ಫ್ಯಾಕ್ಟರೀಸ್ ಮೇಲೆ ಸರ್ಕಾರಕ್ಕೆ ನೇರವಾದ ನಿಯಂತ್ರಣ ಇಲ್ಲ. ಇಂಥ ಒಂದು ಸಂದರ್ಭದಲ್ಲಿ ಬಹಶಃ ಅವರು ಉತ್ಪಾದನೆ ಮಾಡುವಂಥದ್ದರಲ್ಲಿ ಅಲ್ಲಿ ಅಂತರ್ರಾಷ್ಟ್ರೀಯ ಮಾರುಕಟ್ಟೆಗಳ ಪರಿಸ್ಥಿತಿಗನುಗುಣವಾಗಿ ಸ್ವಲ್ಪ ಹೆಚ್ಚು ಕಡಿಮೆ ಆಗಿರಬಹುದು. ಆದರೆ Fertilizer factories ನಲ್ಲಿ ಉತ್ಪಾದನೆ ಆಗಿದೆ. ಅನೇಕ ಗೊಬ್ಬರದ ವಿತರಕರು ಗೊಬ್ಬರವನ್ನು ತಂದಿದ್ದಾರೆ. ಪರಿಸ್ಥಿತಿಯನ್ನು ಅವಲೋಕಿಸಿ ತಕ್ಷಣ ಮಳೆ ಬಂದಾಗ ಈ black market ಅಗತಕ್ಕಂಥದ್ದು ಮಾರಾಟಗಾರರಿಗೆ ಅನುಭವ ಇದೆ. ಆ traders ಗೆ ಅನುಭವ ಇರುವುದನ್ನು ಸರ್ಕಾರ ಅವರ ಮೇಲೆ ಎಷ್ಟು ತೀಕ್ಷ್ಣವಾಗಿ ಅವರ ಮೇಲೆ ನಿಗಾ ಇಟ್ಟು ಆ ವಿತರಣಾ ವ್ಯವಸ್ಥೆಗೆ ಏನು ಯೋಜನೆ ಮಾಡಬೇಕಾಗಿತ್ತು ಅದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಅದರಿಂದಲೇ ಇವತ್ತು ನಮ್ಮ ರಾಜ್ಯದಲ್ಲಿ ಈ ರೀತಿಯ ದುಷ್ಪರಿಣಾಮಗಳಾಗಿರುವುದು. ನಾವು ಬಹಳ ನಿರೀಕ್ಷೆ ಮಾಡಿದ್ದೆವು. ಕೇಂದ್ರ ಸರ್ಕಾರ ಡಾ॥ ಮನಮೋಹನ್‌ಸಿಂಗ್ ರವರ ನೇತೃತ್ವದಲ್ಲಿ 5 ಎಕರೆ ಒಳಗಿರುವ ರೈತರಿಗೆ ಸುಮಾರು 60 ಸಾವಿರ ಕೋಟಿ ಸಾಲ ಮನ್ನಾ ಮಾಡಿದೆ. ನೀವು ಬಹುಶಃ ಅದಕ್ಕಿಂತ ಹೆಚ್ಚಿನ ಸಹಾಯ ರೈತರಿಗೆ ಕೊಡುತ್ತಾರೆ ಎಂಬ ನಿರೀಕ್ಷೆಯಲ್ಲಿ ನಾವು ಇದ್ದೆವು.

ಅಂಥ ಸಂದರ್ಭದಲ್ಲಿ ಬಹಶಃ ಅನಿರೀಕ್ಷಿತವಾಗಿ ಈ ಘಟನೆಗಳು ರಾಜ್ಯದಲ್ಲಿ ನಡೆದಿದೆ. ಈ ಘಟನೆ ನಡೆಯತಕ್ಕ ಸಂದರ್ಭದಲ್ಲಿ ನಿರ್ಲಕ್ಷವೇ ಮೂಲ ಕಾರಣ. ಸರ್ಕಾರ ಅದರ ಬಗ್ಗೆ ಎಷ್ಟು ಗಮನ ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲ. ಏನು ಬಿತ್ತನೆ ಕಾಲ ಪ್ರಾರಂಭವಾಯಿತೋ ಆ ಸಂದರ್ಭಕ್ಕೆ ತಕ್ಕಂತೆ ಸರ್ಕಾರದಲ್ಲಿ ಏನು ವ್ಯವಸ್ಥೆಗಳನ್ನು ಮಾಡಬೇಕಾಗಿತ್ತೋ ಅದರ ಬಗ್ಗೆ ಗಮನ ಕೊಡದೇ ಸಂಪೂರ್ಣವಾಗಿ ವಿಫಲವಾಗಿದೆ. ಆ ಕಾರಣದಿಂದಲೇ ಈ ದುರ್ಘಟನೆಗಳು ನಡೆಯಲು ಸಾಧ್ಯವಾಯಿತು. ಬಹಶಃ ಅದಾದನಂತರ ಕೇಂದ್ರದ ಕಾರ್ಯದರ್ಶಿಯವರು ಬರುತ್ತಾರೆ.ಅವರೊಂದಿಗೆ ಮಾನ್ಯ ಮುಖ್ಯಮಂತ್ರಿಯವರು, ಅಧಿಕಾರಿಗಳು ಚರ್ಚೆ ಮಾಡುತ್ತಾರೆ. ಅವರು ಒಂದು ಶೆಡ್ಯೂಲ್ ಕೊಟ್ಟು ಹೋಗುತ್ತಾರೆ. ಅದರ ಪ್ರಕಾರ ನಾವು ನಿಮ್ಮ ರಾಜ್ಯಕ್ಕೆ ಏನು ಅಲಾಟ್‌ಮೆಂಟ್ ಕೊಟ್ಟಿದ್ದೇವೆ ಅದನ್ನು ವ್ಯವಸ್ಥಿತ ರೀತಿಯಲ್ಲಿ ವಿತರಣೆ ಮಾಡಿ ಎಂದು ಸಲಹೆ ಕೊಟ್ಟು ಹೋಗುತ್ತಾರೆ. ಎಲ್ಲಿ ಬೇಡಿಕೆ ಇದೆ ಅಲ್ಲಿಗೆ ಗೊಬ್ಬರವನ್ನು ಶಿಫ್ಟ್ ಮಾಡಿ ಎಂದು. ನಿಮಗೆ ಬೇರೆ ಗೊಬ್ಬರ monthly ಪೈಸ್ ನಿಮ್ಮ ಬೇಡಿಕೆ ಏನಿದೆ ಅದನ್ನು ಸರಬರಾಜು ಮಾಡುತ್ತೇವೆ ಎನ್ನತಕ್ಕ ಸಲಹೆಯನ್ನು ಕೇಂದ್ರ ಸರ್ಕಾರದ ಕಾರ್ಯದರ್ಶಿಯವರು ಕೊಟ್ಟಿದ್ದಾರೆ. ದುರಾದೃಷ್ಟ ಆ ವ್ಯವಸ್ಥೆಯ ಬಗ್ಗೆ ಸಹ ಸರ್ಕಾರ ಗಮನ ಕೊಡಲಿಲ್ಲ. ಆದ್ದರಿಂದಲೆ ಸಬ್ಸಿಕ್ವೆಂಟ್ ಆಗಿ ರೈತರು ಹೋರಾಟ ಮಾಡುವುದು, ಆತ್ಮಹತ್ಯೆ ಮಾಡಿಕೊಳ್ಳುವುದು ಜಾಸ್ತಿಯಾಯಿತು. ಇವತ್ತಿನವರೆಗೂ ಅಗತ್ಯವಿರುವಷ್ಟು ಗೊಬ್ಬರ ಯಾವ ರೈತರಿಗೂ ಸಿಗುತ್ತಿಲ್ಲ. ಎಲ್ಲೆಲ್ಲೆ ಬಿತ್ತನೆ ನಡೆಯುತ್ತಿದೆ. ಆ ಭಾಗದಲ್ಲಿ ಬೇಕಾದಷ್ಟು ರಾಸಾಯನಿಕ ಗೊಬ್ಬರ ಇವತ್ತಿಗೂ ದೊರೆಯುತ್ತಿಲ್ಲ. ಪಹಣಿ ತನ್ನಿ, ಅದನ್ನು ತನ್ನಿ ಇದನ್ನು ತನ್ನಿ ಎಂದು ಸುಮ್ಮನೆ ಸತಾಯಿಸಿ ಎರಡು, ನಾಲ್ಕು ಮೂಟೆ ಕೊಡಿ ಎನ್ನುವುದು ಇದೆಯೇ ಹೊರತು ದೊಡ್ಡ ದೊಡ್ಡ ರೈತರಿಗಂತು ತುಂಬಾ ತೊಂದರೆಯಾಗಿದೆ. ನಮ್ಮ ನಾಯಕರು ಹೇಳಿದಂತೆ ನೂರಕ್ಕೆ ಎಪ್ಪತ್ತೈದು ಪರ್ಸೆಂಟ್ ಮಳೆ ಆಶ್ರಯದ ಜಮೀನು ಇರತಕ್ಕದ್ದು. ರೈತ ವರ್ಷಕ್ಕೆ ಒಂದು ಸಲ ಮಳೆ ಆಶ್ರಯದ ಬೆಳೆ ತೆಗೆದುಕೊಳ್ಳುವುದಕ್ಕೆ ಕಾಯುತ್ತಿರುತ್ತಾನೆ. ಆ ಸಂದರ್ಭದಲ್ಲಿ ಅವನಿಗೆ ಬೇಕಾದ ಬಿತ್ತನೆ ಬೀಜ ಮತ್ತು ರಾಸಾಯನಿಕ ಗೊಬ್ಬರವನ್ನು ಕೊಡದಿದ್ದರೆ ಬಹುಶಃ ಅವನಷ್ಟು ಡೆಸ್ಪರೆಟ್ ಆಗತಕ್ಕವನು ಬೇರೆ ಇಲ್ಲ. ಏಕೆಂದರೆ ಅದನ್ನು ಬಿಟ್ಟರೆ ಅವನಿಗೆ ಜೀವನಕ್ಕೆ ಬೇರೆ ದಾರಿಯೇ ಇಲ್ಲ. ಮಳೆಯ ಆಶ್ರಯದಿಂದಲೇ ಅವನು ಪೂರ್ತಿ ಹೊಟ್ಟೆ ತುಂಬಿಸಿಕೊಳ್ಳಬೇಕು. ಅಂಥ ಸಂದರ್ಭದಲ್ಲಿ ಅವನಿಗೆ ಕನಿಷ್ಟ ಬಿತ್ತನೆ ಬೀಜ ಮತ್ತು ರಾಸಾಯನಿಕ ಗೊಬ್ಬರವನ್ನು ಜವಾಬ್ದಾರಿಯುತವಾದ ಸರ್ಕಾರ ಒದಗಿಸಬೇಕಾಗಿರುವುದರಲ್ಲಿ ಸಂಪೂರ್ಣವಾಗಿ

ವಿಫಲವಾಗಿರುವುದರಿಂದ ಇವತ್ತು ಈ ರಾಜ್ಯದಲ್ಲಿ ಇಷ್ಟೊಂದು ಹಾಹಾಕಾರ ಆಗತಕ್ಕ ಅವಕಾಶ ಬಂದಿದೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ಇಷ್ಟೇ ಹೇಳತಕ್ಕದ್ದು. ನೀವು ಸಂಘರ್ಷ ಮಾಡುವುದಿಲ್ಲ ಎಂದು ಹೇಳಿದ್ದೀರಿ ಬಹಳ ಸಂತೋಷ. ನಿಜವಾಗಿ ಇವತ್ತು ಇರತಕ್ಕ ಪರಿಸ್ಥಿತಿ, ರಾಜ್ಯದ ಅಭಿವೃದ್ದಿಯ ದೃಷ್ಟಿಯಿಂದ ಸಂಘರ್ಷಕ್ಕೆ ಹೋಗಬಾರದು. ತಾವು ದೊಡ್ಡ ಮನಸ್ಸು ಮಾಡಿ ಬ್ರಾಡ್‌ಕಾನ್‌ಸೆಪ್ಟ್ ಇಟ್ಟುಕೊಂಡು ತಾವು ನಿಜವಾಗಿ ರಾಜ್ಯದ ಅಭಿವೃದ್ಧಿಯ ಕಡೆ ಹೋಗಬೇಕಾಗಿರುವುದನ್ನು ನಾನು ಒಪ್ಪುತ್ತೇನೆ. ಆದರೆ ಇಂಥ ಕ್ರೈಸ್ ಬಂದಿದೆ. ರಾಜ್ಯದಲ್ಲಿ ಗೋಲಿಬಾರ್ ಆಗಿದೆ. ದಿನಾ ಆತ್ಮಹತ್ಯೆಯಾಗುತ್ತಿದೆ. ಇಂಥ ಸಂದರ್ಭದಲ್ಲಿ ಪತ್ರಿಕೆಯನ್ನು ನೋಡಿದರೆ ಯಾಕೋ ಮುಖ್ಯಮಂತ್ರಿಗಳು ಮತ್ತೆ ಎಲ್ಲೋ ಸಿಡುಕು, ಮೊದಲು ವಿರೋಧ ಪಕ್ಷದಲ್ಲಿ ಇದ್ದಾಗ ಇತ್ತಲ್ಲ. ಆ ರೀತಿ ಇದ್ದಂತೆ ಆಗುತ್ತಿದೆ. ಇಂಥ ಇಶ್ಯೂಗಳು ನಿಮ್ಮ ಕೈಯಲ್ಲಿ ಏನಾದರೂ ಸಿಕ್ಕಿದ್ದರೆ ಈ ಸಭೆಯನ್ನು ಗಡಗಡ ನಡುಗಿಸಿಬಿಡುತ್ತಿದ್ದೀರಿ. ಆದರೆ ಇಲ್ಲಿರುವ ನಾವೆಲ್ಲರೂ ಸೌಮ್ಯವಾದವರೆ, ನಿಜ ಹೇಳಬೇಕಾದರೆ ನಾವು ಯಾರೂ ಅಗ್ರೆಸಿವ್ ಆಗಿಲ್ಲ. ನೀವು ಮಾತನಾಡುತ್ತಿದ್ದಕ್ಕೆ ನಮ್ಮನ್ನು ಹೋಲಿಕೆ ಮಾಡಿದಾಗ ನಾವು ಏನೇನೂ ಇಲ್ಲ. ಮಾನ್ಯ ಜಗದೀಶ್ ಶೆಟ್ಟರ್ ಸಾಹೇಬರು ಇಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾಗ ನಾವು ಈ ಸಭೆಯಲ್ಲಿ ಇದ್ದೆವು. ಅವರು ಅವರದ್ದೇ ಆದ ದಾಟಿಯಲ್ಲಿ ಮಾತನಾಡುತ್ತಿದ್ದರು. ಆದರೆ ತಾವು ಮಾತ್ರ ಇಂಥ ವಿಚಾರಗಳು ಬಂದಾಗ ತಡೆದುಕೊಳ್ಳಲು ಆಗುತ್ತಿರಲಿಲ್ಲ. ಆದರೆ ದುರಾದೃಷ್ಟ ಇವತ್ತಿನ ಪತ್ರಿಕೆಯನ್ನು ನೋಡಿದಾಗ ಒಂದು ಕಡೆ ಸದನದ ಎಲ್ಲಾ ಪಕ್ಷದ ಸದಸ್ಯರ ನಿಯೋಗವನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳುತ್ತೀರಿ. ನಾನು ಮುಖ್ಯಮಂತ್ರಿಯವರಿಗೆ ಒಂದು ಮಾತನ್ನು ಹೇಳುತ್ತೇನೆ. ಈ ಸಮಸ್ಯೆ ಬಂದಾಗ ನಿಮ್ಮ ಮಂತ್ರಿಮಂಡಲದ ಸದಸ್ಯರೇ ಹೋಗಿದ್ದೀರಿ ಆವತ್ತೇ ಎಲ್ಲಾ ಪಕ್ಷದ ಸದಸ್ಯರನ್ನು ಕರೆದುಕೊಂಡು ಹೋಗುವ ಬಗ್ಗೆ ಏಕೆ ಪ್ಲಾನ್ ಮಾಡಲಿಲ್ಲ? ಏಕೆ ಎಲ್ಲಾ ಪಕ್ಷದ ಸದಸ್ಯರನ್ನು ಕರೆದುಕೊಂಡು ಹೋಗಲಿಲ್ಲ ಎಂದು ನಮಗೆ ನೋವು.

ಶ್ರೀ ಡಿ. ಕೆ, ಶಿವಕುಮಾರ್: ಏಕೆಂದರೆ ಕೇಂದ್ರದವರು ಏನಾದರೂ ಕೊಡುವುದು ಇದ್ದರೆ ಕೊಟ್ಟೇ ಕೊಡುತ್ತಾರೆ. ಕಾಂಗ್ರೆಸ್ ನವರಿಗೆ ಎಲ್ಲಿ ಒಳ್ಳೆಯ ಹೆಸರು ಬಂದು ಬಿಡತ್ತದೋ, ತಮಗೆ ಮಾತ್ರ ಆ ಕ್ರೆಡಿಟ್ ತೆಗೆದುಕೊಳ್ಳಬೇಕೆಂದು ಆ ರೀತಿ ಮಾಡಲಿಲ್ಲ!

ಶ್ರೀ ವಿ. ಮುನಿಯಪ್ಪ: ಇಲ್ಲ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಇಬ್ಬರದ್ದೂ ತಪ್ಪು ಪಾಪ ಅವರು ದೆಹಲಿಗೆ ಹೋಗಿ ಮುಂದೆ ವೈಷ್ಣವದೇವಿಗೆ ಹೋಗಬೇಕಾಗಿತ್ತು. ಆಗ ಅಷ್ಟು ದೂರ ನಿಮಗೆಲ್ಲಾ ಕರೆದುಕೊಂಡು ಹೋಗುತ್ತಾರೆ?

ಶ್ರೀ ವಿ. ಮುನಿಯಪ್ಪ: ಆ ಕೆಲಸ ಆವತ್ತೇ ಮಾಡಿದ್ದರೆ ಬಹುಶಃ ಇಷ್ಟೊಂದು ದುಷ್ಪರಿಣಾಮ ಆಗುತ್ತಿರಲಿಲ್ಲ. ತಾವು ವಿಶ್ವಾಸ ಮತ ಕೇಳತಕ್ಕ ಸಂದರ್ಭದಲ್ಲಿ ಈ ಪ್ರಸ್ತಾಪ ಬಂತು. ಮಳೆ ಬರುತ್ತಿದೆ, ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರದ ಸಮಸ್ಯೆಯಾಗುತ್ತಿದೆ ಎಂಬುದು ಬಂತು ತಾವೇ ಕಾರ್ಯದರ್ಶಿಯವರು ಇಲ್ಲಿಗೆ ಬರುತ್ತಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಅದರ ಬಗ್ಗೆ ಗಮನ ಹರಿಸಿದ್ದೇವೆ. ಸಮಸ್ಯೆ ಇಲ್ಲ ಎಂದು ಹೇಳಿದಿರಿ, ಕಾರ್ಯದರ್ಶಿಯವರು ಇಲ್ಲಿಗೆ ಬಂದು ಒಂದು ನಿರ್ದಿಷ್ಟವಾದ ಶೆಡ್ಯೂಲನ್ನು ಕೊಟ್ಟು ಹೋದರು. ನಿಮಗೆ ಇಷ್ಟು ಅಲಾಟ್‌ಮೆಂಟ್ ಕೊಟ್ಟಿದ್ದೇವೆ. ನಿಮಗೆ ಇಷ್ಟು ಸಪ್ಲೈ ಇದೆ, ಅದಕ್ಕೆ ಅನುಗುಣವಾಗಿ ನಿಮಗೆ ಎಲ್ಲೆಲ್ಲಿ ಬೇಡಿಕೆ ಇದೆ ಅಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳಿ ಎಂದು ಸೂಚನೆ ಕೊಟ್ಟುಹೋದರೆ ಅದರ ಬಗ್ಗೆ ಇಲಾಖೆಯವರು ಏನು ಕ್ರಮ ಕೈಗೊಂಡರು ಎಂಬುದು ನಮಗೆ ಸರಿಯಾದ ವಿವರಣೆ ಬೇಕು. ಕೇಂದ್ರದ ಕಾರ್ಯದರ್ಶಿಯವರು ಒಂದು ಶೆಡ್ಯೂಲ್ ಕೊಟ್ಟಿದ್ದಾರೆ. ಅದರ ಪ್ರಕಾರ ಇವರು ಕ್ರಮ ತೆಗೆದುಕೊಂಡಿಲ್ಲ. ಸೂಸೈಡ್ಸ್ ಆಗಬೇಕಾದರೆ ಅದೂ ಒಂದು ದುಷ್ಪರಿಣಾಮ.ಇಂಥ ಒಂದು ಸಂದರ್ಭ ಬಹುಶಃ ರಾಜ್ಯದ ಇತಿಹಾಸದಲ್ಲಿ ಇಷ್ಟು ಬೇಗ ಬಂದಿರತಕ್ಕದ್ದು ನಾವು ಹೊಸದಾಗಿ ನೋಡುತ್ತಿದ್ದೇವೆ. ನಾವು ನಾಲ್ಕೈದು ಸಲ ಈ ಸಭೆಗೆ ಬಂದಾಗ ಬಹುಶಃ ಹೊಸ ಸರ್ಕಾರಗಳು ಬಂದಾಗ ನಾವೂ ವಿರೋಧ ಪಕ್ಷದವರೂ ಸೇರಿ ಬಹಳ ನಿರೀಕ್ಷೆ ಇಟ್ಟುಕೊಳ್ಳುತ್ತೇವೆ. ಏನೋ ಇವರ ಸರ್ಕಾರ ಬಂದಿದೆ, ಆಡಳಿತ ಪಕ್ಷ ನಮಗೂ ಸ್ವಲ್ಪ ಸಹಾಯ ಮಾಡಿ ನಮ್ಮ ಕ್ಷೇತ್ರಗಳನ್ನು ಅಭಿವೃದ್ಧಿ ಮಾಡುತ್ತಾರೆ. ಅಭಿವೃದ್ಧಿಯ ಮಂತ್ರವನ್ನು ಇವರು ಜಪಿಸುತ್ತಿರುವುದರಿಂದ ನಾವು ಒಂದು ಹೊಸ ಕನಸನ್ನು ನಿರೀಕ್ಷೆ ಇಟ್ಟುಕೊಂಡೆವು. ಆದರೆ ಕೇವಲ 23 ದಿವಸದಲ್ಲಿ ಆದಂಥ ದುರ್ಘಟನೆಗಳನ್ನು ನಾವು ಈ ರಾಜ್ಯದಲ್ಲಿ ಕಂಡಾಗ ಬಹಶಃ ನಮ್ಮ ನಿರೀಕ್ಷೆ ಬಹಳ ದೂರಕ್ಕೆ ಹೋಗುತ್ತಿದೆ, ಎಲ್ಲೋ ಹೋಗುತ್ತಿದೆ. ಸರ್ಕಾರ ನಿಯಂತ್ರಣ ಇಲ್ಲ. ನಿಯಂತ್ರಣ ತಪ್ಪಿ ಹೋಗುತ್ತಿದೆ ಎಂಬ ಭಾವನೆ ನಮಗೆ ಮತ್ತು ಸಾರ್ವಜನಿಕರಿಗೆ ಬರುತ್ತಿದೆ.

ಆದ್ದರಿಂದ ದಯಮಾಡಿ ಇದಕ್ಕೆ ಅವಕಾಶ ಆಗಬಾರದು. ಇವತ್ತು ನಿಯಮ 69ರ ಪ್ರಕಾರ ನಮ್ಮ ನಾಯಕರೇನು ಒತ್ತಾಯ ತಂದಿದ್ದಾರೆ ಈ ರೀತಿ ಆಗುವ ದುರ್ಘಟನೆಯ ಬಗ್ಗೆ ನಿಷ್ಪಕ್ಷಪಾತವಾಗಿ ಯಾರು ಗೋಲಿಬಾರ್‌ಗೆ ಕಾರಣಕರ್ತರಾದರೋ ಅವರ ಮೇಲೆ ನಿಜವಾದ ಕ್ರಮ ಜರುಗಿಸಲೇ ಬೇಕು. ಇಂಥ ದುರ್ಘಟನೆಗಳು ಆಗಲು ಅವಕಾಶ ಕೊಡಬಾರದು. ಇಲ್ಲದಿದ್ದರೆ ಸರ್ಕಾರಕ್ಕೆ ನಿಯಂತ್ರಣ ಇಲ್ಲ ಎನ್ನುವ ಭಾವನೆ ಸಾರ್ವಜನಿಕರಲ್ಲಿ ಬರುತ್ತದೆ. ಬಹಳ ತೊಂದರೆ ಬಂದಾಗ ಅನೇಕ ನಿಯಮ ಇದೆ. ಯಾವ ರೀತಿ ಗೋಲಿಬಾರ್ ಮಾಡಬೇಕು ಎಂಬ ಬಗ್ಗೆ ಸರ್ಕಾರದಲ್ಲಿ, ಪೊಲೀಸ್ ಇಲಾಖೆಯಲ್ಲಿ ನಿಯಮವಿದೆ. ಅವನ್ನೆಲ್ಲ ಉಲ್ಲಂಘನೆ ಮಾಡಿ ಅವರಿಗೆ ಅನುಕೂಲಕರವಾದ ರೀತಿಯಲ್ಲಿ ವಿಚಾರಗಳನ್ನು ಟ್ವಿಸ್ಟ್ ಮಾಡತಕ್ಕದ್ದು ಸರಿ ಕಾಣುವುದಿಲ್ಲ. ಯಾರೋ ಬಂದೂಕನ್ನು ಕಿತ್ತುಕೊಂಡರು, ಯೋರೋ fire ಮಾಡಿದರು ಎಂಬ ರೀತಿಯಾಗಿ ಬೇಜವಾಬ್ದಾರಿಯುತವಾದ ಹೇಳಿಕೆಯನ್ನು ಕೊಡುವುದರಲ್ಲಿ ಅರ್ಥವಿಲ್ಲ. ಆ ಘಟನೆ ಯಾವ ಕಾರಣಕ್ಕೆ ಆಯಿತು ಎಂಬ ಬಗ್ಗೆ ಜನರ ಒತ್ತಾಯ ಇದೆ. ಅದು ಬಂದಿರತಕ್ಕದ್ದು ಕೋಪೋದ್ರೇಕರಾಗಿ ಸ್ಪಾನ್‌ಟೇನಿಯಸ್ ಆಗಿದೆ. ಆ ಸಂದರ್ಭದಲ್ಲಿ ಸರ್ಕಾರ ಯಾವ ರೀತಿ ನಡೆದುಕೊಳ್ಳಬೇಕೋ, ಯಾವ ರೀತಿಯಾಗಿ ಶಾಂತಯುತವಾಗಿ ಲಾ ಅಂಡ್ ಆರ್ಡರ್ ಕಾಪಾಡುವುದಕ್ಕೆ ಜವಾಬ್ದಾರಿಯುತವಾಗಿ ಆ ಸನ್ನಿವೇಶವನ್ನು ಅವರು ಭೇದಿಸಬೇಕೋ ಆ ರೀತಿ ಭೇದಿಸದೆ ಬೇರೆ ರೀತಿ ಬಲಪ್ರಯೋಗ ಮಾಡತಕ್ಕ ಪ್ರಯತ್ನವನ್ನು ಸ್ಥಳೀಯವಾಗಿರತಕ್ಕ ಪೊಲೀಸ್ ಅಧಿಕಾರಿಗಳು ಮಾಡಿದ್ದರಿಂದಲೆ ಇವತ್ತು ಸರ್ಕಾರಕ್ಕೆ ಈ ಅನಿಶ್ಚಿತವಾದ ಸನ್ನಿವೇಶ ಉದ್ಭವಿಸಿದೆ. ಈ ಸಂದರ್ಭದಲ್ಲಿ ನಾನು ಇಷ್ಟೆ ಸಲಹೆ ಮಾಡತಕ್ಕದ್ದು ಇವತ್ತು ಏನು ತಾವು ಎಲ್ಲಾ ಪಕ್ಷದ ಮುಖಂಡರುಗಳ ನಿಯೋಗವನ್ನು ಕರೆದುಕೊಂಡು ಹೋಗುತ್ತೇವೆಂದು ಹೇಳಿದ್ದೀರಿ, ಮತ್ತೊಂದು ಕಡೆ ಸಂಘರ್ಷವನ್ನು ಮಾಡಬೇಕೆಂದು, ಬೀದಿಗೆ ಇಳಿಯುತ್ತೇವೆಂದು ಹೇಳುತ್ತಿದ್ದೀರಿ. ತಾವು ಮುಖ್ಯ ಮಂತ್ರಿಗಳು, ಅಲ್ಲಿ ಇಲ್ಲದೆ ಇದ್ದರೆ ಹೋಗಲಿ, ಇನ್ನು ಮಳೆ ಬಾರದಿರತಕ್ಕ ಬೇರೆ ರಾಜ್ಯಗಳಿಂದ ತಕ್ಷಣ ಗೊಬ್ಬರ ತರಿಸಬಹುದಾಗಿತ್ತು. ಅಷ್ಟೇ ಅಲ್ಲ ನಮ್ಮ ಹತ್ತಿರ ಬಯೋ ಫರ್ಟಿಲೈಸರ್ಸ್‌ನ sufficient ಆಗಿದೆ. ಯಾವ ಹಿಂಡಿ ಬೇಕು, ಬೇವಿನಿಂಡಿಬೇಕೊ, ಹೊಂಗೆ ಕಡಳೆ ಹಿಂಡಿ ಈ ರೀತಿ ಎಲ್ಲವೂ ಇದೆ. ಬಯೋ ಫರ್ಟಿಲೈಸರ್ಸ್ ಬೇರೆ ಬೇರೆ ಫರ್ಟಿಲೈಸರ್ಸ್‌ನ್ನು ಮಿಕ್ಸ್ ಮಾಡತಕ್ಕ ಕಾಂಪ್ಲೆಕ್ಸ್ ಮಾಡತಕ್ಕ ಅವಕಾಶ ಇವೆ. ಇಂಥ ಕ್ಲಿಷ್ಟವಾದ ಪರಿಸ್ಥಿತಿಯಲ್ಲಿ ಅದನ್ನು ತರಿಸಿ ಸಬ್ಸಿಡಿ ಕೊಟ್ಟು emergency ಇರುವ ಕಡೆ ಏಕೆ ಅದನ್ನು ನಿಮ್ಮ ಕೈಯಿಂದ ಒದಗಿಸಲು ಆಗಲಿಲ್ಲ? ನಮ್ಮ ಹತ್ತಿರ ಬೇಕಾದಷ್ಟು ಹೊಂಗೆ ಹಿಂಡಿ ಇದೆ. ಅದನ್ನು

ಕೇಳುವವರು ಇಲ್ಲ. ಆ ಬಯೋ ಫರ್ಟಿಲೈಸರ್ಸ್‌ನ್ನು ಇಂಥ ಸಂದರ್ಭದಲ್ಲಿ introduce ಮಾಡಬಹುದಾಗಿತ್ತು. ಅದಕ್ಕೆ 50 ಪರ್‌ಸೆಂಟ್ ಸಬ್ಸಿಡಿಯನ್ನು ರೈತರಿಗೆ ಕೊಡಿ. ಏನೂ ತೊಂದರೆ ಇರಲಿಲ್ಲ. ಅದರ ಬಗ್ಗೆ ಇಲಾಖೆಯವರು ಗಮನಹರಿಸಿ ನಿಮಗೆ ಸಲಹೆ ಕೊಡಲಿಲ್ಲ. ಬಯೋಫರ್ಟಿಲೈಸರ್ಸ್ ಇಷ್ಟು ಇರುವಾಗ ಅದನ್ನು ಉಪಯೋಗ ಮಾಡುವ knowledge ಯಾರಿಗೂ ಬರಲಿಲ್ಲ. ಈ ರೀತಿ ಪರಿಸ್ಥಿತಿ ಇದೆ. ಜೊತೆಗೆ ಇವತ್ತು ನಮ್ಮ ಮಂಗಳೂರು ಕೆಮಿಕಲ್ ಫರ್ಟಿಲೈಸರ್ಸ್ (ಎಂ.ಸಿ.ಎಫ್.) ಅವರು experts ಆಗಿದ್ದಾರೆ, ಸಲ್ಫರ್, ಪೊಟ್ಯಾಷ್, ಯೂರಿಯ ಆಗಬಹುದು ಅದನ್ನು ಮಿಕ್ಸ್ ಕಾಂಪ್ಲೆಕ್ಸ್ ಮಾಡಿ within no time ಮಾಡಿಕೊಡಲು ಅವಕಾಶ ಇತ್ತು. ಅದು ನಿಮ್ಮ ಕೈಯಲ್ಲೇ ಇತ್ತು. ಆ ಕಂಪನಿಯ director. . . ಸಲ್ಫರ್, ಪೊಟ್ಯಾಷ್, ಯೂರಿಯಾ ಆಗಬಹುದು, ಕೊರತೆ ಇರಲಿಲ್ಲ. ನಮ್ಮ ಹತ್ತಿರ sufficient ಆಗಿ ಇತ್ತು. ಕಾಂಪ್ಲೆಕ್ಸ್‌ಗೇ ನಮ್ಮ ಹತ್ತಿರ ಕೊರತೆ ಇದ್ದದ್ದು. ಅದಕ್ಕೆ ಪರ್ಯಾಯವಾಗಿ ಇದನ್ನು ಮಾಡಲು ಅವಕಾಶ ಇತ್ತು. ತಮ್ಮ ಇಲಾಖೆಯವರು, ತಾಂತ್ರಿಕ ವರ್ಗದವರು ಇದರ ಬಗ್ಗೆ ತಮಗೆ ಸಲಹೆ ಕೊಡಬೇಕಾಗಿತ್ತು. ಅದರಲ್ಲೂ ವಿಫಲರಾಗಿದ್ದಾರೆ. ಈ ರೀತಿ ವಿಫಲರಾಗಿ ಬಹುಶಃ ಈ ರಾಜ್ಯದ ಜನ ಅದರಲ್ಲೂ ವಿಶೇಷವಾಗಿ ಇವತ್ತು ಎಲ್ಲರೂ ಹೇಳಿದಂತೆ ರೈತರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡಿರಿ. ರೈತರ ಮಕ್ಕಳಾಗಿ ನಾವೂ ಅದಕ್ಕೆ ಸಂತೋಷಪಟ್ಟೆವು. ಆದರೆ ಕೇವಲ 23 ದಿವಸಗಳಲ್ಲಿ ನಡೆದ ಘಟನೆಗಳನ್ನು ನೋಡಿದಾಗ ರೈತರು ನಿಜವಾಗಿಯೂ ಬಹಳ ನೊಂದಿದ್ದಾರೆ. ಈ ವಿಚಾರದ ಬಗ್ಗೆ ನಿಷ್ಪಕ್ಷಪಾತವಾದ ಕ್ರಮ ತೆಗೆದುಕೊಳ್ಳಬೇಕು. ಆ ರೈತರಿಗೆ ನಿಜಕ್ಕೂ ಇವತ್ತೂ ಸಹ ಗೊಬ್ಬರ ಸಿಗುತ್ತಿಲ್ಲ. ಅವರಿಗೆ ಬೇಕಾಗಿರತಕ್ಕ ಅವರ ಬೇಡಿಕೆ ಏನಿದೆ ಅದರ ಪ್ರಕಾರ ಗೊಬ್ಬರವನ್ನು ಒದಗಿಸುವ ಕೆಲಸವನ್ನು ಮಾಡಬೇಕು. ಇದರ ಬಗ್ಗೆ ಸದನದ ಸಮಿತಿಯನ್ನು ಕೇಳಿದ್ದೇವೆ. ಗೋಲಿಬಾರ್ ಬಗ್ಗೆ ತನಿಖೆ ಮಾಡಲು ನ್ಯಾಯಾಂಗ ಸಮಿತಿ ಮಾಡಿದ್ದೀರಿ, ಸಂತೋಷ, ಅದನ್ನು ನಮ್ಮ ನಾಯಕರು ನಾವೆಲ್ಲರೂ ಸ್ವಾಗತ ಮಾಡುತ್ತೇವೆ. ಅದರ ಜೊತೆಗೆ ಸಬ್ಸಿಕ್ವೆಂಟ್ ಆದ ಆತ್ಮಹತ್ಯೆಗಳ ಪ್ರಕರಣಗಳೇನಿದೆ ಮತ್ತು ಗೊಬ್ಬರ ಸಿಗದೆ ಅದು ಸ್ಕೇರ್‌ಸಿಟಿ ಮಾಡಲು ಯಾರು ಕಾರಣಕರ್ತರು ಎನ್ನುವ ಬಗ್ಗೆ ವಿಚಾರ ಮಾಡಬೇಕು ಇದರಲ್ಲಿ ಬಹಳ traders ಶಾಮೀಲಾಗಿದ್ದಾರೆ. ನಿಮಗೂ ನಮಗೂ ಯಾರಿಗೂ ಗೊತ್ತಿಲ್ಲದೆಯೇ ಬಿತ್ತನೆ ಕಾಲದಲ್ಲಿ situation exploit ಮಾಡುವುದರಲ್ಲಿ ಕೆಲವು traders expert ಆಗಿದ್ದಾರೆ. ಅದರ ಬಗ್ಗೆ ಇಲಾಖೆಯವರು ಗಮನ ಕೊಟ್ಟಿಲ್ಲ. Traders ಒಳಗೊಳಗೇ ಅವರಿಗೆ ಎಲ್ಲೆಲ್ಲಿ black market ಮಾಡಲಿಕ್ಕೆ ಅವಕಾಶ ಇರುತ್ತದೋ.

ಅಲ್ಲೆಲ್ಲಾ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ಅದರ ಬಗ್ಗೆ ಸರ್ಕಾರ ಗಮನ ಕೊಡಬೇಕಾಗಿತ್ತು. ಇದೆಲ್ಲದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ರೈತರಿಗೆ ಕೊಡಬೇಕಾಗಿರುವಂತಹ fertilizers sufficient ಆಗಿ ರಾಜ್ಯದಲ್ಲಿ ಕೊಡಿ. ನಮ್ಮ ಬಯಲು ಸೀಮೆ ಪ್ರದೇಶದಲ್ಲೂ ಸಹ ಈಗ ಮಳೆ ಪ್ರಾರಂಭವಾಗುತ್ತಿದೆ. 15 ದಿವಸಗಳಿಂದ ನಮ್ಮಲ್ಲೂ ಮಳೆಯೇ ಇರಲಿಲ್ಲ. ಈಗ ನಮ್ಮ ಕೋಲಾರ ಇರಬಹುದು Bangalore Rural ಇರಬಹುದು. ಚಿಕ್ಕಬಳ್ಳಾಪುರ ಇರಬಹುದು, ತುಮಕೂರು ಇರಬಹುದು, ಈ ಕಡೆಯಲ್ಲೆಲ್ಲಾ ಇದುವರೆವಿಗೂ ಮಳೆ ಇರಲಿಲ್ಲ. ನೂರಕ್ಕೆ 75–80 ಭಾಗ ನಾವು ಮಳೆ ಆಶ್ರಿತ ವ್ಯವಸಾಯ ಮಾಡತಕ್ಕ ರೈತರು. ಇದುವರೆಗೂ ಅವರಿಗೆ fertilizers ಕಡೆ ಗಮನ ಇರಲಿಲ್ಲ. ಇವತ್ತು ರಾತ್ರಿ ಅಥವಾ ಬೆಳಿಗ್ಗೆ ಮಳೆ ಬಂದರೆ, ನಾಳೆಯೇ ನಮಗೆ complex ಗೊಬ್ಬರ ಬೇಕಾಗುತ್ತದೆ. ಅದರ ಕಡೆಯೂ ಸಹ ನೀವು ಹೆಚ್ಚಿಗೆ ಗಮನ ಕೊಡಬೇಕಾದಂತಹ ಅವಶ್ಯಕತೆ ಇದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ಸರಿದೂಗಿಸತಕ್ಕಂಥ ಕೆಲಸವಾಗಬೇಕು. ಸದನ ಸಮಿತಿಗೆ ನಮ್ಮ ನಾಯಕರು ಒತ್ತಾಯ ಮಾಡಿದ್ದಾರೆ, ತಕ್ಷಣ ಸದನ ಸಮಿತಿ ರಚಿಸುವುದಕ್ಕೆ ನಿಷ್ಪಕ್ಷಪಾತವಾಗಿ ಒಪ್ಪಿಕೊಳ್ಳಿ ಅದರಲ್ಲೇನೂ ತೊಂದರೆ ಇಲ್ಲ. ಎಲ್ಲರೂ ಸೇರಿ ರೈತರಿಗೆ ಅನುಕೂಲ ಮಾಡಬೇಕೆಂದೇ ಇದ್ದೇವೆ, ರೈತರಿಗೋಸ್ಕರವೇ ನಾವೆಲ್ಲಾ ಇಲ್ಲಿದ್ದೇವೆ. ತಾವೂ ಸಹ ನಾವು ರೈತರ ಪರವಾಗಿದ್ದೇವೆಂದು ಹೇಳಿದ್ದೀರಿ. ರೈತರಿಗೆ ಆಗಿರತಕ್ಕಂಥ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಪಕ್ಷಾತೀತವಾಗಿ ನಿಯೋಗವೊಂದನ್ನು ಕರೆದುಕೊಂಡು ಹೋಗಬೇಕೆಂದು ತಾವೇನು ಹೇಳಿದ್ದೀರಿ, ಅದಕ್ಕೆ ಕಾರ್ಯಕ್ರವನ್ನೂ ಕೂಡ ಪಕ್ಷಾತೀತವಾಗಿ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಮಾಡಬೇಕೆಂದು ನಾನು ಸನ್ಮಾನ್ಯ ಅಧ್ಯಕ್ಷರ ಮೂಲಕ ತಮ್ಮನ್ನು ಒತ್ತಾಯಿಸುತ್ತೇನೆ. ನಮ್ಮ ನಾಯಕರು ತಂದಿರತಕ್ಕಂಥ ಒತ್ತಾಯವೇನಿದೆ ಅದಕ್ಕೆ ಸಂಪೂರ್ಣವಾದಂತಹ ಬೆಂಬಲವನ್ನು ಕೊಟ್ಟು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ (ಕೊಳ್ಳೇಗಾಲ): ಮಾನ್ಯ ಅಧ್ಯಕ್ಷರೆ, ಸರ್ಕಾರ ಬಂದು 22 ದಿವಸಗಳಾಗಿದೆ. ನಾವು ಬಹಳ ನಿರೀಕ್ಷೆ ಇಟ್ಟಿದ್ದೆವು. ಮಾನ್ಯ ಯಡಿಯೂರಪ್ಪ ಸಾಹೇಬರು ಮುಖ್ಯಮಂತ್ರಿಗಳಾಗಿದ್ದಾರೆ, ಅವರು ರೈತರ ಪರವೆಂದು ಭಾವಿಸಿದ್ದೆವು. ಯಾರಾದರೂ ಒಬ್ಬರು ಮುಖ್ಯಮಂತ್ರಿಗಳಾದರೆ ಅವರು ಯಾರ ಪರವೆಂದು ನಾವು ಹೇಳಬಹುದು. ನಮಗೆ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಮುಖ್ಯಮಂತ್ರಿಗಳಾಗಿದ್ದರೆ ಶೋಷಿತರ ಪರವಾಗಿ ಅವರು ಒಳ್ಳೆಯ ಕೆಲಸ ಮಾಡುತ್ತಾರೆ ಎನ್ನತಕ್ಕಂಥ ನಂಬಿಕೆ ಇತ್ತು ಅದೇ ರೀತಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಲಾಗಿದ್ದಾಗ ಹಿಂದುಳಿದ ವರ್ಗಗಳಿಗೆ ಬಹಳ

ಆಶಾದಾಯಕವೆಂದು ತಿಳಿದುಕೊಂಡಿದ್ದೆವು. ಆದರೆ ಮಾನ್ಯ ಯಡಿಯೂರಪ್ಪ ಸಾಹೇಬರು ಮುಖ್ಯಮಂತ್ರಿಗಳಾದ ಮೇಲೆ ನಿಜವಾಗಿಯೂ ಕೂಡ ರೈತರಿಗೆ ಬಹಳಷ್ಟು ಅನುಕೂಲವಾಗುತ್ತದೆಂದು ಬಹಳ ಆಸೆ ಇಟ್ಟುಕೊಂಡಿದ್ದೆವು. ಆದರೆ ದುರ್ದೈವ 22 ದಿವಸಗಳಲ್ಲಿ 12 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, 1 ಗೋಲಿಬಾರ್ ನಡೆದಿದೆ. ಇದೊಂದು ದಾಖಲೆ. ಇತಿಹಾಸದಲ್ಲಿ ಯಾವಾಗಲೂ ಕೂಡ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದ 22 ದಿವಸಕ್ಕೆ 12 ಜನ ರೈತರ ಆತ್ಮಹತ್ಯೆಯಾಗಿರುವುದು ನಿಜವಾಗಿಯೂ ಒಂದು ರೆಕಾರ್ಡ್ ಆಗಿದೆ. ಯಾವುದೇ ಸರ್ಕಾರ ಬಂದರೂ ಕೂಡ ರೈತರ ಬಗ್ಗೆ ಗಮನ ಹರಿಸುತ್ತಿಲ್ಲ. ಎಲ್ಲರೂ ಚುನಾವಣೆಗೆ ಮುನ್ನ ನಾವು ಮಾತನಾಡುತ್ತೇವೆ, ನಾವು ಅಧಿಕಾರಕ್ಕೆ ಬಂದರೆ ರೈತರಿಗೆ ಒಳ್ಳೆಯ ರೀತಿಯಾದ ಕೆಲಸ ಮಾಡುತ್ತೇವೆ ಎಂಬ ಮಾತನ್ನು ಹೇಳುತ್ತೇವೆ. ಅದೇ ರೀತಿ ವಿರೋಧ ಪಕ್ಷದ ನಾಯಕರಾಗಿದ್ದಾಗ ಮಾನ್ಯ ಯಡಿಯೂರಪ್ಪ ಸಾಹೇಬರು ಇರಬಹುದು ಅಥವಾ ಮಾನ್ಯ ಈಶ್ವರಪ್ಪ ಇರಬಹುದು, ಎಲ್ಲರೂ ಕೂಡ ಬಹಳ ಆರ್ಭಟಿಸುತ್ತಿದ್ದರು. ಆದರೆ ಈಗ ಅವರ ಕೈಯಲ್ಲೇ ಅಧಿಕಾರ ಇದೆ. ಇಂತಹ ಸಂದರ್ಭದಲ್ಲಿ ರೈತರಿಗೆ ಧೈರ್ಯ ಹೇಳತಕ್ಕದ್ದು ಆಗಬೇಕು. ಮಾನ್ಯ ಮುಖ್ಯಮಂತ್ರಿಗಳು ಗೋಲಿಬಾರ್ ನಡೆದಂತಹ ಸ್ಥಳಕ್ಕೆ ಹೋದಾಗ ಅವರು ಅಳುತ್ತಿದ್ದರೆ ತಾವು ಸಹ ಅಳುತ್ತಿದ್ದೀರಿ. ಮನುಷ್ಯತ್ವದಿಂದ ತಮಗೆ ಆ ಅಳು ಬಂದಿದೆ. ಆದರೆ ತಾವು ಅವರ ಕಣ್ಣೀರನ್ನು ಒರೆಸಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕ ನೀವು ಅವರಿಗೆ ಧೈರ್ಯ ಹೇಳಬೇಕಾಗಿತ್ತು. ತಾವೇ ಅತ್ತರೆ ಅವರಿಗೆ ಇನ್ನಷ್ಟು ದುಃಖ ಬರತಕ್ಕದ್ದಾಗುತ್ತದೆ. ತಮಗೆ ಎಲ್ಲಾ ರೀತಿಯ ಅಧಿಕಾರ ಇದೆ. ರೈತರಿಗೆ ಎಲ್ಲಾ ರೀತಿಯಾದಂತಹ support ಮಾಡತಕ್ಕದ್ದು ಆಗಬೇಕು. ಇವತ್ತು ರಸಗೊಬ್ಬರದ ಕೊರತೆ ಬಗ್ಗೆ ಹೇಳುವುದಾದರೆ, ಮೇ ಅಥವಾ ಏಪ್ರಿಲ್ ತಿಂಗಳಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ಬರಬೇಕಾಗಿತ್ತೋ ಅಷ್ಟೆಲ್ಲವೂ ಬಂದಿದೆ. ಆದರೆ ಜೂನ್ ತಿಂಗಳಿನಲ್ಲಿ ತಮಗೆ ಕೊರತೆಯಾಗಿದೆ. ಮುಂಜಾಗ್ರತಾ ಕ್ರಮವಾಗಿ ತಾವೇ ಸಂಬಂಧಪಟ್ಟವರಿಗೆ ಮೇಲ್ಮಟ್ಟದಲ್ಲಿ ತಿಳಿಸಿ, ಆ ಒಂದು ಇಂಡೆಂಟ್ ಅನ್ನು ತರಿಸಿಕೊಂಡು ಸಮರ್ಪಕವಾಗಿ ವಿತರಣೆ ಮಾಡಿದ್ದರೆ, ಯಾವುದೇ ಈ ರೀತಿಯಾದಂತಹ ಘಟನೆ ಆಗುತ್ತಿರಲಿಲ್ಲ. ತಾವು ಸರಿಯಾದ ರೀತಿಯಲ್ಲಿ ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡಿ ಸೂಕ್ತ ಸಮಯಕ್ಕೆ ಇವತ್ತು ರಸಗೊಬ್ಬರದ ಪೂರೈಕೆ ಮಾಡಬೇಕಾಗಿತ್ತು. ಇದು ಸರ್ಕಾರದ ನಿಷ್ಕ್ರಿಯತೆಯನ್ನು ತೋರುತ್ತದೆ. ನಾನೂ ಕೂಡ ನಮ್ಮ ಚಾಮರಾಜನಗರದಲ್ಲಿ ಈ ಕೊರತೆ ಸಂಭವಿಸಿದಂತಹ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಜೊತೆಯಲ್ಲಿ ಕಳೆದ ಐದು ದಿವಸದ ಹಿಂದೆ ಫೋನ್ ಮಾಡಿ

ಮಾತನಾಡಿದೆ. ನಮ್ಮಲ್ಲಿ ರಸಗೊಬ್ಬರದ ಕೊರತೆ ಇದೆ, DAP ಗೊಬ್ಬರ ಇಲ್ಲ, ಪೊಟಾಷ್ ಕೊರತೆ ಇದೆ ಎಂಬುದನ್ನು Director of Agriculture ಜೊತೆಗೂ ಮಾತನಾಡಿದೆ ಮತ್ತು ತಮ್ಮ ಜೊತೆಗೂ ಕೂಡ ಮಾತನಾಡಿದೆ. ಆದರೆ ಇದುವರೆಗೂ ಕೂಡ ನಮ್ಮ ಜಿಲ್ಲೆಗೆ ರಸಗೊಬ್ಬರದ ಪೂರೈಕೆ ಆಗಿಲ್ಲ. ತಕ್ಷಣ ಸರ್ಕಾರ ಕೆಲಸ ಮಾಡಬೇಕು. ಇಡೀ ದೇಶದಲ್ಲಿ ಪ್ರಪ್ರಥಮ ಬಾರಿಗೆ ಮುಂಗಾರು ಮಳೆ ನಮ್ಮ ಚಾಮರಾಜನಗರ ಜಿಲ್ಲೆ ಮತ್ತು ಮೈಸೂರು ಜಿಲ್ಲೆಗೆ ಆಗಮಿಸುತ್ತದೆ. ಇಂತಹ ಸಮಯ ಮತ್ತು ಸಂದರ್ಭದಲ್ಲಿ ನಮ್ಮಲ್ಲಿ ಗೊಬ್ಬರವಿಲ್ಲವೆಂದರೆ ತೊಂದರೆಯಾಗುತ್ತದೆ. ಇವತ್ತು ಮಳೆ ಎಂದರೆ ಒಂದು ರೀತಿಯಲ್ಲಿ gambling ಇದ್ದಂತೆ. ಮಳೆ ಬರಲೂ ಬಹುದು, ಬಾರದಿರಲೂ ಬಹುದು. ಮಳೆ ಬಂದಂತಹ ಸಮಯದಲ್ಲಿ ರೈತರಿಗೆ ಬೀಜ ಮತ್ತು ಗೊಬ್ಬರವನ್ನು ಕೊಡತಕ್ಕಂಥದ್ದು ಸರ್ಕಾರದಿಂದ ಆಗಬೇಕು. ದಯಮಾಡಿ ತಾವು ತಮ್ಮ ನಿಷ್ಕ್ರಿಯತೆಯನ್ನು ತೋರಬಾರದು. ಸಕಾಲದಲ್ಲಿ ಗೊಬ್ಬರಗಳನ್ನು ಪೂರೈಸತಕ್ಕಂಥದ್ದು ಆಗಬೇಕು ಎನ್ನುವುದು ನನ್ನ ಕಳಕಳಿಯ ಮನವಿ. ತಾವು ಅಂಕಿ ಅಂಶಗಳನ್ನು ಮಂಡಿಸಿದ್ದೀರಿ. ಮಾತೆತ್ತಿದರೆ ತಾವು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತೀರಿ. ದಯಮಾಡಿ ತಾವು ಮಾತನಾಡತಕ್ಕಂಥ ಸಮಯದಲ್ಲಿ ಯಾವ್ಯಾವ ತಿಂಗಳಿನಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟೆಷ್ಟು ಗೊಬ್ಬರಗಳು ಬಂದಿವೆ? ಎಂಬ ಅಂಕಿ ಅಂಶಗಳನ್ನು ತಾವು ಸದನದ ಮುಂದೆ ಇಟ್ಟಾಗ ಜನತೆಗೂ ಕೂಡ ಗೊತ್ತಾಗುತ್ತದೆ. ಇದರಲ್ಲಿ ಯಾರ ತಪ್ಪು ಇದೆ ಎಂಬುದು ಸಾರ್ವಜನಿಕರಿಗೆ ಗೊತ್ತಾಗಬೇಕು. ನೀವು ಏನು ಮಾಡುತ್ತಿದ್ದೀರಿ ಎಂದರೆ, ರೈತರು ಈಗ ಆತ್ಮಹತ್ಯೆ ಮಾಡಿಕೊಂಡರೆ, ಅವರ ಆತ್ಮಹತ್ಯೆ ನಿಜವಾಗಿಯೂ ಕೂಡ ಸಾಲದಿಂದ ಅಥವಾ ಗೊಬ್ಬರದಿದಂದ ಆಗಿಲ್ಲ. ಅವರದು ಆತ್ಮಹತ್ಯೆಯೇ ಅಲ್ಲ, ಅವರು ಬೇರೆ ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಅಂಶವನ್ನು ತಾವು ಹೇಳುತ್ತೀರಿ. ಕೆಲವು ಜಿಲ್ಲೆಗಳಲ್ಲಿ ಅಧಿಕಾರಿಗಳನ್ನು ಕಳುಹಿಸಿ, ಮನೆಯವರಿಗೆ 'ಈ ಆತ್ಮಹತ್ಯೆ ರಸಗೊಬ್ಬರದಿಂದ ಅಥವಾ ಇನ್ನೊಂದರಿಂದ ಆಗಿಲ್ಲ' ಎಂದು ಹೇಳುವಂತೆ ಹಿಂಸೆ ಕೊಡಲಾಗುತ್ತಿರುವುದು ಬೆಳಕಿಗೆ ಬಂದಿದೆ. ಸರ್ಕಾರ ಸರಿಯಾದ ರೀತಿಯಲ್ಲಿ ಸ್ಪಂದಿಸಿ ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ಮತ್ತು ಬೀಜಗಳನ್ನು ವಿತರಣೆ ಮಾಡಬೇಕು. ನಮ್ಮ ವಿರೋಧ ಪಕ್ಷದ ನಾಯಕರು ಏನು ಇದು ಸರಿಯಾದ ರೀತಿಯಲ್ಲಿ ತನಿಖೆಯಾಗಬೇಕು, ಇದಕ್ಕಾಗಿ ಜಂಟಿ ಸದನದ ಸಮಿತಿಯಿಂದ ತನಿಖೆಯಾಗಬೇಕೆಂದು ಹೇಳಿದ್ದಾರೆ. ತಕ್ಷಣವೇ ಆ ಸದನ ಸಮಿತಿಯಿಂದ ತನಿಖೆಯಾದರೆ ನ್ಯಾಯ ಎಂಬುದು ಬೆಳಕಿಗೆ ಬರುತ್ತದೆ ಎಂದು ತಿಳಿಸಿ ನನಗೆ ಮಾತನಾಡಲಿಕ್ಕೆ ಅನುಮತಿ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ

ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಒಂದು ಪ್ರಕಟಣೆ ಇದೆ

7. ಪ್ರಕಟಣೆ

ವಿಷಯ: ಜನತಾದಳ (ಜಾತ್ಯಾತೀತ) ಪಕ್ಷದ ಶಾಸಕಾಂಗ ಪಕ್ಷದ ಪದಾಧಿಕಾರಿಗಳ ಆಯ್ಕೆ ಬಗ್ಗೆ.

***

ಜನತಾದಳ (ಜಾತ್ಯಾತೀತ) ಪಕ್ಷದ ರಾಜ್ಯಾಧ್ಯಕ್ಷರು ದಿನಾಂಕ 23ನೇ ಜೂನ್ 2008 ರಂದು ನೀಡಿರುವ ಪತ್ರಗಳಲ್ಲಿ ಕೋರಿರುವಂತೆ ಕೆಳಕಂಡವರನ್ನು ಜನತಾ ದಳ (ಜಾತ್ಯಾತೀತ) ಶಾಸಕಾಂಗ ಪಕ್ಷದ ಪದಾಧಿಕಾರಿಗಳಾಗಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಶ್ರೀ ಹೆಚ್. ಡಿ. ಕುಮಾರ ಸ್ವಾಮಿ ... *ಶಾಸಕಾಂಗ ಪಕ್ಷದ ನಾಯಕರು*

ಶ್ರೀ ಉಮೇಶ್ ಕತ್ತಿ ... *ಶಾಸಕಾಂಗ ಪಕ್ಷದ ಉಪ ನಾಯಕರು*

ಶ್ರೀ ವೆಂಕಟರಾವ್ ನಾಡಗೌಡ ... *ಸಚೇತಕರು*

ಈಗ ಸದನವನ್ನು ನಾಳೆ ಬೆಳಿಗ್ಗೆ 10–30 ಘಂಟೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ರಾತ್ರಿ 6 ಘಂಟೆ 57 ನಿಮಿಷಗಳಿಗೆ ಪುನಃ ನಾಳೆ ಬೆಳಿಗ್ಗೆ 10–30 ಘಂಟೆಗೆ ಸೇರುವಂತೆ ಮುಂದೂಡಲಾಯಿತು)